ಏನಿದೆ ಅದು ಸ್ಟೇಟ್‌ಮೆಂಟ್ ಆಫ್‌ಫ್ಯಾಕ್ಟ್ಸ್ ಆಗಿರುತ್ತದೆ. ಯಾರ ಮುಖಕ್ಕೆ ಮಸಿ ಬಳಿಯುವುದಕ್ಕಾಗಲೀ ಯಾರನ್ನು ಹೊಗಳುವುದಕ್ಕಾಗಲೀ ನಾನು ಇದನ್ನು ಇಡುತ್ತಿಲ್ಲ. It is a statement of facts, which ought to be in proper form so that Hon' Members and the public can draw inference out of it. ಅದನ್ನು ನಾನು ಇಡುತ್ತೇನೆ. ತಾವು ಈ ಬೇಡಿಕೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಕ್ಕಾಗಿ ನಾನು ಮತ್ತೊಮ್ಮೆ ತಮ್ಮನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೮೯-೯೦ನೇ ಸಾಲಿನ ಅನುಪೂರಕ ಅನುದಾನಗಳ (ಮೊದಲನೆ ಕಂತು) ಬೇಡಿಕೆಗಳಿಗೆ ಮಂಜೂರಾತಿ ನೀಡುವುದು".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ೧೯೮೯-೯೦ನೇ ಸಾಲಿನ ಅನುಪೂರಕ ಅನುದಾನಗಳ (ಮೊದಲನೇ ಕಂತು) ಬೇಡಿಕೆಗೆ ಮಂಜೂರಾತಿ ನೀಡಲಾಯಿತು.)

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೇ ರಾಜ್ಯ ವಿಧಾನ ಮಂಡಲದಲ್ಲಿ ಕರ್ನಾಟಕದ ರಾಜ್ಯಪಾಲರು ಮಾಡಿದ ಭಾಷಣದ ವಂದನಾ ನಿರ್ಣಯದ ಮೇಲೆ ನನ್ನ ಅನಿಸಿಕೆಗಳನ್ನು ಹೇಳಬೇಕೆಂದು ತಮ್ಮ ಅನುಮತಿಯನ್ನು ಪಡೆದು ಎದ್ದು ನಿಂತಿದ್ದೇನೆ. ಒಟ್ಟಾರೆ ಈ ಭಾಷಣವನ್ನು ನೋಡಿದಾಗ ನನಗನಿಸಿದ್ದು ಅಪೂರ್ಣವಾದ, ತಾತ್ಕಾಲಿಕವಾದ, ಮತ್ತು ಮಧ್ಯಂತರವಾದ ಮಂತ್ರಿಮಂಡಲ, ಅವಸರಅವಸರವಾಗಿ ತಯಾರಿಸಿದ ನೀರಸವಾದ ರಾಜ್ಯಪಾಲರ ಭಾಷಣವೆಂದು ಹೇಳಿದರೆ ವಿಧಿ ಇಲ್ಲ. ರಾಜ್ಯಪಾಲರ ಭಾಷಣಕ್ಕೆ ಎಷ್ಟು ಮಾನ್ಯತೆ ಎಷ್ಟು ಗೌರವ ಸಲ್ಲಬೇಕಾಗಿತ್ತೋ ಆದನ್ನು ಈ ಮಂತ್ರಿಮಂಡಲ ಸಲ್ಲಿಸಿಲ್ಲವೆಂದು ಆರೋಪ ಮಾಡುತ್ತೇನೆಂದು ಈ ಸರ್ಕಾರ ಭಾವಿಸಬಾರದು. ಮಂತ್ರಿಮಂಡಲ ನವೆಂಬರ್ ೩೦ನೇ ತಾರೀಖು ವಾಸ್ತವವಾಗಿ ಬಂದರೂ ಕೂಡ ಸರ್ಕಾರ ತನ್ನ ಕಾರ್ಯಾರಂಭ ಮಾಡಿದ್ದುದು ೧೯೮೯ರ ಏಪ್ರಿಲ್ ೨೧ನೇ ತಾರೀಖು. ಈ ಕಾರಣದಿಂದ ಚಾಲ್ತಿ ವರ್ಷದಲ್ಲಿ ಆಗಿರತಕ್ಕಂಥ ಎಲ್ಲಾ ಹಾಗುಹೋಗುಗಳಿಗೂ ಜವಾಬ್ದಾರಿ, ಹೊಣೆಗಾರಿಕೆಯನ್ನು ತಾವು ಹೊತ್ತುಕೊಳ್ಳಬೇಕಾಗುತ್ತದೆ. ಇದಕ್ಕೆ ಬಹುಶಃ ನಾನು ಒಂದೆರಡು ಉದಾಹರಣೆಗಳನ್ನು ತಮಗೆ ಹೇಳಬೇಕಾಗುತ್ತವೆ. ರಾಜ್ಯಪಾಲರ ಆಡಳಿತ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಾಗ ಮಾನ್ಯ ರಾಜ್ಯಪಾಲರು ಒಂದು ನಿರ್ಣಯವನ್ನು ತೆಗೆದುಕೊಂಡರು. ಅದು ಬಸ್ ದರ ಏರಿಸತಕ್ಕಂಥ ನಿರ್ಣಯ. ಜೂನ್ ೧೮ನೇ ತಾರೀಖು ಇಂದಿನ ಮುಖ್ಯಮಂತ್ರಿಗಳು ಅಂದಿನ ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಆದ ವೀರೇಂದ್ರಪಾಟೀಲ್‌ರವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಅದು ದಿನಾಂಕ ೧೯-೬-೧೯೮೯ರಂದು ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಅದು ಈ ರೀತಿ ಇದೆ.

"The Governor should not take policy decisions like enhancing bus fares. Karnataka Pradesh Congress (I) President Sri Veerendra Patil said here to-day addressing a Press Conference at Hubli. He said he would like the Governor Sri. P. Venkatasubbaiah to leave all major decisions to an elected Government. He was reacting to the hike in the KSRTC bus fares announced recently."

ಈ ಮಾತನ್ನು ಹೇಳಿದ ತಕ್ಷಣವೇ ರಾಜ್ಯಪಾಲರು ಏರಿಸಿದ್ದ ಬಸ್ ದರಗಳನ್ನು ಹಿಂದಕ್ಕೆ ಪಡೆದರು. ಈ ಮಾತನ್ನು ಹೇಳುವುದಕ್ಕಿಂತ ಮುಂಚಿತವಾಗಿ ಏರಿಸಿದ್ದ ಬಸ್ ದರಗಳ ಟಿಕೇಟ್‌ಗಳನ್ನು ಅಚ್ಚು ಹಾಕಿದ್ದು ಅಚ್ಚಾದ ಟಿಕೇಟ್‌ಗಳು ಎಲ್ಲಾ ವಿಭಾಗಗಳಿಗೂ ಹೋಗಿದ್ದುವು ಎಂದು ನಾನು ತಿಳಿದುಕೊಂಡಿದ್ದೇನೆ. ಇಂತಹ ಪಾಲಿಸಿಗಳನ್ನು ತೀರ್ಮಾನ ಮಾಡುವಾಗ, ಕಟ್ಟುನಿಟ್ಟಾಗಿ ಮಾಡುವಾಗ ರಾಜ್ಯಪಾಲರಿಗೆ ಈ ಅಧಿಕಾರ ಇದೆಯೋ ಇಲ್ಲವೇ ಎನ್ನುವುದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಇಲ್ಲಿ ಪ್ರಶ್ನೆ ಮಾಡಬೇಕಾದದ್ದು ಏನೆಂದರೆ ಕನ್ನಡದಲ್ಲಿ ಒಂದು ಗಾದೆ ಇದೆ ಅದೇನೆಂದರೆ ನೀನು ಜಿಗಟಿದ ಹಾಗೆ ಮಾಡು ನಾನು ಅತ್ತ ಹಾಗೆ ಮಾಡುತ್ತೇನೆ ಎಂದು. ಮೊದಲು ಬಸ್ ದರಗಳನ್ನು ಏರಿಸುತ್ತೇವೆಂದು ಹೇಳಿದರು ಈ ಮಾತನ್ನು ಹೇಳಿದ ತಕ್ಷಣವೇ ರಾಜ್ಯಪಾಲರು

ತಮ್ಮ ನಿರ್ಣಯವನ್ನು ವಾಪಸ್ಸ್ ಪಡೆದುಕೊಂಡರು. ಅಷ್ಟು ಹೊತ್ತಿಗೆ ಟಿಕೇಟ್‌ಗಳನ್ನು ಅಚ್ಚು ಹಾಕಿಸಿದ್ದು ಆಗಿತ್ತು. ಸಾಕಷ್ಟು ವೆಚ್ಚ ಮಾಡಿ ಆಮೇಲೆ ಇದನ್ನು ವಾಪಸ್ಸು ಪಡೆದುಕೊಂಡರು. ಇದು ಒಂದು ಪ್ರಕರಣ ಅಲ್ಲ. ಬಸ್ ರೂಟ್‌ಗಳನ್ನು ವಜಾಮಾಡಬೇಕೆಂದು ರಾಜ್ಯಪಾಲರು, ಆದೇಶ ನೀಡಿದ್ದರು. ಯಾವ್ಯಾವ ರೂಟ್‌ನಲ್ಲಿ ಬಸ್ಸು ಹೋಗುತ್ತಿದೆ ಅವುಗಳನ್ನೆಲ್ಲಾ ವಾಪಸ್ಸು ತರಿಸಿಕೊಳ್ಳುವುದು ಮತ್ತೇ ಇದು ಸರಿಯಲ್ಲವೆಂಬ ಕಾಂಗ್ರೆಸ್ (ಐ) ಪಕ್ಷದವರು ಹೇಳುವುದು, ನಂತರ ಅವರು ಹೇಳುವುದು ಸರಿ ಎಂದು ಹೇಳಿ ವಾಪಸ್ಸು ತೆಗೆದುಕೊಳ್ಳುವುದು. ಇಂತಹ ಕೆಲಸಗಳನ್ನು ಮಾಡಿದ್ದಾರೆ. ನಾನು ಕೇವಲ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಟ್ಟಿದ್ದೇನೆ. ಇದನ್ನು ಹೇಳುವುದಕ್ಕೆ ಕಾರಣವೇನೆಂದರೆ ನಿಮ್ಮ ಸರ್ಕಾರ ೧೯೮೯ನೇ ಇಸವಿ ಏಪ್ರಿಲ್ ೨೧ನೇ ತಾರೀಖು ಅಸ್ತಿತ್ವದಲ್ಲಿ ಇತ್ತು ಎಂಬ ಕಾರಣಕ್ಕಾಗಿ ಹೇಳುತ್ತಿದ್ದೇನೆ. ನಾನು ಏನು ಆಸೆ ಇಟ್ಟುಕೊಂಡಿದ್ದೆ ಎಂದರೆ ೬-೭ ವರ್ಷಗಳ ತರುವಾಯ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಈಗ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಕಾಂಗ್ರೆಸ್ ಪಕ್ಷದವರು ಚುನಾವಣಾ ಪ್ರಣಾಳಿಕೆಯನ್ನು ಹೊರತಂದಿದ್ದಾರೆ ಆ ಪ್ರಣಾಳಿಕೆಯನ್ನು ಹೊಂದಿಸಿಕೊಂಡು ರಾಜ್ಯಪಾಲರ ಭಾಷಣದಲ್ಲಿ ನೀತಿ ನಿರೂಪಣೆಯನ್ನು ಮಾಡುತ್ತಾರೆ, ಮುಂದೆ ಸರ್ಕಾರ ಹೇಗೆ ನಡೆಯುತ್ತದೆ, ಉದ್ದೇಶಗಳು ಏನು ಇವೆಲ್ಲವನ್ನೂ ಅಳವಡಿಸಿಕೊಂಡು ರಾಜ್ಯಪಾಲರ ಭಾಷಣವನ್ನು ಮಾಡುತ್ತಾರೆಂದು ನಾನು ಬಹಳ ಆಸಕ್ತಿಯಿಂದ ಕೇಳಿದೆ, ಮತ್ತು ಓದಿದೆ, ಆದರೆ, ಎಲ್ಲಿಯೂ ಕೂಡ ಒಂದಕ್ಷರವು ನೀತಿ ನಿರೂಪಣೆಯ ಬಗ್ಗೆ ಇದರಲ್ಲಿ ಇಲ್ಲ. ಇಂತಹ ಕೆಲಸಗಳನ್ನು ಮಾಡುತ್ತೇವೆ, ಇದು ನಮ್ಮ ಉದ್ದೇಶ. ಇದು ನಮ್ಮ ಗುರಿ ಎಂದಾದರೂ ಹೇಳಬೇಕಾಗಿತ್ತು. ಆದರೆ ಈ ಭಾಷಣದಲ್ಲಿ ಅದನ್ನು ಹೇಳಲಿಲ್ಲ. ಕೇಂದ್ರದಲ್ಲಿ ಒಂದು ಹೊಸ ಸರ್ಕಾರ ಬಂತು ಮೊದಲನೆಯ ದಿವಸವೇ ಬೆಲೆ ಇಳಿಸುತ್ತೇವೆಂದು ಹೇಳಿದರು. ಹಾಗೆ ಹೇಳಿದ ತಕ್ಷಣವೇ ಕಾರ್ಯ ಪ್ರವೃತ್ತರಾದರು. ತಕ್ಷಣವೇ ಕೇಂದ್ರದ ಮಂತ್ರಿ ಮಂಡಲವು ಒಂದು ಸಮಿತಿಯನ್ನು ಮಾಡಿತು. ಆ ಮಂತ್ರಿಮಂಡಲದ ಸಮಿತಿಯು ತಕ್ಷಣವೇ ವಿಮರ್ಶೆ ಮಾಡಿ, ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಪ್ರಾರಂಭ ಮಾಡಿದರು. ಪರಿಣಾಮವಾಗಿ ರಾಷ್ಟ್ರದಲ್ಲಿ ಬೆಲೆಗಳು ಹಿಡಿತದಲ್ಲಿವೆ, ಈ ರೀತಿ ನೀವು ಏನು ಮಾಡಿದ್ದೀರಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಏನಾದರೂ ಕಾರ್ಯಕ್ರಮ ಇದ್ದರೆ ಅದನ್ನು ತಿಳಿಸಬೇಕಾಗಿತ್ತು. ಕಾರ್ಯಕ್ರಮ ಇಲ್ಲದೆ ಹೇಗೆ ಕೆಲಸಗಳನ್ನು ಮಾಡುತ್ತೀರಿ, ಆದ್ದರಿಂದಲೇ ಕೇಂದ್ರದಲ್ಲಿ ನಾನು ಏನಾಗಿದೆ ಎಂಬುದನ್ನು ಹೇಳಿದೆ.

ಶ್ರೀ ವಿನಯ ಕುಮಾರ್ ಸೊರಕೆ.— ಹಿಂದೆ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ಆ ಸರ್ಕಾರ ಒಳ್ಳೆಯ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಿ ಬಿಟ್ಟುಹೋಗಿದ್ದಾರೆ. ಆದರೆ ಇಲ್ಲಿ ನಿಮ್ಮ ಸರ್ಕಾರದವರು, ದುರಸ್ತಿ ಮಾಡದೇ ಇರತಕ್ಕ ಸ್ಥಿತಿಯಲ್ಲಿ ನಮಗೆ ಬಿಟ್ಟು ಹೋಗಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.— ತಾವು ಎರಡನೆಯ ಬಾರಿ ಬಂದಿದ್ದೀರಿ. ಇಲ್ಲಿದ್ದು ಅಲ್ಲಿಗೆ ಹೋಗಿದ್ದೀರಿ. ಸ್ವಲ್ಪ ಕಾಯಿರಿ ಆಮೇಲೆ ನಿಮ್ಮ ವ್ಯಾಖ್ಯಾನ ಮಾಡಲು ನನ್ನದೇನೂ ಅಭ್ಯಂತರವಿಲ್ಲ. ಈ ರಾಜ್ಯಪಾಲರ ಭಾಷಣ ಕರ್ನಾಟಕ ರಾಜ್ಯದ ಜನರಲ್ಲಿ ಏನಾದರೂ ಒಂದು ಹೊಸ ಭರವಸೆಯನ್ನು ಮೂಡಿಸುತ್ತದೆ, ಬೇಕಾದಷ್ಟು ಆಶೋತ್ತರಗಳನ್ನು ಇಟ್ಟುಕೊಂಡು ಈ ಸರ್ಕಾರ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೆ. ೧೭೭ ಜನ ಸಂಖ್ಯೆಯನ್ನು ಪಡೆದುಕೊಂಡಿದ್ದೀರಿ. ಓಟಿಗೂ ಸೀಟಿಗೂ ಸಂಬಂಧವಿಲ್ಲ. ಕಳೆದಸಾರಿಗಿಂತ ಕಡಿಮೆ ಓಟು ಈ ಸಾರಿ ಬಂದಿದೆ. ಆದರೆ ಸೀಟು ಜಾಸ್ತಿ ಬಂದಿದೆ. ನಿಮಗೆ ಸೀಟು ಏತಕ್ಕೆ ಬಂತು ಎಂಬುದನ್ನು ಹೇಳುತ್ತೇನೆ. ಸಂಖ್ಯೆ ಇದೆ ಅಂದರೆ ಅಲ್ಲಿ ಸದೃಢ ಸರ್ಕಾರ ಇದೆ ಎಂಬ ಅರ್ಥ ಅಲ್ಲ. ೧೯೮೪ರಲ್ಲಿ ಕೂಡ ಇದೇ ಪ್ರಮಾಣದ ಅಥವಾ ಸ್ವಲ್ಪ ಹೆಚ್ಚು ಕಡಿಮೆ ಸಂಖ್ಯೆ ಕೇಂದ್ರ ಸರ್ಕಾರದಲ್ಲಿತ್ತು, ಆದರೆ ಮುಂದೆ ಏನಾಯಿತು?

ಆರ್.ಎನ್. ನಾಯಕ್.— ೧೯೮೫ರಲ್ಲಿ ನಿಮ್ಮ ಪಕ್ಷ ಸರ್ಕಾರ ರಚಿಸಿದಾಗ ೧೩೯ ಸಂಖ್ಯೆ ಇತ್ತಲ್ಲಾ ಹೇಗೆ ಏನು? ಅದೇ ರೀತಿ ಈಗಲೂ ಆಗುತ್ತದೆ ಏನು?

ಶ್ರೀ ಡಿ. ಬಿ. ಚಂದ್ರೇಗೌಡ.— ಸರಿ ಸುಮಾರು ಈಗಿರುವಷ್ಟೇ ನಾಲ್ಕನೇ ಮೂರು ಭಾಗ ಸಂಖ್ಯೆ ೧೯೮೪ರಲ್ಲೂ ಕೇಂದ್ರ ಸರ್ಕಾರದಲ್ಲೂ ಇತ್ತು. ಇವತ್ತು ಅದು ಎಲ್ಲಿದೆ? ಎನ್ನುವುದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ.— ಕಾಂಗ್ರೆಸ್ ಪಕ್ಷದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಇದ್ದಾರೆ. ಅಂದರೆ ಜನರು ತಪ್ಪು ಮಾಡಿದ್ದಾರೆಂದು ನಿಮ್ಮ ಅರ್ಥವೇ?

ಶ್ರೀ ಡಿ. ಬಿ. ಚಂದ್ರೇಗೌಡ.— ನಿಮಗೆ ಸೀಟು ಜಾಸ್ತಿ ಬಂದಿರಬಹುದು. ಆದರೆ, ಓಟು ಜಾಸ್ತಿ ಬಂದಿಲ್ಲ. ೪೦ ಪರ್ಸೆಂಟ್ ಮಾತ್ರ ನಿಮಗೆ ಓಟು ಬಂದಿದೆ.

ಶ್ರೀ ಆರ್.ಎನ್. ನಾಯಕ್.— ಜನ ತಪ್ಪು ಮಾಡಲಿಲ್ಲ. ನೀವು ತಪ್ಪು ಮಾಡಿಕೊಂಡು ನಮಗೆ ಅನುಕೂಲವಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ — ಜನ ನಿಮಗೆ ಪೂರ್ಣವಾದ ಅಧಿಕಾರವನ್ನು ಕೊಟ್ಟಿಲ್ಲ. ಸೀಟುಗಳು ಇದೆ ಅಷ್ಟೇ. ಆದರೆ, ಓಟುಗಳು ಹೆಚ್ಚು ಬಂದಿಲ್ಲ.

ಶ್ರೀ ಆರ್.ಎನ್. ನಾಯಕ್.— ಸಂಖ್ಯೆ ಹೆಚ್ಚಿಗೆ ಬರುವುದಕ್ಕೆ ಮುಖ್ಯ ಕಾರಣ ಎಂದರೆ ದೇವೇಗೌಡರು.

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಹೇಳಬೇಕೆಂದು ಇದ್ದ ಮಾತನ್ನು ನೀವೇ ಹೇಳಿ ನನಗೆ ಹಗುರ ಮಾಡಿದಿರಿ.

ಶ್ರೀ ಆರ್. ನಾರಾಯಣ.— ಈ ಸಾರಿ ನಮ್ಮ ಪಕ್ಷವೇ ಅಧಿಕಾರಕ್ಕೆ ಬರುತ್ತಿದೆಂದು ನಮಗೆ ಗೊತ್ತಿತ್ತು. ಆದರೆ, ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದು ಬರುವುದಕ್ಕೆ ಮಾನ್ಯ ದೇವೇಗೌಡರೇ ಕಾರಣ.

ಶ್ರೀ ಬಿ. ರಾಜೂಗೌಡ — ನಮ್ಮ ರಾಜ್ಯದಲ್ಲಿ ನಡೆದಿರತಕ್ಕ ಚುನಾವಣಾ ಸಮೀಕ್ಷೆ ನೋಡಿದಾಗ ಜನತಾ ಪಕ್ಷ ಮತ್ತು ಜನತಾ ದಳ ಪಕ್ಷಗಳು ಪಡೆದಿರತಕ್ಕಂಥ ಮತಗಳಿಗಿಂತ ಹೆಚ್ಚು ಮತವನ್ನು ಕಾಂಗ್ರೆಸ್ ಪಕ್ಷ ಪಡೆದುಕೊಂಡಿದೆ. ಕಾಂಗ್ರೆಸ್ ಪಕ್ಷವು ಒಟ್ಟು ೪೨ ಪರ್ಸೆಂಟ್‌ನಷ್ಟು ಮತವನ್ನು ಪಡೆದಿದೆ. ಜನತಾ ಮತ್ತು ಜನತಾ ದಳ ಪಕ್ಷಗಳು ಎರಡು ಸೇರಿದರೂ ಇಷ್ಟು ಮತವನ್ನು ಪಡೆದಿಲ್ಲ.

ಶ್ರೀ ಆರ್. ನಾರಾಯಣ.— ನೀವು ನಡೆಸಿದ ರಾಜಕೀಯ ನೀತಿಯಿಂದ ನಿಮ್ಮ ಪಕ್ಷ ಸೋಲುವುದಕ್ಕೆ ಕಾರಣವಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ.— ನಾನು ಮಾತನಾಡಬೇಕೋ? ನಿಲ್ಲಿಸಲೋ?

ಶ್ರೀ ಹಂಪನ ಗೌಡ ಬಾದರ್ಲಿ.— ಅವರಿಗೆ ಜಾಸ್ತಿ ಜನರ ಬೆಂಬಲ ಇದೆ. ಅವರೇ ಸದನವನ್ನು ನಡೆಸಿಕೊಂಡು ಹೋಗಲಿ. ನಾವು ಹೊರಗೆ ಹೋಗಿಬಿಡೋಣ.

ಶ್ರೀ ಆರ್.ಎನ್. ನಾಯಕ್.— ನಾವು ಏನಾದರೂ ಹೇಳಿದರೆ ತಡೆದುಕೊಳ್ಳುವ ಶಕ್ತಿ ನಿಮ್ಮ ನಾಯಕರಿಗಿದೆ. ನೀವು ಏಕೆ ಹೊರಗೆ ಹೋಗಬೇಕೆಂದು ಹೇಳುತ್ತೀರಿ? ಅವರಿಗೆ ಎಲ್ಲಾ ಗೊತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ.— ಹೌದು, ನಿಮ್ಮ ಶಕ್ತಿಯಿಂದ ನೀವು ಬಂದಿಲ್ಲ. ನಾವು ಒಡೆದು ಹೋದುದರಿಂದ ನೀವು ಆರಿಸಿ ಬಂದಿದ್ದೀರಿ. ಇದನ್ನು ಒಪ್ಪಿಕೊಳ್ಳಬೇಕು. ನಮ್ಮದು ಬಾಲ ಮಾತ್ರ ಹೋಗಿದೆ, ತಾವು ಅದಕ್ಕೆ ಏತಕ್ಕಾಗಿ ಸಂಕಟಪಡುತ್ತೀರಿ? ಆದರೆ ನಿಮ್ಮ ತಲೆಯೇ ಕೇಂದ್ರದಲ್ಲಿ ಹೋಗಿದೆಯಲ್ಲ?

ಶ್ರೀ ಆರ್. ಎನ್. ನಾಯಕ್.— ಈಗ ನೀವು ನಮ್ಮ ಸ್ಥಾನದಲ್ಲಿ ಇದ್ದೀರಿ.

ಶ್ರೀ ಸಿ. ಬೈರೇಗೌಡ.— ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಈ ಕಡೆ ಕುಳಿತಿರತಕ್ಕಂಥ ಮಾನ್ಯ ವಿರೋಧಪಕ್ಷದ ನಾಯಕರು ಚುನಾವಣೆ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ. ಅದೇ ತರಹ ವಿಶ್ಲೇಷಣೆಯನ್ನು ಏಕೀಕೃತ ಚುನಾವಣೆಗಳು ಆದಾಗ ಅಂದರೆ ಮಂಡಳ ಪಂಚಾಯತ್ ಮತ್ತು ಜಿಲ್ಲಾಪರಿಷತ್‌ಗಳಿಗೆ ನಡೆದಂಥ ಚುನಾವಣೆಗಳು ಅವೆಲ್ಲವನ್ನೂ ವಿಶ್ಲೇಷಣೆ ಮಾಡಿ ನೋಡಿದರೆ ಆಗ ಕಾಂಗ್ರೆಸ್‌ಗೂ, ಜನತಾ ಪಕ್ಷಕ್ಕೂ ಸ್ವಲ್ಪ ಹೆಚ್ಚು ಕಡಿಮೆ ವ್ಯತ್ಯಾಸ ಬಂದಿರತಕ್ಕಂಥಾದ್ದು ವ್ಯಕ್ತವಾಗುತ್ತದೆ. ಇದಕ್ಕೆ ಏನು ಕಾರಣ? ಅಂದು ನಿಮ್ಮ ಸರಕಾರ ಇದ್ದರೂ ಸಹ, ಪಕ್ಷ ಏಕೀಕೃತ ಇದ್ದರೂ ಸಹ ಆ ಚುನಾವಣೆ ಕಾಂಗ್ರೆಸ್‌ಗೇ ಬೆಂಬಲ ದೊರಕಲು ಕಾರಣ ಏನು? ಎಂಬಿತ್ಯಾದಿಗಳ ಬಗ್ಗೆ ಮಾನ್ಯ ಚಂದ್ರೇಗೌಡರು ದಯಮಾಡಿ ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ.— ಆಗ ಪಕ್ಷದಲ್ಲಿದ್ದವರೇ ದ್ರೋಹ ಮಾಡಿದುದರಿಂದ ಹಾಗೆ ಆಯಿತು...

ಶ್ರೀ ಸಿ. ಬೈರೇಗೌಡ.— ಯಾರು ದ್ರೋಹ ಮಾಡಿದ್ದಾರೆ, ಏನು ಎನ್ನತಕ್ಕಂಥಾದ್ದು ಇವೊತ್ತಿನ ದಿವಸ ಸಾಬೀತು ಆಗಿದೆ. ಖಜಾನೆ ಖಾಲಿ ಮಾಡಿರತಕ್ಕಂಥವರು ಯಾರು ಎಂಬ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ಮುಂದಿನ ದಿನಗಳಲ್ಲಿ ಹೇಳಲಿದ್ದಾರೆ. ಆಗ ಯಾರು ದ್ರೋಹ ಮಾಡಿದ್ದಾರೆ ಎಂದು ಗೊತ್ತಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಆ ಜಗಳವು ಈಗಾಗಲೇ ಬೀದಿಯಲ್ಲಿ ತೀರ್ಮಾನವಾಗಿದೆ. ಈಗ ಪುನಃ ಅದರ ಮೇಲೆ ಚರ್ಚೆ ಮಾಡುವುದು ಬೇಡ. ಹಿಂದೆ ಇತಿಹಾಸದ ಕತೆಗಳಲ್ಲಿ ವೀರ್‍ ಸಾಧಕರು ಇದ್ದರು ಎಂದು ಕೇಳಿ ತಿಳಿದುಕೊಂಡಿದ್ದೇವೆ, ಈಗ ಅದು ನಮ್ಮ ಅನುಭವಕ್ಕೆ ಬಂದಿದೆ...

ಶ್ರೀ ಸಿ. ಬೈರೇಗೌಡ.— ವೀರ್‍ ಸಾಧಕರು ಯಾರು ಎನ್ನತಕ್ಕಂಥಾದ್ದು ಕರ್ನಾಟಕದ ಜನತೆಗೆ ಗೊತ್ತಿದೆ. ಮೌಲ್ಯಗಳ ಬಗ್ಗೆ ಜಪ ಮಾಡಿಕೊಂಡು ಬಂದಂಥವರ ಮೌಲ್ಯಗಳ ವಿಚಾರ ಏನಾಯಿತು? ಮೌಲ್ಯಗಳು ಎಲ್ಲಿಯುವರೆಗೆ ಹೋಗಿವೆ ? ಏನಾಗಿವೆ ? ಎಲ್ಲಿಯವರೆಗೆ ಜಾರಿಯಾಗಿವೆ ? ಆ ಆ ಮೌಲ್ಯಗಳಿಂದ ಎಷ್ಟೆಷ್ಟು ಕೊಡಗಳು, ಕೆರೆಗಳು ತುಂಬಿವೆ ಎನ್ನತಕ್ಕಂಥದ್ದು ರಾಜ್ಯದ ಜನತೆಗೆ ಗೊತ್ತಿದೆ.

ಶ್ರೀ ಡಿ. ಬಿ. ಚಂದ್ರೇಗೌಡ. — ಮಾನ್ಯ ಅಧ್ಯಕ್ಷರೇ, ನನಗೆ ಹೀಗೆ ಮಾತನಾಡುವಾಗ ಮಧ್ಯೆ ಇತರ ಮಾನ್ಯ ಸದಸ್ಯರು ಪ್ರವೇಶಿಸಿ ಮಾತನಾಡಿದರೆ ನನ್ನ ಮಾತುಗಳನ್ನು ಮುಂದುವರಿಸಲು ಕಷ್ಟವಾಗುತ್ತದೆ. ದಯವಿಟ್ಟು ನನ್ನ ಮಾತುಗಳನ್ನು ಮುಂದುವರಿಸಲು ಅವಕಾಶ ಮಾಡಿಕೊಡಿ.

೧.೩೦. ಪಿ.ಎಂ.

ಒಬ್ಬ ಮಾನ್ಯ ಸದಸ್ಯರು.— ಜನತಾ ದಳದವರು ಮತ್ತು ಜನತಾ ಪಕ್ಷದವರು ಹೇಗೆ ಭಿನ್ನಾಭಿಪ್ರಾಯ ಬಂದು ಬೇರೆಯಾದರೂ ಎಂಬ ಬಗ್ಗೆ ಮಾತನಾಡುತ್ತಿದ್ದಾರೆ. ಈಗ ಮತ್ತೆ ಒಂದಾಗುವುದಕ್ಕೆ ನೆಗೋಸಿಯೇಷನ್ ನಡೆಯುತ್ತಿದೆ ಎಂದು ಕೇಳಿದೆ ಅದು ಬೇಗ ಆಗುತ್ತದೆಯೋ ಅಥವಾ ಒಂದಾಗುವುದಿಲ್ಲವೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.— ನಾವು ಒಂದಾಗುವುದು ಬಿಡುವುದು ಬೇರೆ ಪ್ರಶ್ನೆ. ನೀವು ಹೇಗಿರುತ್ತೀರಿ ಎಂಬುದನ್ನು ನೋಡಿಕೊಳ್ಳಿ. ಪತ್ರಿಕೆ ನೋಡಿದರೆ ನನಗೆ ಶಂಕೆ ಬರುವುದಕ್ಕೆ ಶುರುವಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಹೊಸತನವನ್ನು ಕಾಣಬೇಕೆಂದು ಇರುವಂತಹ ನನ್ನಂತಹವರಿಗೆ ಇದರಿಂದ ಬಹಳ ನಿರಾಶೆಯಾಗಿದೆ ಅದಕ್ಕೆ ಕಾರಣಗಳೇನು ಎಂಬುದನ್ನು ಮುಂದೆ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಮುಖ್ಯವಾಗಿ ಯಾವುದೇ ಸರಕಾರ ಬದಲಾವಣೆಯಾದರೆ ಆ ಸರಕಾರ ಮೊದಲು ರಾಜ್ಯಪಾಲರ ಭಾಷಣದ ಮುಖೇನ ದೇಶಕ್ಕೆ ತಮ್ಮ ಪಕ್ಷದ ಮತ್ತು ಸರಕಾರದ ನೀತಿ ನಿರೂಪಣೆಯನ್ನು ಆ ಒಂದು ಭಾಷಣದ ಮೂಲಕ ಸದನಕ್ಕೆ ಮತ್ತು ಜನಕ್ಕೆ ಕೊಡುವುದು ವಾಡಿಕೆ ಮತ್ತು ಪದ್ಧತಿ. ಆದರೆ ದುರ್ದೈವ ವಿಧಾನ ಮಂಡಲದಲ್ಲಿ ಮಾಡಿದ ಭಾಷಣ ಈ ರೀತಿಯ ಯಾವ ನೀತಿ ನಿರೂಪಣೆಯನ್ನು ಹೊಂದಿಲ್ಲ ಅದಕ್ಕೆ ತಕ್ಕ ಕಾರ್ಯಕ್ರಮಗಳೂ ಇಲ್ಲ. ಇದು ನನ್ನ ಮನಸ್ಸಿಗೆ ಕಂಡಂತಹ ವಿಚಾರ. ಆ ಕಾರಣಕ್ಕಾಗಿ ನಾನು ಪ್ರಾರಂಭಿಕವಾಗಿ ಹೇಳಿದೆ, ಇದೊಂದು ನೀರಸವಾದಂತಹ ಭಾಷಣ ಎಂದು. ಅವರು ತಮ್ಮ ಭಾಷಣದಲ್ಲಿ ಚುನಾವಣೆಗಳು ಶಾಂತ ಹಾಗೂ ಸುವ್ಯವಸ್ಥಿತ ಸ್ಥಿತಿಯಲ್ಲಿ ನಡೆಯಿತು ಎಂದು ಹೇಳಿದ್ದಾರೆ ಈ ಚುನಾವಣೆಗಳು ಶಾಂತ ರೀತಿಯಿಂದ ನಡೆದಿದ್ದರೆ ಬೆಂಗಳೂರಿನ ಒಂದು ಚುನಾವಣೆ ಮುಂದಕ್ಕೆ ಹೋಗಬೇಕಾದಂತಹ ಸಂದರ್ಭ ಇರಲಿಲ್ಲ. ಅಲ್ಲಿ ಕೊಲೆಯಿಂದ ಪ್ರಾರಂಭವಾದದ್ದು, ಚುನಾವಣೆ ನಂತರ ಏನು ಘಟನೆಗಳು ನಡೆದಿವೆ ಎಂಬುದನ್ನು ಕೊನೆಗೆ ಹೇಳುತ್ತೇನೆ. ನನ್ನ ಸರಕಾರ ಪ್ರಚಂಡ ಬಹುಮತದಿಂದ ಆಯ್ಕೆಯಾಗಿದೆಯೆಂದು ಹೇಳುವಾಗ ಮತಗಳನ್ನು ಲೆಕ್ಕಕ್ಕೆ ಇಟ್ಟುಕೊಂಡು ಗೆದ್ದ ಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಂಡು ಹೇಳುತ್ತಿದ್ದೀರಿ. ಜನಕ್ಕೆ ಹೊಸದೊಂದು ಸರಕಾರ ಬೇಕು ಎಂಬ ಅಪೇಕ್ಷೆಯಿದ್ದರೆ ನೀವು ಪಡೆದ ಮತಗಳ ಸಂಖ್ಯೆ ಲೆಕ್ಕಕ್ಕೆ ಸೀಮಿತವಾಗುತ್ತಿರಲಿಲ್ಲ. ಜನಕ್ಕೆ ಬೇಕಾಗಿದ್ದದ್ದು ಅದು ಅಲ್ಲ. ಅಂದು ಇಂದು ನಿಮ್ಮನ್ನು ಜನರು ತಿರಸ್ಕರಿಸಿದ್ದಾರೆ. ನಿಮಗೆ ಇದ್ದ ಹಳೇ ಸಂಖ್ಯೆಯನ್ನು ಜನ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಇನ್ನು ನಮ್ಮ ಒಕ್ಕೂಟದ ವ್ಯವಸ್ಥೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಒಂದು ಬಗೆಯ ಚಿಂತನೆ ನಡೆಯುತ್ತಿದೆಯೆಂದು ಇದರಲ್ಲಿ ಹೇಳಿಕೊಂಡು ಹೋಗಿದಾರೆ, ಇದು ಕಾಂಗ್ರೆಸ್ ಪಕ್ಷಕ್ಕೆ ಈಗ ನೆನಪಾದದ್ದು ಸ್ವಲ್ಪ ಮಟ್ಟಿಗೆ ಸಂತೋಷ ತರತಕ್ಕಂತಹ ವಿಚಾರ. ಎಲ್ಲಾ ಕಾಲಕ್ಕೂ ನಮ್ಮ ಈ ಒಕ್ಕೂಟದ ವ್ಯವಸ್ಥೆ ಇದೆಯೆಂದು ಪುಟ ೨ ರಲ್ಲಿ ಹೇಳಿದ್ದೀರಿ. ಪ್ರಜಾತಂತ್ರದ ಮೌಲ್ಯಗಳ ಅನಿವಾರ್ಯತೆ ಮುಂತಾದ ವಿಚಾರಗಳಲ್ಲಿ ಇದ್ದಕ್ಕಿದ್ದಂತೆ ತಮಗೆ ಹೊಸ ಅರಿವು ಬಂದದ್ದಕ್ಕಾಗಿ ನಾನು ಅಭಿನಂದಿಸುತ್ತೇನೆ. ಕೇಂದ್ರದಲ್ಲಿ ಹೊಸ ಸರ್ಕಾರ ಇಂತಹ ಒಂದು ಅನಿವಾರ್ಯತೆ ಕಾರಣದಿಂದ ಅಧಿಕಾರಕ್ಕೆ ಬಂತು ಎಂದು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇನ್ನು ಪುಟ ಎರಡರಲ್ಲಿ ''ಯಾವುದೇ ರಾಜ್ಯದ ಆಡಳಿತಾವಧಿಯಲ್ಲಿ ನಡೆಯಬಾರದ ಅನೇಕ ಘಟನೆಗಳು ದುರ್ದೈವವಶಾತ್ ನಡೆಯುತ್ತವೆ'', ಅಂದರೆ ಇಂತಹ ಮೋಗಮ್ಮಾದ ಹೇಳಿಕೆಗಳನ್ನು ರಾಜ್ಯಪಾಲರ ಭಾಷಣದಲ್ಲಿ ಅಳವಡಿಸಿದರೆ ಏನು ಅರ್ಥ ? ಇದಕ್ಕಾಗಿ ಪ್ರತೀಕಾರಾತ್ಮಕ ಮನೋಭಾವನೆಯನ್ನು ತಾಳುವುದಿಲ್ಲ ಅಂದರೆ ನಡೆಯು

ಬಾರದ ಅನೇಕ ಘಟನೆಗಳು ಕಳೆದ ಒಂಭತ್ತು ತಿಂಗಳು ರಾಜ್ಯಪಾಲರ ಆಡಳಿತದಲ್ಲಿ ನಡೆದದ್ದನ್ನು ಹೇಳುತ್ತೀರೋ ಅಥವಾ ಅದಕ್ಕಿಂತಲೂ ಹಿಂದಿನ ಸರ್ಕಾರದಲ್ಲಿ ನಡೆದ ಘಟನೆಗಳನ್ನು ಹೇಳುತ್ತೀರೋ ? ಹಿಂದಿನ ಸರ್ಕಾರದ ಘಟನೆಗಳು ಆಗಿದ್ದರೆ ಯಾವ ಘಟನೆಗಳ ಬಗ್ಗೆ ಎಂದು ಹೇಳುತ್ತೀರಾ ? ಅದರ ಬಗ್ಗೆ ಡೀಟೇಲ್ಸ್ ಬೇಕು ತಾವು ಯಾವುದು ಎಂದು ಸ್ಪೆಲ್‌ಔಟ್ ಮಾಡಿ, ಮೊಗಮ್ಮಾಗಿ ಹೇಳಬೇಡಿ ಈ ಒಂದು ಡಾಕ್ಯುಮೆಂಟ್‌ನ್ನು ಸದನದ ಮುಂದೆ ಇಡುವಾಗ ಜನರ ಮನಸ್ಸಿನ ಮೇಲೆ ಇಂತಹ ಸಂಶಯದ ಗೂಬೆಯನ್ನು ಕೂರಿಸಲಿಕ್ಕೆ ಹೋಗಬೇಡಿ. ಹೊಸ ಪರ್ಯಾಯ ವ್ಯವಸ್ಥೆ ಮಾಡುವಾಗ ಮೊಗಮ್ಮಾಗಿ ಇಂತಹ ಭಾಷೆ ಬಳಸುವುದು ಸಾಧುವಾದುದಲ್ಲ. ನಡೆಯಬಾರದ್ದು ಏನು ನಡೆದಿದೆ ಎನ್ನುವುದನ್ನು ಕೇಳುತ್ತೇನೆ. ಇಂತಹ ಭಾಷೆಯನ್ನು ಬಳಸುವುದು ರಾಜ್ಯಪಾಲರ ಭಾಷಣಕ್ಕೆ ಗೌರವ ತರತಕ್ಕ ವಿಚಾರ ಅಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.— ವಿವರ ಬೇಕಾದರೆ ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಅಧ್ಯಕ್ಷರೆ, ನಮ್ಮ ರಾಜ್ಯಪಾಲರ ಭಾಷಣದಲ್ಲಿ ಪೂಜ್ಯ ಪಂಡಿತ್ ಜವಾಹರಲಾಲ್ ನೆಹರೂ ಅವರ ಸ್ಮರಣೆ ಮಾಡಿದ್ದಾರೆ. ಇದರ ಅಗತ್ಯ ಇಲ್ಲಿ ಏನು ಎಂದು ಗೊತ್ತಿಲ್ಲ. ಪಂಡಿತ್‌ಜೀ ಅವರ ಜನ್ಮಶತಾಬ್ದಿಯ ಬಗ್ಗೆ ಹಾಡಿ, ಹೊಗಳಿ, ಮಹಾನ್ ಸ್ವಾತಂತ್ರ್ಯಯೋಧ, ನಿಜವಾದ ಪ್ರಜಾಪ್ರಭುತ್ವವಾದಿ ಎಂದು ಹೇಳಿದ್ದಾರೆ. ಯಾರನ್ನು ಸಂತೈಸುವುದಕ್ಕೆ ಈ ಮಾತನ್ನು ಹೇಳಿದ್ದಾರೆ, ಯಾರನ್ನು ಓಲೈಸುವುದಕ್ಕೆ ಈ ಮಾತನ್ನು ಹೇಳಿದ್ದಾರೆ ? ಪಂಡಿತ್‌ಜೀ ಅವರು ಆಧುನಿಕ ಭಾರತದ ಶಿಲ್ಪಿ ಎಂದು ಹೇಳಿದ್ದಾರೆ. ಇದು ನೀವು ಹೇಳಿದ ಮಾತು ಅಲ್ಲ. ಇಡೀ ಜಗತ್ತೇ ಅವರನ್ನು ಆಧುನಿಕ ಭಾರತದ ಶಿಲ್ಪಿ ಎಂದು ಹೇಳಿದೆ. ಇವರು ನಮ್ಮ ದೇಶದ ಮೊಟ್ಟಮೊದಲ ಪ್ರಧಾನಿ ಎನ್ನುವುದು ನಮಗೆ ತಿಳಿದಿಲ್ಲವೇ ?

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.— ಅದರಲ್ಲಿ ತಪ್ಪೇನಿದೆ. ತಾವು ಆ ತರಹ ಮಾತನಾಡ ಬಾರದಾಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ.— ಇದನ್ನು ಯಾರನ್ನು ತೃಪ್ತಿಪಡಿಸಲಿಕ್ಕೆ ಹೇಳಿದ್ದೀರಿ. ತಾವು ಯಾರನ್ನು ತೃಪ್ತಿಪಡಿಸಲಿಕ್ಕೆ ಮಾಡಿದ್ದೀರಿ ಎಂದು ನನಗೆ ಗೊತ್ತು. ಯಾವಾಗಲೂ ಇಲ್ಲಿ ಒಂದು ರಿಮೋಟ್ ಕಂಟ್ರೋಲ್ ಸರ್ಕಾರ ಇರಬೇಕು. ಅಲ್ಲಿಯವರಿಗೆ ತೃಪ್ತಿಪಡಿಸಬೇಕು ಆದ್ದರಿಂದ ಇದನ್ನು ಬಳಸಿದ್ದೀರಿ ಈಗ ಜನ್ಮಶತಾಬ್ದಿ ಮುಗಿದಿದೆ. ಪಂಡಿತ್‌ಜೀ ಎಲ್ಲರಿಗೂ ಬೇಕು. ಇದರ ಮುಂದಕ್ಕೆ ಏನು ಎನ್ನುವುದನ್ನು ಹೇಳಿ. ಇಂತಹ ಒಬ್ಬ ಮಹಾನ್ ವ್ಯಕ್ತಿಯ ಹೆಸರನ್ನು ಹೇಳಿದಮೇಲೆ ಆ ವ್ಯಕ್ತಿಯ ಜನ್ಮಶತಾಬ್ದಿ ಹೆಸರಿನಲ್ಲಿ ಏನು ಕಾರ್ಯಕ್ರಮಗಳನ್ನು ನಮ್ಮ ರಾಜ್ಯದಲ್ಲಿ ಹಮ್ಮಿಕೊಂಡಿದ್ದೀರಿ ಅದು ನಮಗೆ ಬೇಕು. ಬರೀ ಹೊಗಳುವುದಾದರೆ, ಗಾಂಧೀಜಿ. ಸುಭಾಷ್‌ಚಂದ್ರಭೋಸ್ ಎಲ್ಲರನ್ನೂ ಹೊಗಳುತ್ತಾ ಹೋಗೋಣ. ರಾಜ್ಯಪಾಲರ ಭಾಷಣದಲ್ಲಿ ಇದನ್ನು ಅಳವಡಿಸಿದ ಮೇಲೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿ, ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆಯಲಿ.

ಶ್ರೀ ಸಿ ಬೈರೇಗೌಡ — ತಾವು ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದೀರಿ ಅನಂತರ ತಾವು ರಾಜೀನಾಮೆ ಕೊಟ್ಟಿರಿ. ಆ ಕ್ಷೇತ್ರದ ಜನರು ತಮಗೆ ರಾಜೀನಾಮೆ ಕೊಡಬೇಕೆಂದು ಏನಾದರೂ ಹೇಳಿದ್ದಿರಾ ಅದನ್ನು ತಿಳಿಸಬೇಕು.

ಶ್ರೀ ಡಿ. ಬಿ ಚಂದ್ರೇಗೌಡ.— "ಏನಕೇನ ಪ್ರಕಾರಣೇನ" ನೀವು ಕೇಳಿದ್ದಕ್ಕಾಗಿ ರೆಕಾರ್ಡ್‌ನಲ್ಲಿರಲಿ ಎಂದು ಹೇಳುತ್ತೇನೆ. ಇಡೀ ಕ್ಷೇತ್ರದ ಐದು ಸಹಸ್ರ ಜನರನ್ನು ಕೊಪ್ಪದಲ್ಲಿ ಸಭೆ ಸೇರಿಸಿ ಪರಿಸ್ಥಿತಿಯನ್ನು ಅವರಿಗೆ ವಿವರಣೆ ಮಾಡಿ ಅವರ ಅನುಮತಿಯನ್ನು ಪಡೆದು ರಾಜೀನಾಮೆಯನ್ನು ಕೊಟ್ಟಿದ್ದೇನೆ. ಇದಕ್ಕೆ ಸಾಕಷ್ಟು ದಾಖಲೆಗಳನ್ನು ನಿಮಗೆ ಬೇಕೆಂದಾದರೆ ಒದಗಿಸುತ್ತೇನೆ. ಅನೇಕ ಜನರೆ ಸಾಕ್ಷಿಗಳು ಕೂಡಾ ಇವೆ. ಅದು ನಿಮಗೆ ತಿಳಿದಿಲ್ಲ ನಾನು ಇಲ್ಲಿ ಕೇಳುವ ಪ್ರಶ್ನೆ ಒಬ್ಬ ಮಹಾನ್ ವ್ಯಕ್ತಿಯ ಹೆಸರಿನ್ನೂ ಇಲ್ಲಿ ತಂದಮೇಲೆ ತತ್ಸಮವಾಗಿ ಆ ವ್ಯಕ್ತಿಯ ಬಗ್ಗೆ ಗೌರವ ಸಲ್ಲಿಸುವ ಸಲುವಾಗಿ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ? ಇದು ನನ್ನ ಪ್ರಶ್ನೆಯೇನೂ ಅಲ್ಲ. ಮತ್ತೆ ಒಟ್ಟು ಈ ಭಾಷಣದಲ್ಲಿ ಎಲ್ಲಿಯೂ ಕ್ರಿಯಾಪದಗಳು ಇಲ್ಲ. ಯಾರಾದರೂ ಕ್ರಿಯಾಪದ ಇರುವುದನ್ನು ನನ್ನ ಗಮನಕ್ಕೆ ತಂದರೆ...

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷಣಿಯವರೇ, ರಾಜ್ಯಪಾಲರ ಭಾಷಣ ಅದರಲ್ಲೂ ವಿಶೇಷವಾಗಿ ಹೊಸ ಸರ್ಕಾರ ಬಂದಂಥ ಸಂದರ್ಭದಲ್ಲಿ ಬಹಳಮುಖ್ಯವಾಗಿರತಕ್ಕಂಥದ್ದು. ಈ ಸರ್ಕಾರದ ಧೋರಣೆಯ ಬಗ್ಗೆ ಮತ್ತು ಸರ್ಕಾರ ಏನು ಮಾಡುತ್ತಿದೆ ಎನ್ನುವುದನ್ನು ಜನ ಬಹಳ ಕಾತುರದಿಂದ ಜನಗಳು ನೋಡುತ್ತಿದ್ದಾರೆ. ಹೆಚ್ಚಿನ ರೀತಿಯಲ್ಲಿ ಮಾತವನ್ನು ಕೊಟ್ಟು, ಏನೋ ಮಾಡುತ್ತಾರೆ ಎಂದು

ಆಸೆಯನ್ನು ಇಟ್ಟುಕೊಂಡು ತಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಈ ಸಂದರ್ಭದಲ್ಲಿ ಕೊನೆಯಪಕ್ಷ ನಾವು ಯಾರಾದರೂ ಮಾತನಾಡುತ್ತಿದ್ದ ಇವರೂ ಇಲ್ಲದಿದ್ದರೂ ಪರವಾಗಿರಲಿಲ್ಲ. ಆದರೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರತಕ್ಕಂಥ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಅಥವಾ ಬೇರೆ ಮಂತ್ರಿಗಳು ಎಲ್ಲರೂ ಇದ್ದು ಅವರ ಮಾತುಗಳನ್ನು ಕೇಳಿ ಸರಿಯಾದ ಉತ್ತರವನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅದೇ ರೀತಿಯಲ್ಲಿ ಜವಾಬ್ದಾರಿ ಇರತಕ್ಕಂಥ ಅಧಿಕಾರಿಗಳು ಸಹಿತ ಇದ್ದರೆ ಈ ಸಭೆಗೆ ಮತ್ತು ಈ ಸಭೆಯ ಕಾರ್ಯಕಲಾಪಗಳಿಗೆ ಒಳ್ಳೆಯ ಭೂಷಣ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಮಂತ್ರಿಗಳು ಇಲ್ಲ ಎಂದು ಅವರ ಮೇಲೆ ಆಪಾದನೆಯನ್ನು ಮಾಡುತ್ತಿಲ್ಲ. ಬಹಳ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಮಂತ್ರಿಗಳೂ ಇದ್ದಾರೆ. ಇವರ ಜೊತೆಗೆ ಸಭಾನಾಯಕರೂ ಸಹಿತ ಇದ್ದರೆ ಈ ಸಭೆಯ ಕಾರ್ಯಕಲಾಪಗಳಿಗೆ ಹೆಚ್ಚಿನ ಗೌರವ ಮತ್ತು ಮಹತ್ವ ಬರುತ್ತದೆ ಎಂದು ನಾನು ತಿಳಿದಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಉಪನಾಯಕರು ಬಹಳ ಪ್ರಾಮುಖ್ಯವಾದಂಥ ವಿಚಾರವನ್ನು ನಮ್ಮ ಸಭಾನಾಯಕರಿಗೆ ಎಚ್ಚರಿಕೆ ಕೊಡತಕ್ಕಂಥ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಅವರು ಹೇಳಿದಂತೆ ವಿರೋಧ ಪಕ್ಷದ ನಾಯಕರು ಮಾತನಾಡಿದೆಲ್ಲವನ್ನೂ ನಾವು ನೋಟ್ ಮಾಡುತ್ತಿದ್ದೇವೆ. ನಮ್ಮ ಸಾಲಿನಲ್ಲಿ ಅವರು ನೋಡಿಲ್ಲದೇ ಈ ಮಾತನ್ನು ಹೇಳಿದ್ದಾರೆ ಎಂದು ಕಾಣುತ್ತದೆ. ಅವರ ಭಾಷಣಕ್ಕೆ ಒಳ್ಳೆಯ ರೀತಿಯ ಪ್ರತಿಷ್ಠೆಯನ್ನು ಹೆಚ್ಚಿಸತಕ್ಕಂಥದ್ದರ ಮಟ್ಟಕ್ಕೆ ನಾವು ನಡೆದುಕೊಂಡಿದ್ದೇವೆ, ಇದರ ಬಗ್ಗೆ ನಾವು ಖಾತರಿಯನ್ನು ಕೊಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ. ಇವೊತ್ತು ರಾಜ್ಯದ ಮತದಾರ ಯಾರು ಯಾರು ಯಾವ ರೀತಿ ನಡೆದುಕೊಂಡರು ಎನ್ನುವುದನ್ನು ನೋಡಿ ಸರಿಯಾದಂಥ ಬುದ್ಧಿಯನ್ನು ಕಲಿಸಿದ್ದಾರೆ. ಅದನ್ನು ಎಲ್ಲರೂ ಕೂಡಾ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಜನರು ಏನೋ ಮಾಡಬಹುದು ಎಂದು ನಂಬಿ ನಿಮಗೆ ಓಟು ಕೊಟ್ಟು ಗೆಲ್ಲಿಸಿದ್ದಾರೆ. ನಾನು ಬಹಳ ದುಃಖದಿಂದ ನೋವಿಂದ ಒಂದು ಮಾತನ್ನು ಹೇಳುತ್ತಿದ್ದೇನೆ. ಆ ಕಡೆಯವರು ನೀವು ಏನು ಮಾಡುತ್ತಿದ್ದಿರಿ, ನಾವು ಏನು ಮಾಡುತ್ತಿದ್ದೇವೆ, ಅವರು ಏನು ಮಾಡಿದರು ಇವರು ಏನು ಮಾಡಿದರು, ಈ ರೀತಿ ಮಾತನಾಡದೆ ಹೊಸ ಬದಲಾವಣೆಯನ್ನು ತರಬೇಕು. ಇದರ ಬಗ್ಗೆ ಹೊಸ ದಿಕ್ಕಿನಲ್ಲಿ ಸೀರಿಯಸ್ ಆಗಿ ಯೋಚನೆ ಮಾಡ ತಕ್ಕಂಥ ಅಗತ್ಯ ಇದೆ. ಇದನ್ನು ಅತ್ಯಂತ ವಿನಯದಿಂದ ನಮ್ಮ ಮಿತ್ರರುಗಳಲ್ಲಿ ಈ ರೀತಿ ಮಾತನಾಡಬೇಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ಈ ಸಮಯದಲ್ಲಿ ಯಾರಾದರೂ ಇಂಟರ್‌ಫಿಯರ್ ಮಾಡಿದರೆ ಆ ಸೀರಿಯಸ್‌ನೆಸ್ ಹೊರಟು ಹೋಗುತ್ತದೆ ಮತ್ತು ಅದರ ಮಹತ್ವ ಕೂಡಾ ಕಳೆದುಕೊಳ್ಳಬಹುದು. ಅವರು ಏನು ಮಾಡಿದರು, ಇವರು ಏನು ಮಾಡಿದರು ನೀವು ಏನು ಮಾಡಿದಿರಿ ಎಂಬುದರ ಬಗ್ಗೆ ಚಿಂತನೆಯನ್ನು ಮಾಡದೆ ಈ ರಾಜ್ಯದ ಜನರ ಹಿತದೃಷ್ಟಿಯಿಂದ ಆ ರೀತಿ ಮಾತನಾಡದೆ ಏನು ಮಾಡಬೇಕು ಎಂಬುದರ ಬಗ್ಗೆ ಗಮನವನ್ನು ಕೊಡಬೇಕು ಎಂದು ತಮ್ಮೆಲ್ಲರಿಗೂ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಹೆಚ್ಚಿನ ತೊಂದರೆ ಆಗುತ್ತಿರುವುದು ಅವರವರಲ್ಲಿಯೇ ನಮ್ಮಿಂದ ತೊಂದರೆಯಾಗುತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಒಟ್ಟಾರೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಸಹ ಕ್ರಿಯಾಪದ ಕಾಣಿಸುವುದಿಲ್ಲ. ಪಾಟೀಲರಿಗೆ ಏನಾದರೂ ಕಂಡಿರಬಹುದೇನೋ. ಪ್ರಯತ್ನಿಸಲಾಗುತ್ತಿದೆ. ಪ್ರಯತ್ನಿಸುವುದು, ವಿಶೇಷ ಆದ್ಯತೆ ನೀಡುತ್ತೇವೆ, ವಿಶೇಷ ಒತ್ತು ಕೊಡುತ್ತೇವೆ ಇಂತಹ ವಿಶೇಷಗಳನ್ನು ಬಳಸಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಕ್ರಿಯಾಪದ ಶಬ್ದ ಇದೆಯೇ ಎಂದು ಎಲ್ಲಿಯಾದರೂ ಹುಡುಕಿದರೆ ಅದು ಒಂದು ಕಡೆಯೂ ಕಾಣಿಸದು ನಾನು ಈ ಪುಸ್ತಕದಲ್ಲಿ ಮಾರ್ಕ್ ಮಾಡಿದ್ದೇನೆ. ಪ್ರಯತ್ನಿಸಲಾಗುತ್ತದೆ, ಪ್ರಯತ್ನಿಸಲಾಗುವುದು ಇತ್ಯಾದಿಯಾಗಿ ೭ ಕಡೆ ಹೇಳಿದ್ದೀರಿ. ಕಾರ್ಯಕ್ರಮಗಳು ಇಲ್ಲ. ಇರುವ ಕಾರ್ಯಕ್ರಮಗಳು ಇದೆ. ಕೇಂದ್ರದಲ್ಲಿ ಒಂದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ, ಅದು ಏನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ, ಆದರ ಪ್ರಣಾಳಿಕೆಯಲ್ಲಿ ಹಾಕಿಕೊಂಡಿರತಕ್ಕ ಕಾರ್ಯಕ್ರಮದ ಲಾಭವನ್ನು ರಾಜ್ಯ ಸರ್ಕಾರಗಳು ಹೇಗೆ ಪಡೆಯಬೇಕು. ಪ್ರಣಾಳಿಕೆಯ ಚೌಕಟ್ಟಿನೊಳಗೆ ಹೇಗೆ ಕೆಲಸ ಮಾಡಬೇಕು ? ನೀತಿ ನಿರೂಪಣೆ ಏನು ಮಾಡಿದ್ದಾರೆ. ಆದರ ಲಾಭವನ್ನು ಪಡೆಯುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ? ಅದನ್ನು ನೀವು ನೀವು ಮಾಡಲಿಲ್ಲ. ೧೯೭೫-೭೬ ವರ್ಷಗಳ ಹಳೆಯ ಕಥೆ ೨೦ ಅಂಶಗಳ ಕಾರ್ಯಕ್ರಮ ೨೦ ಅಂಶಗಳ ಕಾರ್ಯಕ್ರಮ ಇದರಲ್ಲಿ ಯಾವುದೂ ಹೊಸದ್ದು ನಮಗೆ ಕಾಣಿಸುವುದಿಲ್ಲ. ೨೦ ಅಂಶಗಳ ಕಾರ್ಯಕ್ರಮ

ಕೆಟ್ಟಿದ್ದು ಎಂದು ನಾನು ಹೇಳುವುದಿಲ್ಲ. ಅದನ್ನು ಅನುಷ್ಠಾನಕ್ಕೆ ತರುವ ವಿಷಯದಲ್ಲಿ ದ್ವಂದ್ವ ಇಲ್ಲ. ಆದರೆ ನಿಮಗೆ ಆ ಕಾರ್ಯಕ್ರಮ ಬಿಟ್ಟು ಹೊಸ ಆಲೋಚನೆ ಹೊಸ ವಿಚಾರಗಳು ತಲೆಗೆ ಬರುವುದಿಲ್ಲವೇ? ೨೯ ವರ್ಷದ ಹಿಂದಕ್ಕೆ ಏತಕ್ಕೆ ಹೋಗುತ್ತಿದ್ದೀರಿ, ಶ್ರೀಮಾನ್ ವೀರೇಂದ್ರ ಪಾಟೀಲರು ೧೮ ವರ್ಷದ ಹಿಂದೆ ಮುಖ್ಯಮಂತ್ರಿಗಳಾಗಿದ್ದರು. ಪುನಃ ಮುಖ್ಯಮಂತ್ರಿಗಳಾಗಿದ್ದಾರೆ. ೧೮ ವರ್ಷದ ಹಿಂದಿನ ಆಲೋಚನೆಗಳನ್ನು ಬಿಟ್ಟೇ ಇಲ್ಲ. ಹೊಸತನಕ್ಕೆ ಏನಾದರೂ ಪದಾರ್ಪಣೆ ಮಾಡಿದ್ದೀರಾ ? ಏಕೆಂದರೆ ಹೊಸತನ ಯಾವುದೂ ಇಲ್ಲ. ಸೇಮ್ ಏನ್ಷಿಯೆಂಟ್ ಥಿಂಕಿಂಗ್... ಮತ್ತೆ ಅದೇ ೨೦ ಅಂಶದ ಕಾರ್ಯಕ್ರಮದ ಬಗ್ಗೆ ಗಂಟೆ ಬಾರಿಸಿಕೊಂಡು ಹೊರಟಿದ್ದೀರಿ. ಹೊಸಕಾರ್ಯಕ್ರಮದ ಆಲೋಚನೆ ಇಲ್ಲವೇ? ಕೇಂದ್ರ ಸರ್ಕಾರ ಹೊಸದಾಗಿ ಬಂದಿರುವುದರಿಂದ ಅದು ಮಾಡಿರತಕ್ಕ ಆಲೋಚನೆಗಳನ್ನು ಸ್ವಲ್ಪ ಮಟ್ಟಿಗೆ ಅಳವಡಿಸಿಕೊಂಡು ಅದರ ಲಾಭವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುವುದು, ಯಾವುದೇ ಚುನಾಯಿತ ಸರ್ಕಾರದ ಮುಖ್ಯ ಕೆಲಸವಾಗಬೇಕಾಗುತ್ತದೆ. ಆ ಕೆಲಸ ಇಲ್ಲಿ ಆಗಿಲ್ಲ, ಹೊಸ ಆಸೆ, ಭರವಸೆಗಳನ್ನು ನಾವು ಏನು ಇಟ್ಟುಕೊಂಡಿದ್ದೇವೆ ಇವೆಲ್ಲಾ ನಮ್ಮ ಭ್ರಮೆ ನಿರಶನ ಆಗಿದೆ.

ಶ್ರೀ ಎನ್. ಜಿ. ನಾಯಕ್.—ಹೆಂಗಸಿಗೆ ಒಂದು ತಾಳಿ ಮಾಡುವ ಯೋಗ್ಯತೆ ಇಲ್ಲ. ಅಂಥಾದ್ದನ್ನು ಇವರು ಮಾಡಿದ್ದಾರೆ......

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ.—೨೦ ಅಂಶದ ಕಾರ್ಯಕ್ರಮಗಳು ಯಾವುವು ಎಂಬ ಬಗ್ಗೆ ಯಾರಾದರೂ ಒಬ್ಬರು ನಿಮ್ಮಲ್ಲಿ ಹೇಳಲಿ......

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಅಲ್ಲಿ ಕೂರುವುದಕ್ಕೆ ೨೦ ಅಂಶದ ಕಾರ್ಯಕ್ರಮ ಎಂದು ಗೊತ್ತಿದ್ದರೆ ಸಾಕು, ಕಾರ್ಯಕ್ರಮಗಳು ಗೊತ್ತಿರಬೇಕು ಎಂದು ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—೨೦ ಅಂಶಗಳ ಕಾರ್ಯಕ್ರಮ ಅಂದರೆ......

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮಗಲ್ಲ ಕೇಳಿದುದ್ದು ಅವರಿಗೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ೨೦ ಅಂಶದ ಕಾರ್ಯಕ್ರಮಗಳನ್ನು ತೆಗಳಿಯೂ ಗೊತ್ತಿದೆ, ಹೊಗಳಿಯೂ ಗೊತ್ತಿದೆ.

ಒಬ್ಬ ಮಾನ್ಯ ಸದಸ್ಯರು.—ಅವರ ಸರ್ಕಾರ ಇದ್ದಾಗ ಯಾರಿಗೂ ತಾಳಿ ಕಟ್ಟುವ ಯೋಗ್ಯತೆ ಇಲ್ಲವೆಂದು ತಾಳಿಭಾಗ್ಯ ಯೋಜನೆ ಮಾಡಿದರು.

ಶ್ರೀ ಡಿ, ಬಿ. ಚಂದ್ರೇಗೌಡ.—ನಾನು ಏಕೆ ಈ ಮಾತು ಹೇಳಿದೆ ಎಂದು ಹೇಳುತ್ತೇನೆ

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರಾದ ಸಿಂಧ್ಯರವರು ಗುರುತರವಾದಂಥ ಆಪಾದನೆ ಮಾಡಿದರು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಪಾದನೆ ಅಲ್ಲ ೨೦ ಅಂಶದ ಕಾರ್ಯಕ್ರಮವನ್ನು ಚೆನ್ನಾಗಿ ಹೊಗಳಿದ್ದಾರೆ, ಚೆನ್ನಾಗಿ ತೆಗಳಿಯೂ ಇದ್ದಾರೆ ಎಂದು ಹೇಳಿದೆ, ಇದರಲ್ಲಿ ಆಪಾದನೆ ಏನಿದೆ. ಇದು ಕಾಂಪ್ಲಿಮೆಂಟ್.

ಶ್ರೀ ಕಾಗೋಡು ತಿಮ್ಮಪ್ಪ.—ಸದನಕ್ಕೆ ಆ ರೀತಿ ಅಭಿಪ್ರಾಯವನ್ನು ತಾವು ಕೊಡಕೂಡದು. ನಾನು ಸಮಾಜವಾದಿ ಪಕ್ಷದಲ್ಲಿದ್ದಾಗ ೨೦ ಅಂಶದ ಕಾರ್ಯಕ್ರಮಗಳ ಅನುಷ್ಠಾನದ ಕೆಲಸದಲ್ಲಿ ಆಸಕ್ತಿ ವಹಿಸಿದ್ದೆ, ನಂತರ ಯಾವತ್ತೂ ಅದನ್ನು ನಾನು ತೆಗಳಲಿಲ್ಲ, ಹೊಗಳಿದ್ದೇನೆ. ಆ ಕಾರ್ಯಕ್ರಮದಿಂದ ಪ್ರಯೋಜನ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—೨೦ ಅಂಶದ ಕಾರ್ಯಕ್ರಮದ ಬಗ್ಗೆ ಏಕೆ ಹೇಳಿದೆ ಎಂದರೆ, ೧೯೭೫ರಲ್ಲಿ ಈ ಕಾರ್ಯಕ್ರಮ ಬಂತು ನಂತರ ೧೯೮೨ರಲ್ಲಿ ಅದನ್ನು ರೀಡಿಫೈನ್ ಮಾಡಿದರು. ಈಗ ಈ ರೀತಿ ಒಟ್ಟಾರೆ ಇದು ರಾಜ್ಯದ ಮೂಲಾಧಾರ ಎಂದು ಹೇಳುವಾಗ, ಇದರ ಬಗ್ಗೆ ಇತರರ ಅನಿಸಿಕೆ ಏನಿದೆ ಎನ್ನುವುದೂ ಬಹಳ ಮುಖ್ಯ. ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ ಇದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ಹೇಳಿದ್ದಾರೆ.

> ''ಕಳೆದ ಕೆಲವು ವರ್ಷಗಳಲ್ಲಿ ನಮ್ಮ ಹಿಂದಿನ ಪ್ರಧಾನಮಂತ್ರಿಗಳಾದ ಶ್ರೀ ರಾಜೀವ ಗಾಂಧಿಯವರು ಮೂರು ಮುಖ್ಯ ಕಾರ್ಯಕ್ರಮಗಳನ್ನು-ಅಂದರೆ ಜವಾಹರ್ ರೋಜ್ ಗಾರ್ ಯೋಜನೆ ನೆಹರು ರೋಜ್‌ಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆಗಳನ್ನು ಆರಂಭಿಸಿದರು.''

ಎಂದು ಹೇಳಿದ್ದಾರೆ. ಇವನ್ನು ಮುಂದುವರಿಸಿ ಸಂತೋಷ 'ಕೆಲವು ವರ್ಷಗಳು' ಎಂಬ ಪದದ ಬಳಕೆಯಲ್ಲಿ ಎಚ್ಚರಿಕೆ ಇರಬೇಕಾಗುತ್ತದೆ ಜವಾಹರ್ ರೋಜ್‌ಗಾರ್ ಯೋಜನೆ ಬಂದು ಒಂದು ವರ್ಷವಾಯಿತು. ನೆಹರು ರೋಜ್‌ಗಾರ್ ಯೋಜನೆ ಬಂದು ೩-೪ ತಿಂಗಳಾಯಿತು. ಇಂದಿರಾ ಅವಾಸ್ ಯೋಜನೆಯನ್ನು ಆಗಲೇ ಮರ್ಜ್ ಮಾಡಿದ್ದಾರೆ. ಜವಾಬ್ದಾರಿ ಬೇಡವೇ, ಕೆಲವು ವರ್ಷಗಳು ಅಂದುಬಿಟ್ಟರೆ ಹೇಗೆ ? ಇಷ್ಟು ವರ್ಷ ಎಂದು ಹೇಳಿ. ವರ್ಷಗಳು ಕೆಲವಲ್ಲ, ಕೇವಲ ಒಂದು ವರ್ಷದ ಹಿಂದೆ ಜವಾಹರ್ ರೋಜ್‌ಗಾರ್ ಯೋಜನೆ ಬಂತು. ನೆಹರು ರೋಜ್‌ಗಾರ್ ಯೋಜನೆ ಬಂದು ೩ ತಿಂಗಳು ಅಥವಾ ೬ ತಿಂಗಳು ಆಗಿರಬಹುದು. ನಿಮ್ಮ ಕಲ್ಪನೆಗಳು ಏನು, ಯಾವ ಕಲ್ಪನೆಗಳನ್ನು ಇಟ್ಟುಕೊಂಡಿದ್ದೀರಿ. ಯಾವ ಕಾರ್ಯಕ್ರಮ ಬಂದು ಎಷ್ಟು ವರ್ಷವಾಯಿತು, ಅದರ ಗುರಿ ಏನು ಎನ್ನುವ ಕಲ್ಪನೆ ನಿಮಗೆ ಇಲ್ಲ.

> ''ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ನಿಮ್ಮ ಜನರ ಜೀವನಮಟ್ಟವನ್ನು ಸುಧಾರಿಸುವುದೇ ಈ ಕಾರ್ಯಕ್ರಮಗಳ ಗುರಿ''

ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಮುಂದೆ ಈ ಸರ್ಕಾರದ ಇಂತಹ ಯೋಜನೆಗಳನ್ನು ನಿಲ್ಲಿಸಲಾಗಿದೆ ಎನ್ನುವ ತೀರ್ಮಾನಕ್ಕೆ ಪ್ಲಾನಿಂಗ್ ಕಮಿಷನ್‌ನವರು ಬಂದರೆ ಈ ಸರ್ಕಾರ ಸ್ಥಗಿತವಾಗುತ್ತದೆಯೋ ಎಂದು ನಾನು ಕೇಳುತ್ತೇನೆ.

ಏತಕ್ಕೆಂದರೆ ಅವು ನಿಮ್ಮ ಕಾರ್ಯಕ್ರಮಗಳೇ. ನಮ್ಮ ಯೋಜನಾ ಆಯೋಗದ ಡೆಪ್ಯುಟಿ ಚೇರ್‌ಮನ್‌ರು, ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ಸ್. ಇವುಗಳನ್ನು ಕೇಂದ್ರ ಸರ್ಕಾರ ಮುಂದುವರಿಸಬಾರದು ಎನ್ನುವ ನಿರ್ಧಾರಕ್ಕೆ ಬಂದರೆ, ಅವರು ಡ್ರಾಸ್ಟಿಕಲಿ ಕಟ್ ಮಾಡುತ್ತೇವೆ, ಇಲ್ಲ. ಎಲಿಮಿನೇಟ್ ಮಾಡುತ್ತೇವೆಂದು ಹೇಳಿದರೆ ಏನುಗತಿ ? ಈ ಸ್ಪಾನ್ಸರ್ಡ್ ಸ್ಕೀಮ್‌ಗಳಿಂದ ೧೬ ಸಾವಿರಕೋಟಿ ರೂಪಾಯಿಗಳನ್ನು ರಾಜ್ಯಗಳು ಪಡೆಯುತ್ತಿವೆ. ಈ ಸ್ಕೀಮ್‌ಗಳನ್ನು ಹೊಸ ಸರ್ಕಾರ ಮುಂದುವರಿಸುವುದಿಲ್ಲವೆನ್ನುವ ನಿರ್ಣಯಕ್ಕೆ ಬಂದರೆ ಇಡೀ ಒಟ್ಟು ನೀವುಮಾಡಿದಂಥ ಭಾಷಣ, ನೀವು ಏನು ನಿಮ್ಮ ಹಿಂದುಗಡೆ ಇಟ್ಟುಕೊಂಡಿರುವ ಕಲ್ಪನೆ ಸಂಪೂರ್ಣವಾಗಿ ಬದಲಾವಣೆಯಾಗುತ್ತದೆ. ಆಗ ನಿಮ್ಮ ಕಾರ್ಯಕ್ರಮಗಳು ಏನು ? ಆ ಕಾರಣಕ್ಕಾಗಿ ನಾನು ಹೇಳುತ್ತಿರುವುದು ಈ ಭಾಷಣವನ್ನು ತಯಾರು ಮಾಡುವಾಗ ಕೇಂದ್ರ ಸರ್ಕಾರ, ಕನಿಷ್ಟ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ ಇವು ಮುಂದುವರಿಯುತ್ತವೆಯೋ ಇಲ್ಲವೇ ? ಅದಕ್ಕೆ ಅಲ್ಲಿಂದ ಬರತಕ್ಕಂಥ ಹಣ ನಿಂತು ಹೋದರೆ ನಿಮ್ಮ ಕಾರ್ಯಕ್ರಮ, ಕರ್ನಾಟಕದ ರಾಜ್ಯದ ಆಡಳಿತ ಸ್ಥಗಿತವಾಗಬೇಕೇ ? ಇದರ ಬಗ್ಗೆ ತಾವೇನಾದರೂ ಆಲೋಚನೆ ಮಾಡಿದ್ದೀರಾ ?

ಇದು ಒಂದು ಕಡೆ ಆಯಿತು. ನಾನು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ ಎಂದು ಹೇಳುವಾಗ ಒಂದೆರಡು ಸ್ಕೀಮ್‌ಗಳನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಉದಾಹರಣೆಗೆ ನಾನು ಒಂದೇ ಒಂದು ಕಾರ್ಯಕ್ರಮವನ್ನು ಹೇಳುತ್ತೇನೆ. ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಿಂದ ಬೆಂಗಳೂರು, ಹುಬ್ಬಳ್ಳಿ. ಧಾರವಾಡ ಮತ್ತು ಗುಲ್ಬರ್ಗಾ ಈ ಮೂರು ನಗರಗಳ ಒಟ್ಟಾರೆ ನಗರೀಕರಣ, ಸೈಟ್ಸ್ ಹಂಚುವುದು, ನೀರು ಕೊಡುವುದು, ಡ್ರೈನೇಜ್ ಫೆಸಿಲಿಟೀಸ್ ಇಂಥದ್ದನ್ನು, ಕಳೆದ ೮೮-೮೯ನೇ ಬಜೆಟ್‌ನಲ್ಲಿ ಅಳವಡಿಸಿದ್ದೆವು, ಅದು ಡಿಸೆಂಬರ್ ತಿಂಗಳಲ್ಲಿ ಟೇಕಾಫ್ ಆಯಿತು ಸುಮಾರು ೬೦೦ಕೋಟಿ ರೂಪಾಯಿಗಳ ಪ್ರಾಜೆಕ್ಟ್. ಅದು ಏನಾಯಿತು ? ಅದರ ಬಗ್ಗೆ ಒಂದು ಚಕಾರವನ್ನೂ ಕೂಡ ಇಲ್ಲಿ ಎತ್ತಲಿಲ್ಲ. ಈ ಡಿಸೆಂಬರ್‌ನಲ್ಲಿ ಅದು ಟೇಕ್‌ಆಫ್ ಆಗಬೇಕಾಗುತ್ತದೆ. ಕೇಂದ್ರ ಸರ್ಕಾರಕ್ಕೆ ಬರೆದು, ವರ್ಲ್ಡ್‌ಬ್ಯಾಂಕ್‌ನ ಅಸಿಸ್ಟೆನ್ಸನ್ನು ಅಲ್ಲಿಂದ ಮುಂದಕ್ಕೆ, ಲೇಟರ್ ಸ್ಟೇಜ್‌ನಲ್ಲಿ ಮೈಸೂರು. ಮಂಗಳೂರು ಮತ್ತು ಬೆಳಗಾಮ್ ಈ ನಗರಗಳನ್ನು ಸೇರಿಸಿ ಒಟ್ಟು ಸುಮಾರು ೩೦೦ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದು ಸೆಲ್ಫ್‌ಫೈನಾನ್ಸಿಂಗ್ ಸ್ಕೀಮ್. ಇದು ಏನಾಯಿತು ? ನಾನು ಉಳಿದದ್ದನ್ನೆಲ್ಲ ಆ ಮೇಲೆ ಹೇಳುತ್ತೇನೆ. '' ನನ್ನ ಸರ್ಕಾರ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಬದ್ಧವಾಗಿದೆ. ಈ ಉದ್ದೇಶಕ್ಕಾಗಿ ರಚಿಸಲಾದಂತಹ ಸಂಸ್ಥೆಗಳನ್ನು ಸೂಕ್ತವಾಗಿ ಪುನಃ ಸಂಘಟಿಲಾಗುವುದು ಹಾಗೂ ಅವಶ್ಯವಿರುವಲ್ಲಿ ಅವುಗಳನ್ನು ಬಲಪಡಿಸಲಾಗುವುದು. ಹೀಗೆ ಮಾಡುವುದರಿಂದ ಅವು ಸ್ಥಿರವಾಗುತ್ತವೆ ಮತ್ತು ಜನತೆಯು ಸ್ಥಳೀಯ ಆಶೋತ್ತರಗಳನ್ನು ಹಾಗೂ ಅಗತ್ಯತೆಗಳನ್ನು ಈಡೇರಿಸಲು ಸಮರ್ಥವಾಗುತ್ತವೆ.'' ಎಂದು ಹೇಳಿದ್ದಾರೆ, ಚುನಾವಣೆಗೆ ಪೂರ್ವ ರಾಜ್ಯಪಾಲರ ಆಡಳಿತ ಬಂದ ಸಂದರ್ಭದಲ್ಲಿ ಅಥವಾ ಬಂದ ಮೇಲೆ ಪ್ರತಿಪಕ್ಷದ ನಾಯಕರಾಗಿದ್ದು ಮತ್ತು ಮಂತ್ರಿಮಂಡಲದ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಟಿ. ಎನ್. ನರಸಿಂಹಮೂರ್ತಿಗಳ ಒಂದು ಆಜ್ಞೆ. ಆಗ ಆಜ್ಞೆ ಕೊಡುವುದಕ್ಕೆ ಆಗುತ್ತಿರಲಿಲ್ಲ ಆದರೆ ಅವರ ಭಾಷೆ ಆಜ್ಞೆ ಕೊಡುವಂಥ ರೀತಿಯಲ್ಲಿರುತ್ತಿತ್ತು. ರಾಷ್ಟ್ರಪತಿ ಆಡಳಿತ ಬಂದಕೂಡಲೇ ಹೇಳಿದ ಹೇಳಿಕೆ ಇದು. ಈ ಜಿಲ್ಲಾ

ಪರಿಷತ್ತುಗಳನ್ನು ವಜಾ ಮಾಡಿಕೊಡುತ್ತೇವೆಂದು. ನಿನ್ನೆ ಅವರ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡನೆ ಮಾಡಿದ ಹಿರಿಯ ಸದಸ್ಯರಾದ ಶ್ರೀಮಾನ್ ಖರ್ಗೆಯವರು ಹೇಳಿದರು. ರಾಜೀನಾಮೆ ಕೊಡುವುದಕ್ಕೆ ನಮಗೆ ಬಹಳ ತೊಂದರೆಯಾಗಿಬಿಟ್ಟಿದೆ, ಜಿಲ್ಲಾ ಪರಿಷತ್‌ಗಳಲ್ಲಿ ಮಂಡಲ್ ಪಂಚಾಯತ್‌ಗಳಲ್ಲಿ ಎಲ್ಲೆಲ್ಲಿ ಮೆಜಾರಿಟಿ ಇಲ್ಲವೋ ಅಲ್ಲಿ ರಾಜೀನಾಮೆ ಕೊಡುವುದಿಲ್ಲವೇ ? ಈ ರೀತಿಯ ನಿಮ್ಮ ವಿಕೇಂದ್ರೀಕರಣದ ಕಲ್ಪನೆ ಇದ್ದರೆ ನಾನು ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಈ ವಿಕೇಂದ್ರೀಕೃತ ವ್ಯವಸ್ಥೆ ಈ ಸದನದಲ್ಲಿ ಮಂಡನೆಯಾದಾಗ ನಾನು ಈ ಸಭೆಯ ಅಧ್ಯಕ್ಷನಾಗಿ ಇಲ್ಲಿ ಕುಳಿತಿದ್ದೆ. ಇಲ್ಲಿ ಕುಳಿತುಕೊಂಡು ಯಾರು ಏನು ಮಾತನಾಡಿದ್ದೀರಿ ಎನ್ನುವುದನ್ನು ತಾವು ಸ್ವಲ್ಪ ತೆಗೆದು ನೋಡಬೇಕು. ಅದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಬೇಕೆಂದು ಆಯಿತು. ಕಳಿಸಿದ್ದು ಆಯಿತು. ಜಂಟಿ ಸಲಹಾ ಸಮಿತಿಯ ವರದಿ ಬಂದಮೇಲೆ ಕೇಂದ್ರ ಸರ್ಕಾರದ ಅನುಮತಿಗಾಗಿ, ರಾಷ್ಟ್ರಪತಿಗಳ ಅನುಮತಿಗಾಗಿ ಯಾವಾಗ ಕಳುಹಿಸಿದ್ದೆವು ಎನ್ನುವುದು ಮಾನ್ಯ ಸದಸ್ಯರಿಗೆ ತಿಳಿದಿರುತ್ತದೆ.

೨-೦೦ ಪಿ. ಎಂ.

೧೧-೮-೮೩ರಲ್ಲಿ ಈ ಮನೆಯಲ್ಲಿ ಇಂಟ್ರಡ್ಯೂಸ್ ಮಾಡಲಾಯಿತು. ೧೨-೮-೮೩ರಲ್ಲಿ ಜಂಟೀ ಸಲಹಾ ಸಮಿತಿಗೆ ಕಳುಹಿಸಿಕೊಡಲಾಯಿತು. ೨೨-೩-೮೪ರಲ್ಲಿ ಕನ್ಸಿಡರೇಷನ್ ಆಗಿ ಸದನದಲ್ಲಿ ಪಾಸು ಮಾಡಿದ್ದೇವೆ. ೭-೪-೮೪ರಲ್ಲಿ ರಾಷ್ಟ್ರಪತಿಗಳ ಒಪ್ಪಿಗೆಗಾಗಿ ಕೇಂದ್ರಸರ್ಕಾರಕ್ಕೆ ಕಳುಹಿಸಲಾಗಿದೆ. ಇದಕ್ಕೆ ಕನ್‌ಸೆಂಟ್ ಯಾವಾಗ ಕೊಡುತ್ತಾರೆಂದರೆ ಜುಲೈ ೮೮ರಲ್ಲಿ. ನಾನು ಇದನ್ನು ಏತಕ್ಕೆ ಹೇಳಿದೆ ಅಂದರೆ, ಉದ್ದೇಶ ಇಷ್ಟೆ. ವಿಕೇಂದ್ರೀಕರಣ ವ್ಯವಸ್ಥೆಯ ರೂವಾರಿ ದಿವಂಗತ ನಜೀರ್‌ಸಾಬ್‌ರವರು ರಾಷ್ಟ್ರಪತಿ ಭವನದ ಮುಂದೆ ಆಮರಣಾಂತ ಉಪವಾಸದ ನಿರ್ಧಾರವನ್ನು ಪ್ರಕಟಣೆ ಮಾಡಿದ ಮೇಲೆ ಈ ಮಸೂದೆ ಒಪ್ಪಿಗೆ ಪಡೆಯಿತು. ಈ ಮಸೂದೆಗೆ ಒಪ್ಪಿಗೆ ಪಡೆಯಬಾರದೆಂದು ಯಾವ ಕಾರಣಕ್ಕಾಗಿ ನಿಂತಿತ್ತು ಎನ್ನುವುದರ ಬಗ್ಗೆ ತಾವು ವಿವರಣೆ ಕೊಡಬೇಕು. ಏಕೆಂದರೆ, ಆಗ ಕೇಂದ್ರದಲ್ಲಿ ನಿಮ್ಮ ಸರ್ಕಾರ ಇತ್ತು. ಎಷ್ಟರಮಟ್ಟಿಗೆ ವಿಕೇಂದ್ರೀಕರಣ ವ್ಯವಸ್ಥೆಯ ಬಗ್ಗೆ ನಿಮಗೆ ನಂಬಿಕೆ ಇತ್ತು ಎಂದು ಶಂಕಿಸುವುದಕ್ಕೆ ಇದು ಒಂದು ಸಕಾರಣವಾಗಿದೆ. ನಿಮ್ಮ ಸರ್ಕಾರ ಬಂದಕೂಡಲೇ ಯಾವ ಕೆಲಸವೂ ಇಲ್ಲ. ನೀತಿ ನಿರೂಪಣೆ ಇಲ್ಲ, ಯಾವ ಕಾರ್ಯಕ್ರಮಗಳನ್ನು ಹೇಳಬೇಕಾಗಿಲ್ಲ. ಹೇಳಿದ ಕಾರ್ಯಕ್ರಮಕ್ಕೆ ತಯಾರಿ ಮಾಡಬೇಕಾಗಿಲ್ಲ. ಮೊದಲನೆಯ ಮಂತ್ರಿಮಂಡಲದ ಸಭೆ ಮಾಡಿ, ಮಾಡಿದ ತೀರ್ಮಾನವಾದರೂ ಏನು ? ವಿಕೇಂದ್ರೀಕರಣ ವ್ಯವಸ್ಥೆಯ ಮೇಲೆ ಗದಾಪ್ರಹಾರ. ವಿಕೇಂದ್ರೀಕರಣ ವ್ಯವಸ್ಥೆಯ ಮೂಲಕ ನೇಮಕ ಮಾಡಿದ ಉಪಧ್ಯಾಯರ ನೇಮಕಾತಿಯನ್ನು ಇರ್ರೆಗ್ಯೂಲರ್ ಎಂದು ಹೇಳಿದ್ದುದು ಅಪರಾಧವಾಗಿದ್ದರೆ ಅದನ್ನು ಸರಿಪಡಿಸೋಣ. ಕಾನೂನಿನಲ್ಲಿ ತಪ್ಪು ಮಾಡಿದ್ದರೆ ಸರಿಪಡಿಸೋಣ, ಆದರೆ ಇವರು ಮಂತ್ರಿಮಂಡಲದ ಸಭೆಯಲ್ಲಿಟ್ಟು ಮಾಡಿದ ಮೊದಲನೆ ಕೆಲಸ ವಿಕೇಂದ್ರೀಕರಣ ವ್ಯವಸ್ಥೆಯ ಮೇಲೆ ಗಧಾಪ್ರಹಾರ. ಈ ದೇಶದಲ್ಲಿ ೪೦ ವರ್ಷಗಳಿಂದ ಅಂದರೆ, ನಾಲ್ಕು ದಶಕಗಳಿಂದ ೭ನೇ ಪಂಚವಾರ್ಷಿಕ ಯೋಜನೆ ಮುಗಿದರೂ ಈ ದೇಶದ ೧೪ ವರ್ಷ ವಯಸ್ಸಿನ ಮಕ್ಕಳಿಗೆ ಕಡ್ಡಾಯವಾಗಿ ವಿದ್ಯಾಭ್ಯಾಸ ಕೊಡುತ್ತೇವೆಂದು ದೇಶದ ಜನರ ಮುಂದೆ ರಾಜ್ಯಾಂಗವನ್ನು ಇಡಲಾಯಿತು. ಆದರೆ, ಅದನ್ನು ಅಳವಡಿಸಿಕೊಂಡು ಅನುಷ್ಠಾನಕ್ಕೆ ತರುವಾಗ ಕೆಲಸಕ್ಕೆ ಈ ಮೂಲಕ ಅಡ್ಡಿ. ಮೂರು ಸಾವಿರ ಉಪಾಧ್ಯಾಯರನ್ನು ತೆಗೆದುಹಾಕುವ ಕೆಲಸವನ್ನು ಈ ಸರ್ಕಾರದವರು ಮಾಡಿದ್ದಾರೆ, ಇದಕ್ಕಿಂತ ಉತ್ತಮವಾದ ಕೆಲಸ ಮಾಡುವುದಕ್ಕೆ ಇವರಿಗೆ ಆಗುತ್ತಿರಲಿಲ್ಲವೆ ? ಕೇಂದ್ರದಲ್ಲೂ ಹೊಸ ಸರ್ಕಾರ ಬಂದಿದೆ. ಅಲ್ಲಿ ಏನೇನು ತೀರ್ಮಾನಗಳನ್ನು ಮಾಡಿದ್ದಾರೆ, ಯಾವುದಕ್ಕೆ ಪ್ರಿಯಾರಿಟಿ ಹಾಕಿಕೊಂಡಿದ್ದಾರೆ. ನಿಮ್ಮಲ್ಲಿ ಪ್ರಿಯಾರಿಟಿ ಹಾಳಾಗಿ ಹೋಗಲಿ, ವಿಕೇಂದ್ರೀಕರಣ ವ್ಯವಸ್ಥೆಯ ಬಗ್ಗೆಯೇ ನಿಸ್ಸಂಶಯವಾಗಿ ಸಂಶಯ ವ್ಯಕ್ತಮಾಡಬೇಕಾಗಿದೆ. ಮುಂದೆ ಇದಕ್ಕೆ ತಿದ್ದುಪಡಿ ತರುತ್ತೇವೆಂದು ಹೇಳಿದ್ದೀರಿ.

ಶ್ರೀ ಬಸವರಾಜು.—ಮಾನ್ಯ ರಾಜ್ಯಪಾಲರ ಭಾಷಣವನ್ನು ಪ್ರಾರಂಭ ಮಾಡಿದಾಗಿನಿಂದ ಇದರಲ್ಲಿ ಏನೂ ಇಲ್ಲ. ಇವರ ಭಾಷಣದಲ್ಲಿ ಯಾವುದೇ ನಿರ್ಧಿಷ್ಟವಾದ ಗುರಿಯನ್ನೂ ಇದರಲ್ಲಿ ಹಾಕಿಲ್ಲ ಎಂದು ಹೇಳುತ್ತಿದ್ದೀರಿ. ಮತ್ತು ನಮ್ಮ ಜನತಾಪಕ್ಷದ ಜನತಾದಳದ ಸರ್ಕಾರ ಇದ್ದಾಗ ಚೆನ್ನಾಗಿ ಕೆಲಸ ಮಾಡಿದೆ ಎಂದು ಹೇಳುತ್ತಿದ್ದೀರಿ...

ಶ್ರೀ ಬಸವರಾಜರಾಯರೆಡ್ಡಿ.—ಕಡತ ತೆಗೆಸಿ ನೋಡಿ ಸ್ವಾಮಿ...

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಹೊಸದಾಗಿ ಬಂದಿದ್ದೀರಿ.

ಶ್ರೀ ಬಸವರಾಜು.—ನೀವು ಎಲ್ಲರಿಗೂ ಕೂಡ ಹೊಸದಾಗಿ ಇಲ್ಲಿಗೆ ಬಂದಿದ್ದೀರಿ, ಹೊಸದಾಗಿ ಇಲ್ಲಿಗೆ ಬಂದಿದ್ದೀರಿ ಎಂದು ಹೇಳುತ್ತಲೇ ಇದ್ದೀರಿ. ನಾನು ೧೯೭೮ರಲ್ಲೇ ಆಣೆಯ ಸದಸ್ಯತ್ವವನ್ನು ತೆಗೆದು ಕೊಂಡರೂ ಅಂದಿನಿಂದಲೂ ಸದಸ್ಯನಾಗಿದ್ದೇನೆ, ಹೊಸದಾಗಿ ಬಂದಿದ್ದೀರಿ ಎಂದು ನೀವು ನನಗೆ ಹೇಳ ಬೇಡಿ. ಬೇರೆಯವರಿಗೆ ಬೇಕಾದರೆ ಹೇಳಿ. ನೀವು ಮೊದಲಿನಿಂದಲೂ ಡಬಲ್ ಮೀನಿಂಗ್ ಬರತಕ್ಕ ರೀತಿಯಲ್ಲಿ ಮಾತನಾಡುತ್ತಿರುವುದನ್ನು ನಾನು ನೋಡುತ್ತಲೇ ಇದ್ದೇನೆ. ನಿಮ್ಮ ಜನತಾ ದಳ ಅಧಿಕಾರಕ್ಕೆ ಬಂದಮೇಲೆ ಜನರಿಗೆ ಸುಳ್ಳು ಪ್ರಣಾಳಿಕೆಯನ್ನು ಕೊಟ್ಟು ಬಟ್ಟೆ, ಪುಸ್ತಕ, ಅಕ್ಕಿ, ರಾಗಿ ಎಲ್ಲವನ್ನೂ ನಿಮ್ಮ ಮನೆಯ ಬಾಗಿಲಿಗೆ ಒದಗಿಸುತ್ತೇವೆಂದು ಹೇಳಿದಿರಿ...

ಶ್ರೀ ಡಿ. ಬಿ. ಚಂದ್ರೇಗೌಡ.—ನೀವು ಭಾಷಣ ಮಾಡುತ್ತಿದ್ದೀರೋ ಅಥವಾ ರಿಪ್ಲೈ ಕೊಡು ತ್ತಿದ್ದೀರೋ ?

(ಗೊಂದಲ)

ಶ್ರೀ ಬಸವರಾಜು.—ನಮ್ಮ ಸರ್ಕಾರ ಮೊದಲಿನಿಂದಲೂ ಸರ್ವತೋಮುಖವಾದ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಲೇ ಬಂದಿದೆ. ಆದರೆ ನೀವು ಏನೂ ಮಾಡಿಲ್ಲವೆಂದು ಹೇಳು ತ್ತಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಹೊಸ ಸದಸ್ಯರು ಇನ್ನೂ ಕಲಿತುಕೊಳ್ಳಬೇಕು. ಮಾನ್ಯ ಅಧ್ಯಕ್ಷಿಣಿಯವರೆ ಮಾನ್ಯ ಸದಸ್ಯರು "ಸುಳ್ಳು" ಎಂಬ ಪದವನ್ನು ಬಳಸಿದ್ದಾರೆ. ಅದು ಕಡತಕ್ಕೆ ಹೋಗಬಾರದು.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷಿಣಿಯವರೆ, ನನಗೆ ಗೊತ್ತಿರುವಂತೆ ನಮ್ಮ ವಿರೋಧಪಕ್ಷದ ನಾಯಕರಿಗೆ ಸಾಕಷ್ಟು ಅನುಭವವಿದೆ.

ಶ್ರೀ ಬಸವರಾಜು.—ಸದನದ ನೀತಿ ನಿಯಮಗಳನ್ನು ಅನುಸರಿಸುವುದಕ್ಕೆ ನಿಮಗೆ ಬರುವುದಿಲ್ಲ, ಮತ್ತೆ ನೋಡಿದರೆ ನಮಗೆ ಹೇಳುತ್ತಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಹೊಸದಾಗಿ ಬಂದಿರತಕ್ಕ ಮಾನ್ಯ ಸದಸ್ಯರಿಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮಿಂದ ಈ ಕೆಲಸವನ್ನು ಮಾಡಿಸುವುದಕ್ಕೆ ಜನರು ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿಕೊಟ್ಟಿದ್ದಾರೆ. ಉತ್ತರ ಕೊಡುವುದಕ್ಕೆ ನಮ್ಮ ಪಕ್ಷದವರಿಗೆ ಅವಕಾಶವನ್ನು ಕೊಟ್ಟರೆ ಉತ್ತರವನ್ನು ಕೊಡುತ್ತೇವೆ. ಆಡಳಿತದಲ್ಲಿ ವಿಕೇಂದ್ರೀಕರಣದ ಅವಶ್ಯಕತೆ ಬಹಳವಾಗಿದೆ. ಈ ವಿಕೇಂದ್ರೀಕರಣದಲ್ಲಿ ಎರಡು ಅರ್ಥವಿದೆ. ಅದರಲ್ಲಿ ಮೊದಲನೆಯದು ಎಂದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ. ಇದರ ಬಗ್ಗೆ ನೀವು ಏನನ್ನು ಆಲೋಚನೆ ಮಾಡಿದ್ದೀರಿ? ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕೇಂದ್ರ ಸರ್ಕಾರಕ್ಕೆ ನಾವು ಯಾವುದೇ ಒಂದು ಮನವಿಯನ್ನು ಅರ್ಪಿಸುವಾಗಲೂ ಅದರಲ್ಲಿ ದೈನ್ಯತೆಯ ಧ್ವನಿ ಕಾಣಿಸುತ್ತದೆ. ಈ ದೈನ್ಯತೆಯ ಧ್ವನಿ ಇರಬಾರದೆಂದು ನಮ್ಮ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಂಬಂಧ ಅನ್ಯೋನ್ಯತೆಯಿಂದಿರಬೇಕು. ಆರ್ಥಿಕ ವಿಕೇಂದ್ರೀಕರಣವನ್ನು ಮಾಡುವಾಗ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಸ್ವಾಯತ್ತತೆ ಇರಬೇಕೆಂದು ನಾವು ಹೇಳಿದ್ದೇವೆ. ಆದರೆ ಈ ಬಗ್ಗೆ ನಿಮ್ಮ ಕಲ್ಪನೆ ಏನು? ಇದನ್ನು ನೀವು ಪ್ರತಿಪಾದಿಸಿ ರಾಜ್ಯದ ಜನತೆಯ ಮುಂದಿಡಬೇಕು. ರಾಜ್ಯ ಸರ್ಕಾರ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ನಡುವೆ ಇರತಕ್ಕ ಸಂಬಂಧವೇನು? ಈ ಬಗ್ಗೆ ನಿಮ್ಮ ಕಲ್ಪನೆಗೆ ಏನು? ಈ ಕಲ್ಪನೆಗಳು ನಿಮಗೆ ಸರಿಯಾಗಿದ್ದರೆ ಈಗ ತೆಗೆದುಕೊಂಡಿರತಕ್ಕ ನಿರ್ಣಯ ಅಥವಾ ಮಾಡಿರತಕ್ಕ ತೀರ್ಮಾನ ಈ ಸ್ವಾಯತ್ತತೆಗೆ ಧಕ್ಕೆ ಬರುವುದಿಲ್ಲವೇ? ರಾಜ್ಯಾಂಗದ ೬೪ನೇ ತಿದ್ದುಪಡಿ ಯಲ್ಲಿ ಏತಕ್ಕೆ ಇದನ್ನು ತಂದಿರಿ? ವಿಕೇಂದ್ರೀಕೃತ ವ್ಯವಸ್ಥೆಗೆ ಏನೋ ದಾರಿ ಮಾಡುತ್ತೇವೆಂದು ರಾಜ್ಯಾಂಗದ ತಿದ್ದುಪಡಿಯ ಮೂಲಕ ಪ್ರತಿಪಾದನೆ ಮಾಡಿದಾಗ ಅದನ್ನು ವಿರೋಧ ಮಾಡಿದವನು ನಾನು. ವಿರೋಧ ಮಾಡುವಾಗ ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆ ಬರುತ್ತದೆಂಬ ಆಧಾರದ ಮೇಲೆ ಮಾಡಿದ್ದೇನೆ. ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆ ಬರಬಾರದೆಂದು ಹೇಳಿದ್ದೇನೆ. Concept of recentralisation ಬಗ್ಗೆ ನಾವು ಪರವಾಗಿದ್ದೇವೆ. ಆದರೆ ನೀವು ಏನು ರಾಜ್ಯಾಂಗದ ೨೪೬ನೇ ವಿಧಿ ಪ್ರಕಾರ ರಾಜ್ಯಗಳಿಗೆ ಕೊಟ್ಟ ಅಧಿಕಾರದ ಮೇಲೆ ರಾಜ್ಯಾಂಗದ ತಿದ್ದುಪಡಿ ಮೂಲಕ ಗಧಾ ಪ್ರಹಾರ ಮಾಡುವುದಕ್ಕೆ ಪ್ರಯತ್ನ ಮಾಡಿದಿರಿ ಅದನ್ನು ನಾನು ವಿರೋಧ ಮಾಡಬೇಕಾಯಿತು. ಆದುದರಿಂದ ಈ ನಿಮ್ಮ ಒಟ್ಟು ಕಲ್ಪನೆಯ ರೂಪು ರೇಖೆಗಳನ್ನು ಸದನಕ್ಕೆ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕಳೆದ ಆರು ವರ್ಷಗಳಿಂದ ಏನು ಮುನಿಸಿಪಾಲಿಟಿಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ಚುನಾವಣೆಗಳನ್ನು ನಡೆಸಲಾಗಿಲ್ಲ ಇದನ್ನು ನೀವು ತಪ್ಪಾಗಿ ಬರೆದಿದ್ದೀರಿ,

ಅಥವಾ ಅಚ್ಚು ಹೆಚ್ಚು ಕಡಿಮೆಯಾಗಿದೆಯೋ ನನಗೆ ತಿಳಿದಿಲ್ಲ. ಇಂದಿನ ಸರ್ಕಾರದ ಬಗ್ಗೆ ನನಗೆ ಹೆಮ್ಮೆ ಇದೆ, ಗೌರವ ಇದೆ. ಏಕೆಂದರೆ ಜನತಂತ್ರದ ಪ್ರತಿ ಹಂತದಲ್ಲಿ ಯಾವ ಯಾವ ಕಾಲದಲ್ಲಿ ಚುನಾವಣೆ ಆಗಬೇಕಾಗಿತ್ತು ಆ ವರ್ಷದಲ್ಲಿ ಚುನಾವಣೆ ನಡೆಸಿದ್ದೀರಿ. ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ೧೪ ವರ್ಷಗಳ ಕಾಲ ಚುನಾವಣೆ ನಡೆದಿರಲಿಲ್ಲ. ೧೯೮೩ರಲ್ಲಿ ಚುನಾವಣೆ ನಡೆಸಿ ಅದರ ಅವಧಿ ಮುಗಿದದ್ದು ೧೯೮೮ರಲ್ಲಿ ನಂತರ ರಾಜ್ಯಪಾಲರ ಆಡಳಿತ ಬಂತು. ಆಗ ಎಕ್ಸ್‌ಟೆನ್‌ಷನ್ ಕೊಟ್ಟಿರಿ. ಆರು ವರ್ಷಗಳಿಂದ ಮುನಿಸಿಪಾಲಿಟಿಗಳಿಗೆ ಕಾರ್ಪೊರೇಷನ್‌ಗಳಿಗೆ ಚುನಾವಣೆ ನಡೆಸಲಾಗಿಲ್ಲವೆಂದು ಯಾವ ಆಧಾರದ ಮೇಲೆ ಹೇಳಿದ್ದೀರಿ? ಇಂಥ ಸತ್ಯಕ್ಕೆ ದೂರವಾದ ಮಾತನ್ನು ರಾಜ್ಯಪಾಲರ ಬಾಯಲ್ಲಿ ಏತಕ್ಕೆ ಹೇಳಿಸಿದ್ದೀರಿ? ದೇಶದ ಮುಂದಿರತಕ್ಕ ಡಾಕ್ಯುಮೆಂಟಿನಲ್ಲಿ ಸತ್ಯದ ಪ್ರತಿಪಾದನೆ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾದ ಮೇಲೆ ೧೩೮ ಮುನಿಸಿಪಾಲಿಟಿಗಳ ಅವಧಿ ಮುಗಿದ ಮೇಲೆ ಚುನಾವಣೆ ಮಾಡಲಿಲ್ಲ, ಅವುಗಳಿಗೆ ಆಡಳಿತಾಧಿಕಾರಿಗಳನ್ನು ಹಾಕಿದರು. ಈಗ ನಾವು ಯಾವ ಯಾವ ಮುನಿಸಿಪಾಲಿಟಿಗಳ ಅವಧಿ ಮುಗಿದು ಆಡಳಿತಾಧಿಕಾರಿಗಳನ್ನು ಹಾಕಿದ್ದಾರೆ ಅವಕ್ಕೆ ಚುನಾವಣೆ ಮಾಡುತ್ತೇವೆಂದು ಹೇಳಿದ್ದೇವೆ. ಅದರಲ್ಲಿ ತಪ್ಪೇನು ಇದೆ? ನಾವು ೬-೮ ವರ್ಷ ಚುನಾವಣೆ ನಡೆಸಲಿಲ್ಲವೆಂದು ಹೇಳಿದ್ದಕ್ಕೆ ಉತ್ತರ ಕೊಟ್ಟಿರಿ. ಆದರೆ ೯ ತಿಂಗಳು ಏತಕ್ಕೆ ವೆಯಿಟ್ ಮಾಡಿದಿರಿ? ತಕ್ಷಣ ನೋಟಿಫಿಕೇಷನ್ ಮಾಡ ಬಹುದಿತ್ತಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.— ನೀವು ಅನೇಕ ವರ್ಷಗಳ ಕಾಲ ಅಂಥ ಪದವನ್ನು ಬಳಸಿದ್ದೀರಿ. ಹಿಂದೆ ೧೪ ವರ್ಷಗಳ ಕಾಲ ಚುನಾವಣೆ ಆಗದಿದ್ದುದಕ್ಕೆ ನಮ್ಮ ಕಾಲದಲ್ಲಿ ಚುನಾವಣೆ ಮಾಡಿದ್ದೇವೆ. ಸತ್ಯ ಸತ್ಯವೇ, ಅದು ಎಲ್ಲಿದ್ದರೂ ಅಷ್ಟೆ. ಅನೇಕ ವರ್ಷಗಳಿಂದ ಚುನಾವಣೆ ಆಗಲಿಲ್ಲವೆಂದು ಏತಕ್ಕೆ ಸುಮ್ಮನೆ ರಿಮಾರ್ಕ್ಸ್ ಮಾಡುತ್ತೀರಿ ? ಒಂದು ವರ್ಷದಿಂದ ಚುನಾವಣೆ ಆಗಲಿಲ್ಲವೆಂದು ಹೇಳಿ. ಒಪ್ಪಿಕೊಳ್ಳುತ್ತೇನೆ. ಅನೇಕ ವರ್ಷಗಳಿಂದ ಚುನಾವಣೆ ಆಗಿಲ್ಲವೆಂದು ಏತಕ್ಕೆ ರಾಜ್ಯಪಾಲರ ಭಾಷಣದಲ್ಲಿ ಅಚ್ಚು ಹಾಕಿಸಿದ್ದೀರಿ ಚುನಾವಣೆಯನ್ನು ಯಾವಾಗ ಮಾಡುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಿ.

SRI MALLIKARJUNA KHARGE.— Earliest.

ಶ್ರೀ ಡಿ. ಬಿ. ಚಂದ್ರೇಗೌಡ.— ೧೪ ವರ್ಷ ಅರ್ಲಿಯಸ್ಟ್ ಆಗಿತ್ತು. ಒಂದು ವರ್ಷ ಅನೇಕ ವರ್ಷಗಳಾಗಿವೆ ಅಲ್ಲವೆ? ನಾನು ಹೇಳಿದ್ದುದು ಬೆಂಗಳೂರು ನಗರ ಸಭೆಗೆ ೧೪ ವರ್ಷಗಳ ಕಾಲ ಚುನಾವಣೆ ನಡೆದಿರಲಿಲ್ಲವೆಂದು. ನಮ್ಮ ಸರ್ಕಾರ ಬಂದ ಮಾರನೇ ವರ್ಷವೇ ಚುನಾವಣೆ ನಡೆಯಿತು. ೧೯೭೦ರಿಂದ ಚುನಾವಣೆ ನಡೆದಿರಲಿಲ್ಲ. ಸುಮ್ಮನೆ ಏಕೆ ಎದ್ದು ನಿಲ್ಲುತ್ತೀರಿ. ನಾನು ಹೇಳುವುದನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಿ. ಹೀಗೆ ಚುನಾವಣೆ ನಡೆಸುತ್ತೇವೆ ಎಂದು ಹೇಳುವವರು ಕನಿಷ್ಠ ತಮ್ಮ ಪಕ್ಷದ ಆಂತರಿಕ ಚುನಾವಣೆಯನ್ನಾದರೂ ನಡೆಸುತ್ತೀರಾ ಒಂದು ಸಾರಿ? ಮೂರು ತಿಂಗಳಿಗೆ, ಆರು ತಿಂಗಳಿಗೆ ಒಬ್ಬೊಬ್ಬರು ಅಡ್‌ಹಾಕ್ ಅಧ್ಯಕ್ಷರನ್ನು ನೇಮಿಸುತ್ತೀರಿ.

ಶ್ರೀ ಜಿ. ಎಸ್. ಶಿವನಂಜಪ್ಪ. ಆ ಚಿಂತೆ ನಿಮಗೆ ಬೇಡ.

ಶ್ರೀ ಡಿ. ಬಿ. ಚಂದ್ರೇಗೌಡ.— ನಮಗೆ ನಂಬಿಕೆ ಬರಬೇಕಾದರೆ, ದೇಶದ ಜನರಿಗೆ ನಂಬಿಕೆ ಬರಬೇಕಾದರೆ, ನಿಮ್ಮ ಮಾತಿನ ಮೇಲೆ ವಿಶ್ವಾಸ ಇಡಬೇಕಾದರೆ...

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.— ನಿಮ್ಮದೂ ಅಡ್‌ಹಾಕ್, ನಮ್ಮದೂ ಅಡ್‌ಹಾಕ್.

ಶ್ರೀ ಡಿ. ಬಿ. ಚಂದ್ರೇಗೌಡ.— ನಮಗೆ ನಂಬಿಕೆ ಬರುವುದಕ್ಕೆ, ದೇಶದ ಜನರಿಗೆ ನಂಬಿಕೆ ಬರುವುದಕ್ಕೆ ಈ ಸದನಕ್ಕೆ ನಂಬಿಕೆ ಬರುವುದಕ್ಕೆ ಒಂದು ಸಾರಿ ನಿಮ್ಮ ಪಕ್ಷದಲ್ಲಿ ಚುನಾವಣೆ ಮಾಡಿ. ಆಗ ನಂಬಿಕೆ ಬರುತ್ತದೆ. ಒಂದು ಸಾರಿ ಮಾಡುವುದಕ್ಕೆ ಪ್ರಯತ್ನ ಮಾಡಿ.

ಸದಸ್ಯರೊಬ್ಬರು — ಚುನಾವಣೆ ನಡೆಸಿ ಎಂದು ಡೆಲ್ಲಿಗೆ ಹೋಗಿದ್ದಾಗ ಏತಕ್ಕೆ ಹೇಳಲಿಲ್ಲ?

ಶ್ರೀ ಡಿ. ಬಿ. ಚಂದ್ರೇಗೌಡ.— ನಿಮ್ಮ ಮುಖ್ಯಮಂತ್ರಿಗಳು ಯಾರು ಎಂಬುದು ನಿಮಗೆ ತಿಳಿದಿಲ್ಲ ಎಂದು ಕಾಣುತ್ತದೆ. ನಾನು ಈ ಮಾತು ಹೇಳಬಾರದು ಎಂದು ಇದ್ದೆ. ಆದರೂ ನನ್ನ ಬಾಯಲ್ಲಿ ಹೇಳಿಸುತ್ತಿದ್ದೀರಿ. ಇಲ್ಲದಿದ್ದರೆ ಬೈರೇಗೌಡರ ಪ್ರಶ್ನೆಗೆ ಉತ್ತರ ಹೇಳುವಾಗಲೇ ಹೇಳುತ್ತಿದ್ದೆ. ಮಾನ್ಯ ವೀರೇಂದ್ರ ಪಾಟೀಲರು ಯಾರು ಎಂಬುದು ತಮಗೆ ಗೊತ್ತೊ? ಚುನಾವಣೆ ಯಾರ ಯಾರ ವಿರುದ್ಧ ಆಯಿತು, ಚಿಕ್ಕಮಗಳೂರಿನಲ್ಲಿ ಯಾರು ಯಾರು ನಿಂತಿದ್ದರು ನಿಮಗೆ ಗೊತ್ತೊ? ಯಾರು ಎಲ್ಲಿದ್ದರು ಎಂಬ ಪ್ರಶ್ನೆ ಈಗ ಬೇಡ.

ಶ್ರೀ ಕೆ. ಎಚ್. ರಂಗನಾಥ್.— ತಾವು ನಿನ್ನೆ ಪತ್ರಿಕೆ ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ತಮ್ಮ ಅಧ್ಯಕ್ಷರು ಪಕ್ಷದ ಸಂಘಟನೆ ಹೇಗೆ ಮಾಡುವುದು ಎಂದು ಕೇಳಿಕೊಂಡು ಬರುವುದಕ್ಕೆ ಡೆಲ್ಲಿಗೆ ಹೋಗಿದ್ದಾರಂತೆ. ಅದಕ್ಕೆ ಏನು ಹೇಳುತ್ತೀರಿ ನೀವು?

ಶ್ರೀ ಡಿ. ಬಿ. ಚಂದ್ರೇಗೌಡ.— ಅಧ್ಯಕ್ಷರಾಗಿ ನಾವು ನೀವು ಕೆಲಸ ಮಾಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.— ಡೆಲ್ಲಿಗೆ ಹೋಗಿರುವುದು ಹೌದೇ ಎಂದು ಕೇಳಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಅದರಲ್ಲಿ ಅಪರಾಧ ಏನು? ಅಧ್ಯಕ್ಷರನ್ನು ಕೇಳುವುದಕ್ಕೆ ಹೋದರೆ ಅಪರಾಧ ಏನು? ಅದು ಸಹಜವಾದುದು.

ಶ್ರೀ ಕೆ. ಎಚ್. ರಂಗನಾಥ್.— ನಿಮ್ಮ ಚೀಫ್ ಮಿನಿಸ್ಟರ್ ಯಾರು ಎಂದು ಹೇಳಿದ್ದಕ್ಕೆ ಹೇಳಿದೆ.

ಸದಸ್ಯರೊಬ್ಬರು.— ವೀರೇಂದ್ರಪಾಟೀಲರು ಯಾರು ಎಂದು ವಿರೋಧ ಪಕ್ಷದ ನಾಯಕರು ಕೇಳುವುದನ್ನು ನೋಡಿದರೆ ದುಃಖವಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಈಲ್ಡ್ ಆಗಿಲ್ಲ. ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ ಅಪ್ಪಣೆ ಕೊಟ್ಟಿದ್ದೀರೋ?

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ಈ ಸಭೆಯಲ್ಲಿ ಯಾರು ಎದ್ದು ಹೇಗೆ ಬೇಕಾದರೂ ಮಾತನಾಡ ಬಹುದು ಎಂದು ಹೇಳಿದರೆ ನನ್ನ ಅಭ್ಯಂತರ ಇಲ್ಲ. ಅಧ್ಯಕ್ಷರ ಅನುಮತಿ ಕೇಳಬೇಕು ಎಂಬ ಭಾವನೆ ಇಲ್ಲ, ಎದ್ದು ಎದ್ದು ಮಾತನಾಡುವುದೇ ಸಂಪ್ರದಾಯವಾದರೆ ನನ್ನ ವಿರೋಧ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ನಮ್ಮ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ನಮ್ಮ ಮುಖ್ಯಮಂತ್ರಿಗಳು ಯಾರು ಎಂದು ಕೇಳಿದರು. ಪ್ರಧಾನ ಮಂತ್ರಿಗಳು ಯಾರು ಎಂದು ಕೇಳಿದ್ದಕ್ಕೆ ಚಂದ್ರಶೇಖರ್ ಅವರು ಏನು ಉತ್ತರ ಕೊಟ್ಟರು ಎಂಬುದು ಪೇಪರ್‌ನಲ್ಲಿ ಬಂದಿತ್ತು. ಆ ತರಹ ವ್ಯವಹಾರ ನಮ್ಮಲ್ಲಿ ನಡೆದಿಲ್ಲ. ತಾವು ಅನುಭವಿಗಳು. ಪ್ರತಿಯೊಂದು ಪಕ್ಷದಲ್ಲಿದ್ದೀರಿ. ಗಾಜಿನ ಮನೆಯಲ್ಲಿ ಇದ್ದು ಇನ್ನೊಬ್ಬರ ಮನೆಗೆ ಕಲ್ಲು ಎಸೆದರೆ ಏನಾಗುತ್ತದೆ ಎಂಬುದನ್ನು ಅರ್ಥ ಮಾಡಿ ಕೊಳ್ಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.— ಅವರು ಕೇಳಿದ್ದಕ್ಕೆ ನಾನು ಹೇಳಿದೆ ಅಷ್ಟೆ.

ಶ್ರೀ ಬಸವರಾಜರಾಯರೆಡ್ಡಿ.— ೧೯೮೩ರಲ್ಲಿ ಮಂಜುನಾಥ್ ಅವರು ಎಲ್ಲಿದ್ದರು? ೧೯೭೮ರಲ್ಲಿ ಎಲ್ಲಿದ್ದರು ೧೯೭೮ರಲ್ಲಿಜನತಾ ಪಕ್ಷದಲ್ಲಿದ್ದು ಸೋತಿದ್ದರು. ಅದು ಗೊತ್ತೆ?

(ಗೊಂದಲ)

ಶ್ರೀ ಡಿ ಬಿ. ಚಂದ್ರೇಗೌಡ.—ನಾನು ಅವರು ಕೇಳಿದ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟೆ ಅಷ್ಟೇ. ಮಂಜುನಾಥ್ ಅವರಿಗೆ ಏಕೆ ಈ ಬಗ್ಗೆ ಕೋಪ ಬರುತ್ತದೆ? ಈಗ ನಾನು ವಿಷಯಕ್ಕೆ ಬರುತ್ತೇನೆ. ಖುಷ್ಕಿ ಜಮೀನು ಅಭಿವೃದ್ಧಿ ಕಾರ್ಯಕ್ರಮ ಎಂದು ಒಂದು ಕಾರ್ಯಕ್ರಮ ಏನು ಅಳವಡಿಸಿದ್ದೀರಿ, ಸಂತೋಷ ನಮ್ಮ ಸರ್ಕಾರದ ಅತ್ಯಂತ ಪ್ರಮುಖವಾದ ಕಾರ್ಯಕ್ರಮ ಅದು. ಬಹಳ ವಿಶೇಷವಾಗಿ ಈ ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೆವು. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ರಾಮಕೃಷ್ಣ ಹೆಗ್ಡೆಯ ಸರ್ಕಾರ ಏನು ಖುಷ್ಕಿ ಜಮೀನಿನ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೆವು ಅದನ್ನು ಇಡೀ ರಾಷ್ಟ್ರದಲ್ಲಿ ಬಳಸಿಕೊಂಡಿದ್ದಾರೆ. ಆದರೆ ಈ ಅಭಿವೃದ್ಧಿ ಕಾರ್ಯಕ್ರಮ ಹೊಸದೇನೋ ಎನ್ನುವ ರೀತಿಯಲ್ಲಿ ಇಲ್ಲಿ ನೀವು ನಿರೂಪಣೆ ಮಾಡಿದ್ದೀರಿ. ನೀವು ಹೇಗೆ ಮಾಡಿದರೂ ಅದು ರೈತನಿಗೆ ಅನುಕೂಲ ಆದರೆ ಸಾಕು. ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್‌ನಲ್ಲಿ ಯು.ಕೆ. ಯಲ್ಲಿರುವ ಸ್ಕೀಮನ್ನೇ ಅನುಸರಿಸುತ್ತಾ ಇಲ್ಲೂ ಅದೇ ರೀತಿಯಲ್ಲಿ ಕೆಲಸ ಹಮ್ಮಿಕೊಂಡು ಕೆಲಸ ಮಾಡುವುದಾಗಿ ತುಂಬು ಹೃದಯದಿಂದ ಒಪ್ಪಿಕೊಳ್ಳುತ್ತಾ ಹಣದ ಸಹಾಯವನ್ನು ಸಹಾ ಮಾಡುತ್ತೇವೆಂದು ಹೇಳಿದ್ದರು. ಈ ಬಗ್ಗೆ ಏನಾದರೂ ನಿಮ್ಮಲ್ಲಿ ಮಾಹಿತಿ ಇದೆಯೋ? ಆ ಕಾರ್ಯಕ್ರಮವನ್ನು ಮುಂದುವರಿಸುವುದಕ್ಕೆ ಯೋಜನೆ ಇದೆಯೋ? ಅದರ ಬಗ್ಗೆ ಬೆಳಕು ಚೆಲ್ಲಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನ್ಯಾಯ ಬೆಲೆ ಅಂಗಡಿಗಳ ಬಗ್ಗೆ ಮಾತನಾಡುತ್ತಾ,

> "ರಾಜ್ಯವು, ಕೇಂದ್ರ ಸಂಗ್ರಹದಿಂದ ಆಗುವ ಹಂಚಿಕೆಗಾಗಿ ಭಾರತ ಸರ್ಕಾರವನ್ನು ಅವಲಂಬಿಸಬೇಕಾಗಿದೆ. ಕೇಂದ್ರ ಸಂಗ್ರಹದಿಂದ ಕರ್ನಾಟಕಕ್ಕೆ ಅವಶ್ಯಕ ಸರಕುಗಳ ಮತ್ತು ಖಾದ್ಯ ತೈಲಗಳ ಹಂಚಿಕೆಯ ಪಾಲನ್ನು ಗಣನೀಯವಾಗಿ ಹೆಚ್ಚಿಸಿಕೊಳ್ಳಲು ನನ್ನ ಸರ್ಕಾ

ಮೊದಲ ಆದ್ಯತೆ ನೀಡುತ್ತದೆ, ಜತೆಯಲ್ಲಿಯೇ, ಹೆಚ್ಚು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಮತ್ತು ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶಗಳನ್ನು ಸಾರ್ವಜನಿಕ ವಿತರಣಾ ಪದ್ಧತಿಯ ವ್ಯಾಪ್ತಿಗೆ ಒಳಪಡಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತದೆ.''

ಎಂದಿದ್ದಾರೆ. ಈ ಹಿಂದೆ ಏನು ಪ್ರಯತ್ನ ನಡೆದಿತ್ತು ? ಹಿಂದೆ ವೀರೇಂದ್ರ ಪಾಟೀಲರು ಒಂದು ಸಮಿತಿಯನ್ನು ಶ್ರೀಯುತ ಡಿ. ಜಯದೇವರಾಜ ಅರಸ್ ಅವರ ಅಧ್ಯಕ್ಷತೆಯಲ್ಲಿ ಮಾಡಿ ಅದನ್ನು ಪ್ರೈಸ್ ಮಾನಿಟರಿಂಗ್ ಕಮಿಟಿ ಎಂದು ಕರೆದರು. ಆ ಕಾಲದಲ್ಲಿ ಸಮಿತಿಯವರು ಏನು ವರದಿ ಕೊಟ್ಟರೋ ಒಟ್ಟಿನಲ್ಲಿ ೩೦೦ ನ್ಯಾಯಬೆಲೆ ಅಂಗಡಿಗಳನ್ನು ಮುಚ್ಚಿದರು. ಆಗ ನ್ಯಾಯಬೆಲೆ ಅಂಗಡಿಗಳನ್ನು ಮುಚ್ಚಿ, ಆಹಾರಧಾನ್ಯಗಳ ವಿತರಣೆ ಸಹಕಾರ ಸಂಘಗಳ ಮುಖಾಂತರ ಆಗಬೇಕೆಂದು ಹೇಳಿದರು. ಆಗ ಈ ಅಂಗಡಿಗಳನ್ನೇ ನಂಬಿದ್ದ ಸಾವಿರಾರು ಜನರ ಗತಿ ಏನಾಯಿತು ? ಈ ಸಹಕಾರ ಸಂಘಗಳು ಕಳೆದ ೩-೪ ತಿಂಗಳಿಂದ ತಮ್ಮ ಬೇಡಿಕೆಗಳನ್ನು ಮುಂದೆ ಇಟ್ಟು ಉಪವಾಸ ಕುಳಿತಿದ್ದಾರೆ. ಅದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಆಗಿಲ್ಲ. ಇದರಿಂದಗಿ ಆಹಾರಧಾನ್ಯಗಳ ವಿತರಣೆ ಯಾವ ರೀತಿ ಆಗಬೇಕು. ಈಗ ಅಲ್ಪಸ್ವಲ್ಪ ವಿಕೇಂದ್ರೀಕರಣ ವ್ಯವಸ್ಥೆ ಏನೋ ಇರುವುದರಿಂದ ವಿತರಣಾ ಕಾರ್ಯ ಪಂಚಾಯಿತಿಗಳ ಮುಖಾಂತರ ನಡೆಯುತ್ತಿದೆ.

(ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

''ಹೆಚ್ಚು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಮತ್ತು ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶಗಳನ್ನು ಸಾರ್ವಜನಿಕ ವಿತರಣಾ ಪದ್ಧತಿಯ ವ್ಯಾಪ್ತಿಗೆ ಒಳಪಡಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತದೆ''

ಎಂದು ಹೇಳಿದ್ದೀರಿ. ಈ ಕಾರ್ಯಾಚರಣೆ ಮಾಡುವಾಗ ಒಂದು ಮಾತನ್ನು ಹೇಳುತ್ತೇನೆ. ಈಗ ಧೋರಣೆಯನ್ನು ಬದಲಾವಣೆ ಮಾಡಿ ಮತ್ತೊಂದನ್ನು ಹೇಳುತ್ತೀರಿ. ನಿಮ್ಮ ಸಮಿತಿಯ ಶಿಫಾರಸ್ಸು ಒಪ್ಪಿದರೆ ೨-೩ ಸಾವಿರ ಜನರು ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ. ಆದುದರಿಂದ ಈ ವಿಚಾರದಲ್ಲಿ ತಮ್ಮ ನಿಲುವನ್ನು ಸ್ಪಷ್ಟ ಮಾಡ ಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಸಮಯದಲ್ಲಿ ಮಾನ್ಯ ಖರ್ಗೆಯವರು ಮಾತನಾಡುತ್ತಾ ಎರಡು ಮೂರು ವಿಚಾರಗಳನ್ನು ಹೇಳಿದರು. ಹಿಂದಿನ ಸರ್ಕಾರದ ಆಯವ್ಯಯವನ್ನು ತಾವು ದಯಮಾಡಿ ನೋಡಬೇಕು, ೧೯೮೫-೮೦ನೇ ಆಯವ್ಯಯವನ್ನು ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಆರ್. ಬೊಮ್ಮಾಯಿಯವರು ಮಂಡನೆ ಮಾಡಿದರು. ನೀವು ಏನು ಹೇಳಿದಿರಿ ? ಇರಿಗೇಷನ್ ಪ್ರಾಜೆಕ್ಟ್‌ಗೆ ದುಡ್ಡು ಕೊಡಲಿಲ್ಲ, ಅದಕ್ಕಾಗಿ ಒಬ್ಬರು ಜಗಳ ಮಾಡಿ ಹೋದರು ಹಾಗೂ ಮತ್ತೆ ಬಂದರು ಹಾಗೂ ಮತ್ತೆ ಹೋದರು ಎಂದು ಹೇಳಿದಿರಿ. ಈ ಹಿಂದಿನ ಸರ್ಕಾರಕ್ಕೆ ನೀರಾವರಿ ಬಗ್ಗೆ ಕಳಕಳಿಯೇ ಇರಲಿಲ್ಲವೇನೋ ಎನ್ನುವ ಮಾತನ್ನು ಹೇಳಿ ನಿಮ್ಮದೇ ಆದ ಕೆಲವು ಫಿಗರ್ಸ್ ಕೊಟ್ಟಿರಿ. ಈ ಆಯವ್ಯಯ ಮಂಡನೆಯಾಗಿದ್ದು ಇದೇ ಮನೆಯಲ್ಲಿ. ೧೯೮೬-೮೭ನೇ ಆಯವ್ಯಯದಲ್ಲಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ ೩೦೯.೪ ಕೋಟಿ ರೂಪಾಯಿಗಳನ್ನು ಅದರಲ್ಲಿ ಒದಗಿಸಿದ್ದಾರೆ. ಇದು ಈ ಸದನದಲ್ಲಿ ಇಟ್ಟ ದಾಖಲೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಅದನ್ನು ಸರಿಯಾಗಿ ನೋಡಿದ್ದೀರಾ ? ಅವರು ಹೇಳಿದ್ದುದು, ಯುಕೆಪಿ, ಕಾವೇರಿ, ಕೃಷ್ಣಾಕ್ಕೆ ೩೦೦ ಕೋಟಿ ರೂಪಾಯಿ ಒದಗಿಸುತ್ತೇವೆಂದು ಅದರಂತೆ ರೆಸಲ್ಯೂಷನ್ ಕೂಡಾ ಆಯಿತು. ಮಾನ್ಯ ಕಡಪಟ್ಟಿಯವರೂ ಕೂಡಾ ಇದ್ದರು. ಈ ೩೦೦ ಕೋಟಿ ರೂಪಾಯಿಗಳು ಏನಿದೆ ಇದು ಮೈನರ್ ಇರಿಗೇಷನ್, ಮೀಡಿಯಂ ಇರಿಗೇಷನ್ ಹಾಗೂ ಇತರೆ ಎಲ್ಲಾ ಮೇಜರ್ ಪ್ರಾಜೆಕ್ಟ್‌ಗೆ ಸೇರಿದ್ದುದು ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಇದರಿಂದ ಕಾವೇರಿ, ಕೃಷ್ಣಾ ಪ್ರಾಜೆಕ್ಟ್‌ಗೆ ಖರ್ಚು ಆಯಿತೋ ಇಲ್ಲವೋ ? ರಾಜ್ಯಪಾಲರ ಅಧಿಕಾರಾವಧಿಯಲ್ಲಿ ಏನು ಮಾಡಿದಿರಿ ನೀವು ? ೩೦೯ ಕೋಟಿ ರೂಪಾಯಿ ಏನು ಹಿಂದಿನ ಬಡ್ಜೆಟ್‌ನಲ್ಲಿ ಮಂಡನೆ ಆಗಿತ್ತು, ಅದರ ಖರ್ಚು ಮಾಡಲಾಯಿತೋ ಇಲ್ಲವೋ ಎನ್ನುವ ಬಗ್ಗೆ ಲೆಕ್ಕ ಕೊಡುತ್ತೇವೆಂದು ಹೇಳಿದ್ದಿರಿ. ನಿಮ್ಮ ಸರ್ಕಾರ ಕಾರ್ಯಾಚರಣೆ ಮಾಡಿದ್ದರ ಬಗ್ಗೆ ಏನಾದರೂ ಪರ್‌ಫಾರ್ಮೆನ್ಸ್ ಬಡ್ಜೆಟ್ ಇಲ್ಲಿ ಕೊಟ್ಟಿದ್ದೀರಾ ?

ಶ್ರೀ ಜಿ.ಎಸ್. ಶಿವನಂಜಪ್ಪ.—ಎಲ್ಲಾ ಸರಸ್ವತಿ ಪುಸ್ತಕದಲ್ಲಿಯೇ ಉಳಿಯಿತು. ಇಟ್ಟ ಹಣ ಖರ್ಚು ಆಗಿಲ್ಲ, ಹಣವನ್ನೂ ಕೊಡಲಿಲ್ಲ. ರಾಜ್ಯಪಾಲರು ಬಂದಮೇಲೆ ಹೇಮಾವತಿಗೆ ಪ್ರತೀ ತಿಂಗಳು ೨ ಕೋಟಿ ರೂಪಾಯಿಗಳನ್ನು ಕೊಟ್ಟುಕೊಂಡು ಹೋಗಿದ್ದಾರೆ.

ಶ್ರೀ ಕೆ.ಎಚ್. ಹನುಮೇಗೌಡ,—ಹಣ ಕೊಟ್ಟಿದ್ದರೆ ಬಿಲ್‌ಗಳು ಏಕೆ ನಿಂತುಹೋಗುತ್ತಿದ್ದವು ?

ಶ್ರೀ ಡಿ.ಬಿ. ಚಂದ್ರೇಗೌಡ.—ಇಲ್ಲಿ ಇನ್ನೊಬ್ಬರು ಹಣಕಾಸಿನ ಮಂತ್ರಿ ಇದ್ದಾರೆ. ನಾವು ಶ್ವೇತ ಪತ್ರ ಕೊಡಿ ಎಂದು ಕೇಳುತ್ತಿದ್ದೇವೆ,

ಶ್ರೀ ಕೆ.ಎಚ್. ಹನುಮೇಗೌಡ.—೧೫೦ ಕೋಟಿ ರೂಪಾಯಿಗಳ ಬಿಲ್ಸ್ ಪೆಂಡಿಂಗ್ ಇವೆ. ಕೆಲವರು ಮನೆ ಮಠ ಕಳೆದುಕೊಂಡರು, ಇಂತಹ ವಿಚಾರ ಇದೆ. ದೇಶದ ಜನರಿಗೆ ಎಲ್ಲಾ ಗೊತ್ತಿದೆ ತಾವು ಇರುವ ವಿಚಾರವನ್ನು ಒಪ್ಪಿಕೊಳ್ಳಿ ಮುಂದೆ ಒಳ್ಳೆಯದಾಗುತ್ತದೆ.

ವೈಸ್ ಛೇರ್ಮನ್.—ತಾವು ಕುಳಿತುಕೊಳ್ಳಿ ಮಾನ್ಯ ವಿರೋಧ ಪಕ್ಷದ ನಾಯಕರು ಮುಗಿಸಲಿ.

(ಗೊಂದಲ)

SRI D.B. CHANDRE GOWDA.—Who is to say that ? I take strong objection. He cannot make such sweeping remarks on the Leader of the Opposition. He should now his limits.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ.—ಮನಸ್ಸಿಗೆ ಬಂದ ಹಾಗೆ ಮಾತನಾಡಬೇಡಿ ಹಿಂದೆ ಆಗಿದ್ದರೆ ತಮ್ಮ ಭಾಷಣದಲ್ಲಿ ಹೇಳಿ.

(ಗೊಂದಲ)

ಶ್ರೀ ಕೆ.ಎಚ್. ಹನುಮೇಗೌಡ.—ನೀವು ಇದರಲ್ಲಿ ಭಾಗಿಯಾಗದೇ ಇರಬಹುದು ಆಗಿದ್ದನ್ನು ನಿಮ್ಮ ನೆನಪಿಗೆ ತಂದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಏನು ಹೇಳಬೇಕೋ ಅದನ್ನು ನಿಮ್ಮ ಭಾಷಣದಲ್ಲಿ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ.—ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ರೀತಿ ಮಾತನಾಡುವುದು ಗೌರವವೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಹನುಮೇಗೌಡರು ಈ ಸಭೆಗೆ ಹೊಸ ಬರೇನೂ ಅಲ್ಲ ನನಗಿಂತ ಹಿರಿಯರು ೨-೩ ಸಾರಿ ವಿಧಾನ ಸಭೆಗೆ ಆರಿಸಿ ಬಂದಿದ್ದಾರೆ. ಪದೇ ಪದೇ ಹಿಂದಿನ ಸರಕಾರ ಮಾಡಬಾರದ್ದನ್ನು ಮಾಡಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತಿದ್ದಾರೆ. ಆ ರೀತಿ ಮಾಡಿದ್ದರೆ ಹೇಳಿ. ನಿಮ್ಮ ಕೈಯಲ್ಲಿ ಅಧಿಕಾರ ಇದೆ ೧೭೭ ಜನ ಶಾಸಕರು ಗೆದ್ದು ಬಂದಿದ್ದೀರಿ. ನಿಮಗೆ ಅವರ ಭಾಷಣ ಕೇಳುವುದಕ್ಕೆ ಮನಸ್ಸಿದ್ದರೆ ಕೇಳಿ ಇಲ್ಲವೆ ಬಿಡಿ. ನಿಮಗೂ ಅಧ್ಯಕ್ಷರು ಅವಕಾಶ ಮಾಡಿ ಕೊಡುತ್ತಾರೆ ಆಗ ನೀವು ಏನುಬೇಕೋ ಹೇಳಿ. ಜನ ನಿಮಗೆ ಸರ್ವಾಧಿಕಾರ ಕೊಟ್ಟಿದ್ದಾರೆ. ನಾವು ತಪ್ಪು ಮಾಡಿದ್ದರೆ ಶಿಕ್ಷೆ ಅನುಭವಿಸುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.-೩೧೦ ಕೋಟಿ ರೂಪಾಯಿ ಕೊಟ್ಟಿರಲಿಲ್ಲವೆ ಎನ್ನುವ ಅರ್ಥದಲ್ಲಿ ಹೇಳಿದಾಗ ದುಡ್ಡು ಏನೋ ಪುಸ್ತಕದಲ್ಲಿ ಇದೆ, ಆದರಲ್ಲಿ ಬರೆದಿದ್ದರು ಆದರೆ ೧೫೦ ಕೋಟಿ ರೂಪಾಯಿ ಬಿಲ್ ಪೆಂಡಿಂಗ್ ಇತ್ತು ಎಂಬುದನ್ನು ಮಾನ್ಯ ಚಂದ್ರೇಗೌಡರ ಗಮನಕ್ಕೆ ತಂದೆ. ಹಣಕಾಸಿನ ಪರಿಸ್ಥಿತಿ ಅಷ್ಟು ಕೆಟ್ಟಿತ್ತು ಎಂದು ನಾನು ಹೇಳಿದ್ದು. ವೈಯಕ್ತಿಕವಾಗಿ ನಿಮಗೆ ಹೇಳಬೇಕೆಂಬ ಭಾವನೆ ನನಗೆ ಇಲ್ಲ. ಆ ರೀತಿ ಹೇಳಲಿಲ್ಲ.

ಶ್ರೀ ಡಿ ಬಿ. ಚಂದ್ರೇಗೌಡ.—ಕೆಲವು ದಿವಸಗಳಿಂದ ಟ್ರೆಜರಿ ಬಿಲ್ಸ್ ಅನ್ನು ನಿಲ್ಲಿಸಲಿಕ್ಕೆ ಆದೇಶ ಹೋಗಿದೆಯೆಂದು ನನಗೆ ತಿಳಿದು ಬಂತು ಅದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. ೧೯೮೮-೮೯ ೧೯೮೯-೯೦, ೧೯೯೦-೯೧ ಈ ಮೂರು ವರ್ಷಗಳ ಕಾಲದ ಆರ್ಥಿಕ ಪರಿಸ್ಥಿತಿ ಏನು ಎಂಬ ಬಗ್ಗೆ ಶ್ವೇತ ಪತ್ರವನ್ನು ಕೊಡಿ ಎಂದು ನಾನು ಬೆಳಿಗ್ಗೆ ಕೇಳಿದ್ದೇನೆ. ನೀವುಗಳು ಮಾತನಾಡುವಾಗ ಸುಮ್ಮನೆ ೧೫೦ ಕೋಟಿ ರೂಪಾಯಿ ಟ್ರೆಜರಿ ಚೆಕ್ ಬೌನ್ಸ್ ಆಗಿದೆ, ಎಂದು ಹೇಳಿದ್ದೀರಿ. ಇಲ್ಲಿ ನಾವುಗಳು ಮಾತನಾಡು ವಾಗ್ಮಜವಾಬ್ದಾರಿಗಳನ್ನು ಅರಿತುಕೊಂಡು ಮಾತನಾಡಿದರೆ ಒಳ್ಳೆಯದು. ನಾನು ಅದಕ್ಕಾಗಿ ಶ್ವೇತ ಪತ್ರ ವನ್ನು ಕೊಡಿ ಎಂದು ಹೇಳಿದ್ದೇವೆ. ಈಗ ಇನ್ನೂ ಒಂದೆರಡು ಬೇರೆ ವಿಚಾರಗಳನ್ನು ಹೇಳುವುದಕ್ಕೆ ಮುಂಚೆ ನಾವು ಕೆಲವು ಕಾರ್ಯಕ್ರಮಗಳನ್ನು ಹಿಂದೆ ಏನು ಹಮ್ಮಿಕೊಂಡಿದ್ದೆವು. ಅದರ ಬಗ್ಗೆ ಹೇಳು ತ್ತೇನೆ. ಹೊಸ ಕಾರ್ಯಕ್ರಮಗಳನ್ನು ೮೯-೯೦ರಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಮಕ್ಕಳಿಗೆ ಬಟ್ಟೆ, ಪುಸ್ತಕ ಹಂಚುವ ಕಾರ್ಯಕ್ರಮ, ಇರಬಹುದು, ವಿಧವೆಯರಿಗೆ ಮಾಶಾಸನ ಕೊಡು ವುದು ಇರಬಹುದು, ಹಸಿರು ಕಾರ್ಡನ್ನು ಕೊಡುವ ಕಾರ್ಯಕ್ರಮ ಇರಬಹುದು, ಗರ್ಭಿಣಿ ಸ್ತ್ರೀಯರಿಗೆ

ಮಾಶಾಸನ ಕೊಡತಕ್ಕದ್ದು ಇರಬಹುದು, ಹೆರಿಗೆ ಭತ್ಯ ಇರಬಹುದು, ಕನಿಷ್ಟ ಬೆಲೆಯಲ್ಲಿ ಸೀರೆ ಕೊಡುವ ಕಾರ್ಯಕ್ರಮ ಇರಬಹುದು, ಇಂತಹ ಕಾರ್ಯಕ್ರಮಗಳನ್ನು ಹಿಂದಿನ ಸರ್ಕಾರ ಹಾಕಿಕೊಂಡಾಗ ಇವು ಅನುತ್ಪಾದಕವಾದ, ಜನಪ್ರಿಯವಾದ ಕಾರ್ಯಕ್ರಮಗಳೆಂದು ಹೇಳಿದ್ದೇವೆ, ನಾವು ಆ ಕಾರ್ಯಕ್ರಮದಿಂದ ಬಡತನ ಹೋಗುತ್ತದೆಂದು ಹೇಳುವುದಿಲ್ಲ. ಎಲ್ಲರೂ ಚಿನ್ನದ ಚರ್ಮವನ್ನು ಹೆಚ್ಚಿಕೊಂಡು ಹುಟ್ಟುವುದಿಲ್ಲ. ಆದ್ದರಿಂದ ಸರ್ಕಾರ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ದಿಸೆಯಲ್ಲಿ ಪ್ರಯತ್ನ ಮಾಡಬೇಕಾಗುತ್ತದೆ. ಸಾಮಾಜಿಕ ನ್ಯಾಯವನ್ನು ಒದಗಿಸತಕ್ಕ ಕಾರ್ಯಕ್ರಮಗಳನ್ನು ಅನುತ್ಪಾದಕ ಎಂದು ಹೇಳಿ, ಜನಪ್ರಿಯ ಎಂದು ಹೇಳಿ ಅದನ್ನು ಏನಾದರೂ ನಿಲ್ಲಿಸುತ್ತೀರಾ ಇಲ್ಲ, ಸಾಮಾಜಿಕ ನ್ಯಾಯವನ್ನು ಒದಗಿಸುವ ಕಾರ್ಯಕ್ರಮವನ್ನು ಮುಂದುವರಿಸುತ್ತೀರಾ, ಅದನ್ನು ಹೇಳಬೇಕು. ರೈತರ ಬಗ್ಗೆ ನಾಳೆ ವಿಶೇಷವಾದ ಚರ್ಚೆ ಇದೆ. ರಾಷ್ಟ್ರೀಯ ರಂಗದ ಸರ್ಕಾರ ಬಹಳ ಮುಖ್ಯವಾದಂತಹ ೨–೩ ವಿಚಾರಗಳನ್ನು ರೈತರ ಬಗ್ಗೆ ಹೇಳಿದೆ. ಅದರಲ್ಲಿ ಬಹಳ ಮುಖ್ಯವಾದುದು, ಬೆಳೆ ವಿಮೆ. ನಾವು ಹಿಂದಿನ ಆಯವ್ಯಯದಲ್ಲಿ ಬೆಳೆ ವಿಮೆಯನ್ನು ಪ್ರಸ್ತಾಪ ಮಾಡಿದ್ದೇವೆ. ಆದರೆ ನೀವು ಬೆಳೆ ವಿಮೆ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಇದರ ಬಗ್ಗೆ ಒಂದು ಚಕಾರ ಸಹ ಇಲ್ಲ, ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದಿರತಕ್ಕ ರಾಷ್ಟ್ರೀಯ ರಂಗದ ಚುನಾವಣಾ ಪ್ರಣಾಳಿಕೆಯಲ್ಲಿ ಒಂದು ರೈತರಿಗೆ ಸಂಬಂಧಪಟ್ಟ ವಿಚಾರವನ್ನು ಹೇಳಿದೆ, ನೈಸರ್ಗಿಕ ಅಥವಾ ಮಾನುಷ್ಯ ಕೃತ ಅನಾಹುತಗಳ ವಿರುದ್ಧ ಬೆಳೆಗೂ, ಜಾನುವಾರುಗಳಿಗೂ ವಿಮೆ ಸೌಲಭ್ಯ ಒದಗಿಸಿ ಬೇಸಾಯಗಾರರನ್ನು ರಕ್ಷಿಸುವುದು. ಉಗ್ರಾಣಗಳನ್ನು ಒದಗಿಸಿ ಸಂಕಟದ ಸನ್ನಿವೇಶದಲ್ಲಿ ತಮ್ಮ ಬೆಳೆ ಮಾರುವುದನ್ನು ತಪ್ಪಿಸಲಾಗುವುದು. ಕೃಷಿ ಉತ್ಪನ್ನಗಳ ಸಾಗಣೆಗೆ ಇರುವ ವಲಯಗಳ ನಿರ್ಬಂಧವನ್ನು ತೆಗೆಯಲಾಗುವುದು. ಸಣ್ಣ, ಅತಿ ಸಣ್ಣ ರೈತರ ಹಾಗೂ ಭೂಹೀನ ಬೇಸಾಯಗಾರರ ಮತ್ತು ಕುಶಲಕರ್ಮಿಗಳ ಸಾಲವನ್ನು ಹತ್ತು ಸಾವಿರ ರೂಪಾಯಿಗಳವರೆಗೆ ೧೯೮೯ರ ಅಕ್ಟೋಬರ್ ೨ ರಿಂದ ರದ್ದುಗೊಳಿಸಲಾಗುವುದು ಈ ಸಂಬಂಧವಾಗಿ ಸದನದಲ್ಲಿ ಚರ್ಚೆ ಆಗಿದ್ದು ನಾವು ಸಾಲ ವಜಾ ಮಾಡುತ್ತೇವೆ ಎಂಬ ವಿಷಯವನ್ನು ಅಲ್ಲಿ ಹೇಳಲಾಗಿದೆ. ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಆಶ್ವಾಸನೆಯ ಲಾಭವನ್ನು ಪಡೆಯತಕ್ಕ ಪ್ರಯತ್ನ ಮಾಡಬೇಕು. ರೈತರಿಗೆ ಸಂಬಂಧಪಟ್ಟಂತೆ ೨–೩ ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ. ಅದರ ಬಗ್ಗೆ ಗಮನ ಹರಿಸಬೇಕು. ರಾಷ್ಟ್ರೀಯ ರಂಗದ ಪ್ರಣಾಳಿಕೆಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಇವತ್ತು ನಾವು ರೈತರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಪ್ಯಾರಿಟಿ ಪ್ರೈಸ್ ಬಗ್ಗೆ ರಾಜ್ಯ ಸರ್ಕಾರ ಮಾಡುವುದೇನೂ ಇಲ್ಲ, ಅದು ನನಗೆ ಗೊತ್ತು. ಕೇಂದ್ರ ಸರ್ಕಾರ ಇದನ್ನು ಮಾಡುತ್ತದೆಂದು ಆಶ್ವಾಸನೆ ಕೊಟ್ಟಿದೆ. ಈ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನು ? ಇದರ ಬಗ್ಗೆ ನಿಮ್ಮ ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಂಡು ಒಂದು ಹೆಜ್ಜೆಯಾದರೂ ಮುಂದೆ ಇಟ್ಟಿದೆಯೋ ? ಕೇಂದ್ರದೊಂದಿಗೆ ಮಾತುಕತೆ ಪ್ರಾರಂಭ ಮಾಡಿದ್ದೀರೋ ಅದನ್ನು ತಿಳಿಸಬೇಕು. ರಾಜ್ಯಪಾಲರ ಭಾಷಣದಲ್ಲಿ ಒಂದೇ ಮಾತನ್ನು ನಾವು ಸ್ವಾಗತಿಸುವುದು ಏನೆಂದರೆ ನಾವು ಕೇಂದ್ರದ ಜೊತೆ ಕಾನ್‌ಫ್ರಂಟೇಷನ್ ಮಾಡುವುದಿಲ್ಲ ಎಂದು ಹೇಳಿದ್ದಾರೆ. ನಿನ್ನೆ ಸದನದಲ್ಲಿ ಮಾತನಾಡಿದ ಹೆಗಡೆಯವರು ಸೂಚ್ಯವಾಗಿ ಒಂದು ಮಾತು ಹೇಳಿದ್ದಾರೆ. ಅದು ಕರ್ನಾಟಕಕ್ಕೆ ಆಗಿರುವ ಅನ್ಯಾಯಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು. ಹಿಂದೆ ಅನ್ಯಾಯವಾಗಿತ್ತು ಎಂದು ಒಪ್ಪಿಕೊಂಡು ಅದನ್ನು ಸರಿಪಡಿಸುವ ದಿಸೆಯಲ್ಲಿ ನಿಮ್ಮ ಪ್ರಯತ್ನ ಏನು? ಈ ವಿಚಾರದಲ್ಲಿ ಕೂಡ ನಾನು ತಮ್ಮಿಂದ ವಿವರಣೆ ಬಯಸುತ್ತೇನೆ. ಇನ್ನು ಉದ್ದಿಮೆಗಳಿಗೆ ಹಣ ಹೂಡಿಕೆ ಸಂಬಂಧಿಸಿದಂತೆ ಸಿಂಗಲ್ ವಿಂಡೊ ಏಜೆನ್ಸಿ ತರುತ್ತೇವೆಂದು ಹೇಳಿದ್ದೀರಿ. ಇದನ್ನು ಯಾವರೀತಿ ಸುಧಾರಣೆ ಮಾಡುತ್ತೀರಿ? ಬರೀ ಸಿಂಗಲ್ ಮಾಡುತ್ತೀರೋ ಇಲ್ಲ ಬರೀ ವಿಂಡೋನೇ ಮಾಡುತ್ತೀರೋ ಎಂಬುದನ್ನು ವಿಸ್ತಾರವಾಗಿ ಹೇಳಬೇಕೆಂದು ಕೋರುತ್ತೇನೆ. ಯೋಜನೆಗಳಿಗೆ ಹಿಂದೆ ಅನುದಾನ ದೊರೆಯಲಿಲ್ಲ. ಈಗ ಅವನ್ನು ದೊರಕಿಸಿಕೊಳ್ಳುವುದಕ್ಕಾಗಿ ಏನು ಕ್ರಮ ಹಾಕಿಕೊಂಡಿದ್ದೀರಿ? ಉದಾಹರಣೆಗೆ ಒಂದು ಕಡೆ ಸಹಕರಿಸುತ್ತೇವೆಂದು, ಇನ್ನೊಂದು ಕಡೆ ಕಾನ್‌ಫ್ರಂಟೇಷನ್ ಎಂದು ಆಗಿದೆ. ರೈಲ್ವೆ ಮಂತ್ರಿಗಳು ರಾಜ್ಯದ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿದ್ದಾರೆಂದು, ಕೊಂಕಣ ರೈಲ್ವೆ ವಿಚಾರದಲ್ಲಿ ಚರ್ಚೆ ಮಾಡಿದರೆಂದು ಪತ್ರಿಕೆಯಲ್ಲಿ ಬಂದಿದೆ. ಅವರ ಮಧ್ಯೆ ಏನು ನಡೆದಿದೆಯೋ ನಮಗೆ ಗೊತ್ತಿಲ್ಲ, ಆದರೆ ಈ ವಿಷಯದಲ್ಲಿ ಕರ್ನಾಟಕ ಸರ್ಕಾರ ಖರ್ಚು ಮಾಡುವಂತಹ ಸ್ಥಿತಿಯಲ್ಲಿಲ್ಲವೆಂದು ಅವರು ಹೇಳಿದರೆಂದು ಪತ್ರಿಕೆಯಲ್ಲಿ ಬಂದಿದೆ. ಇದಾದ ಮೇಲೆ ರೈಲ್ವೆ ಬಾಂಡ್‌ಗಳನ್ನು ಮಾಡಿ ರೈಲು ಮಾರ್ಗ ಪೂರೈಸುವುದಾಗಿ ರೈಲ್ವೆ ಸಚಿವರು ಹೇಳಿದ್ದಾರೆ. ಈ ಬಾಂಡ್‌ಗಳನ್ನು ಈ ಸರ್ಕಾರದ ನಿಲುವೇನು ? ಪುನಃ ಕಾನ್‌ಫ್ರಂಟೇಷನ್ ಪ್ರಾರಂಭ ಮಾಡುತ್ತೀರೋ ಇಲ್ಲ ಕೇಂದ್ರದ ಜೊತೆಯಲ್ಲಿ ಸಹಕರಿಸುತ್ತೀರೋ, ಬಾಂಡ್ ವಿಷಯದಲ್ಲಿ ಸಹಕರಿಸಿ ರೈಲ್ವೆ ಅಭಿವೃದ್ಧಿ ಕಾರ್ಯಕ್ಕೆ ಸಾಧನವಾಗುವಂತಹ ಪ್ರಯತ್ನ ಮಾಡುತ್ತೀರೋ ಹೇಳಿ. ಹಿಂದೆ ಶೇಕಡ ೭ರ ಬಡ್ಡಿಯಲ್ಲಿ ರೈತರಿಗೆ ಸಾಲ ಕೊಡುವ ವ್ಯವಸ್ಥೆ ಇತ್ತು. ಈಗ ಏನು ಕೊಟ್ಟಿದ್ದೀರಿ? ರೈತರಿಗೆ? ಈ

ಮಾತನ್ನು ಲಘುವಾಗಿ ಹೇಳಿದರೆ ಕಷ್ಟವಾಗುತ್ತದೆ. ಕಳೆದ ಆರೇಳು ವರ್ಷಗಳಲ್ಲಿ ನನ್ನ ಲೆಕ್ಕದ ಪ್ರಕಾರ ಒಂದು ಭಾರಿ ೮೦ ಕೋಟಿ, ಇನ್ನೊಂದು ಭಾರಿ ೬೦ ಕೋಟಿ ಒಟ್ಟು ೧೪೦ ಕೋಟಿ ಬಡ್ಡಿಯ ಮನ್ನಾ ಹಿಂದಿನ ಸರ್ಕಾರ ಮಾಡಿದೆ. ಶೇಕಡ ೭ರ ಬಡ್ಡಿಯಲ್ಲಿ ಸಾಲ ಕೊಡುವ ವ್ಯವಸ್ಥೆಯನ್ನು ಮುಂದುವರೆಸ ಬೇಕೆನ್ನುವ ಆಲೋಚನೆಯೇನಾದರೂ ಸರ್ಕಾರಕ್ಕೆ ಇದೆಯೇ ? ಹಾಗಿದ್ದರೆ ಈ ಬಗ್ಗೆ ನಬಾರ್ಡ್ ಜೊತೆ ಯಲ್ಲಿ ಮಾತುಕತೆ ಶುರು ಮಾಡಿದ್ದೀರಾ? ಹಿಂದೆ ನಬಾರ್ಡ್‌ನವರು ಒಪ್ಪುವುದಿಲ್ಲವೆಂದು ಹೇಳುತ್ತಿದ್ದರು. ಅಲ್ಲಿ ಕೇಂದ್ರದಲ್ಲಿ ನಿಮ್ಮ ಸರ್ಕಾರ ಇದೆ ಒಪ್ಪಿಸಿ ಎಂದು ಕೇಳಿದಾಗ ಮಾತನಾಡುತ್ತಿರಲಿಲ್ಲ. ಈಗ ಸರ್ಕಾರ ಬದಲಾಗಿದೆ. ಮಾತು ಏನು ಬರಬಹುದು. ನಬಾರ್ಡ್‌ನವರು ಒಪ್ಪಿದರೆ ನಾವು ಕೊಡುತ್ತೇವೆ, ನಿಮ್ಮ ಹೊರೆಯನ್ನು ಕೇಂದ್ರದ ಮೇಲೆ ಹಾಕಿದ್ದೀರಿ. ಈ ವಿಷಯಗಳಲ್ಲಿ ನಿಮ್ಮ ಸ್ಪಷ್ಟ ನಿಲುವೇನು ಎಂದು ಕೋರುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಹಿಂದಿನ ಸರ್ಕಾರ ರೈತನಿಗೆ ಒಳ್ಳೆಯದನ್ನು ನಿಜವಾಗಿ ಮಾಡ ಬೇಕೆಂದಿದ್ದರೆ ಕೋಆಪರೇಟಿವ್ ಆಕ್ಟ್ ಅಮೆಂಡ್ ಮಾಡಿ ೭ ಪರ್ಸೆಂಟ್ ಬಡ್ಡಿಯನ್ನು ಪರ್ಮನೆಂಟಾಗಿ ರೈತರಿಗೆ ಕೊಡುವುದಕ್ಕೆ ಅವಕಾಶವಿತ್ತು. ಆದರೆ ಅದನ್ನು ಜಾರಿಗೆ ತರಲಿಲ್ಲ. ಕೇವಲ ೩ ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳಿದಿರಿ, ಅದಕ್ಕೆ ಇದುವರೆಗೂ ರೂಲ್ಸ್ ಮಾಡಲಿಲ್ಲ. ಈಗ ಸೊಸೈಟಿಗಳು ಕದ ಮುಚ್ಚಿವೆ. ನೀವು ಹಣ ಕೊಡಲಿಲ್ಲ. ಆದ್ದರಿಂದ ಪರ್ಮನೆಂಟಾಗಿ ಪರಿಹಾರ ಕೊಡಬೇಕಾದ ಉದ್ದೇಶವಿದ್ದರೆ ಆಕ್ಟನ್ನು ತಿದ್ದುಪಡಿ ಮಾಡಲು ಅವಕಾಶವಿತ್ತು. ಈ ಬಗ್ಗೆ ನಾನು ಅನೇಕ ಸಲ ಹೇಳಿದೆ, ಮುಖ್ಯಮಂತ್ರಿಗಳಿಗೂ ಹೇಳಿದೆ. ನೀವು ಈ ಬಗ್ಗೆ ಬೆಳಕು ಚೆಲ್ಲಬೇಕು. ಪರ್ಮನೆಂಟಾಗಿ ಪರಿಹಾರ ಕೊಡುವ ಏರ್ಪಾಡು ಮಾಡದಿದ್ದರೆ ರೈತಾಪಿ ಜನಜೀವನ ಮಾಡಲು ಕಷ್ಟವಾಗುತ್ತದೆ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಸರ್ಕಾರಕ್ಕೆ ಮಾರ್ಗದರ್ಶನ ಮಾಡಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ಇವೊತ್ತಿನ ದಿವಸ ರಾಷ್ಟ್ರಪತಿಯವರ ಭಾಷಣದಲ್ಲಿಯೂ ಕೂಡ ೧೦ ಸಾವಿರದವರೆಗಿನ ಸಾಲ ಮನ್ನಾ ಮಾಡುವುದಾಗಿ ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಅಷ್ಟರಮಟ್ಟಿಗೆ ರಾಜ್ಯ ದಲ್ಲೂ ಹೊರೆ ಕಡಿಮೆಯಾದಂತೆ, ನೀವು ಶೇಕಡ ೭ರ ಬಡ್ಡಿ ಸಾಲವನ್ನು ಪರ್ಮನೆಂಟಾಗಿ ಕೊಡುವಂತೆ ಮಾಡುವುದಾದರೆ ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ಹಿಂದೆ ಏಕೆ ಮಾಡಲಿಲ್ಲ ಎನ್ನುವ ವಿಚಾರಕ್ಕೆ ನಾನು ಹೋಗುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಶ್ರೀ ಕೆ.ಹೆಚ್. ಪಾಟೀಲರು ಹೇಳಿದರು ೭ ಪರ್ಸೆಂಟ್ ಬಡ್ಡಿ ವಿಚಾರದಲ್ಲಿ ಆಗಿನ ಸರ್ಕಾರ ಸಹಕಾರ ಸಂಘ ಕಾಯಿದೆಗೆ ಅಮೆಂಡ್‌ಮೆಂಟ್ ತರಲಿಲ್ಲವೆಂದು. ಆಗ ಪರಿಸ್ಥಿತಿ ಏನು ಇತ್ತೆಂದು ಗೊತ್ತಿದೆ. ನಾವು ರೈತರಿಗೆ ಮಾತನ್ನು ಕೊಟ್ಟಂತೆ ೭ರ ಬಡ್ಡಿ ಮನ್ನಾ ಮಾಡಿದೆವು. ಕೊನೆಯಲ್ಲಿ ಏನಾಯಿತು ? ನಬಾರ್ಡ್ ಸಂಸ್ಥೆ ಎಚ್ಚರಿಕೆ ಕೊಟ್ಟರು. ನೀವು ೭ ಪರ್ಸೆಂಟ್ ಬಡ್ಡಿ ಆರ್ಡರ್ ವಾಪಸ್ ತೆಗೆದುಕೊಳ್ಳಲಿಲ್ಲ ಎಂದರೆ ಒಂದು ಪೈಸೆ ಸಾಲ ಕೊಡುವುದಿಲ್ಲ ಎಂದರು. ಆ ಬ್ಯಾಂಕ್ ರೈತರಿಗಾಗಿ ಇರುವ ಬ್ಯಾಂಕ್. ರೈತರ ಕುರಿತು ಅದು ವಿಚಾರ ಮಾಡಲಿಲ್ಲ. ನಾವು ಸಾಕಷ್ಟು ಸಲ ಹೇಳಿದೆವು. ನಮ್ಮ ಮುಖ್ಯಮಂತ್ರಿಗಳು ಫೈಟ್ ಮಾಡಿದರೂ ಸಾಧ್ಯವಾಗಲಿಲ್ಲ. ಆಗ ಕೋಆಪರೇಟಿವ್ ಆಕ್ಟ್ ಅಮೆಂಡ್ ಮಾಡಲು ಆಗುತ್ತಿರಲಿಲ್ಲ. ಲ್ಯಾಂಡ್ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್ ಮೂಲಕ ರೈತರಿಗೆ ಸಾಲ ಕೊಡಲು ನಬಾರ್ಡ್ ಒಪ್ಪಲೇಬೇಕಾಗಿತ್ತು. ಆದ್ದರಿಂದ ಕೇಂದ್ರ ಸರ್ಕಾರ ನಬಾರ್ಡ್ ನೀತಿಯನ್ನು ಬದಲಾವಣೆ ಮಾಡಿ ರೈತರ ಪರವಾಗಿ ಇರುವಂತೆ ಎಲ್ಲಿಯ ವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೂ ರಾಜ್ಯ ಸರ್ಕಾರಕ್ಕೆ ತೊಂದರೆಯೇ. ಈಗ ಒಳ್ಳೆಯ ಅವಕಾಶ ಬಂದಿದೆ. ಕೇಂದ್ರ ಕೂಡ ಸ್ಪಷ್ಟವಾಗಿ ೧೦ ಸಾವಿರಕ್ಕಿಂತ ಕಡಿಮೆ ಇರುವ ಸಾಲ ಮನ್ನಾ ಮಾಡುವುದಾಗಿ ಹೇಳಿದೆ. ನಬಾರ್ಡ್‌ನವರು ಈಗ ಒಪ್ಪಿಕೊಳ್ಳುತ್ತಾರೆ. ಈಗ ರಾಜ್ಯ ಸರ್ಕಾರ ಪ್ರಯತ್ನಿಸಬೇಕು. ನೀವು ಹೋಗಿ ಮಾತನಾಡಬೇಕು, ನಾವು ಸಂಪೂರ್ಣ ಸಹಕಾರ ನಾವು ಕೊಡುತ್ತೇವೆ.

ಇನ್ನು ನನ್ನ ಭಾಷಣವನ್ನು ಹೆಚ್ಚು ಲಂಬಿಸದೆ ಒಂದೆರಡು ಮುಖ್ಯವಾದ ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಿಸುತ್ತೇನೆ.

ಪ್ರಜಾವಾಣಿ ದಿನಪತ್ರಿಕೆಯಲ್ಲಿ ದಿನಾಂಕ ೪-೮-೧೯೯೪ರಲ್ಲಿ ಒಂದು ಅಗ್ರಲೇಖನ ಬಂದಿದೆ. ಅದು ಈ ರೀತಿ ಇದೆ. ''ದರೋಡೆಕೋರರ ಪಿಡುಗು'' ಅದನ್ನು ನಾನು ದೀರ್ಘವಾಗಿ ಹೇಳುವುದಿಲ್ಲ ಅದರಲ್ಲಿರುವ ಒಂದು ವಾಕ್ಯವನ್ನು ಹೇಳುತ್ತೇನೆ. ಸ್ವಲ್ಪ ಕಾಲ ಅಡಗಿದ್ದ ದರೋಡೆಕೋರರ ಪಿಡುಗು ಮತ್ತೆ ತಲೆ ಎತ್ತಿದೆ, ಜನ ನೆಮ್ಮದಿಯಿಂದ ಇರಲಾರದ ಸ್ಥಿತಿ ಉಂಟಾಗಿದೆ. ಇದು ನಡೆದದ್ದು ರಾಜ್ಯಪಾಲರ ಆಡಳಿತದ ಕಾಲದಲ್ಲಿ. ಜೊತೆಗೆ ರಾಜ್ಯದಲ್ಲಿ ರೌಡಿಗಳ ಹಾವಳಿಯೂ ಹೆಚ್ಚಾಗಿದೆ.

ಜನಜೀವನ ಒಳಗೂ ಹಾಗೂ ಹೊರಗೂ ಎಲ್ಲಾಕಡೆ ಅಭದ್ರವಾಗಿದೆ ಎಂದು ಬಂದಿದೆ. ಸರ್ಕಾರ ಈ ಶಿರೋನಾಮೆಯಲ್ಲಿ ಅಗ್ರಲೇಖನ ಅಚ್ಚಾಗಿರುವುದನ್ನು ಗಂಭೀರವಾಗಿ ಗಮನಿಸಿ, ಈ ಪರಿಸ್ಥಿತಿಯ ಬಗ್ಗೆ ರಾಷ್ಟ್ರಪತಿ ಆಡಳಿತ ಕಾಲದಲ್ಲಿ ಏನು ನಡೆಯಿತು ಎನ್ನುವ ವಿವರಣೆಯನ್ನು ಕೊಡಬೇಕಾಗಿದೆಯೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಚುನಾವಣೆ ಶಾಂತಿಯುತವಾಗಿ ನಡೆಯಿತು ಎನ್ನುವ ಮಾತನ್ನು ಹೇಳಿದರು. ಎಷ್ಟರಮಟ್ಟಿಗೆ ಶಾಂತಿ, ಅಶಾಂತಿ ಆ ಮಾತಿಗೆ ನಾನು ಹೋಗುವುದಿಲ್ಲ, ಆದರೆ ಚುನಾವಣೆ ಆದಮೇಲೆ ಈ ರಾಜ್ಯದಲ್ಲಿ ಒಂದು ರೀತಿಯ ಭೀಕರವಾದ ಪರಿಸ್ಥಿತಿ ಉಂಟಾಗಿದೆ. ತಾರೀಖು ೨೮-೧೧-೧೯೮೯ರಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕು, ಮಲಿಗೂರು ಕೋಟೆ ಗ್ರಾಮದಲ್ಲಿ ರಾತ್ರಿ ೧೧ ಗಂಟೆ ಸಮಯದಲ್ಲಿ ಅದೇ ಗ್ರಾಮದ ಪರಿಶಿಷ್ಟ ಜಾತಿಗೆ ಸೇರಿದ ಕೃಷ್ಣಪ್ಪ ಮತ್ತು ಮುನಿಯಪ್ಪ ಎಂಬುವರ ಮೇಲೆ ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಚಂದ್ರರೆಡ್ಡಿ ಮತ್ತು ಅವರ ಸಂಗಡಿಗರು ಚುನಾವಣೆಯಲ್ಲಿ ಜನತಾದಳಕ್ಕೆ ಬೆಂಬಲ ನೀಡಿದರು ಎನ್ನುವ ಕಾರಣಕ್ಕೆ ಅವರ ಮೇಲೆ ಆಕ್ರೋಶವನ್ನು ವ್ಯಕ್ತಪಡಿಸಿ ಸೇಡು ತೀರಿಸಿಕೊಳ್ಳುವುದಕ್ಕೆ ಅಮಾನುಷವಾದ ಹಲ್ಲೆಯನ್ನು ಮಾಡಿದ್ದಾರೆ. ಪರಿಶಿಷ್ಟ ಜಾತಿಯ ಕಾಲೋನಿಗೆ ನುಗ್ಗಿದ್ದಾರೆ. ಅಲ್ಲಿ ವಾಸವಾಗಿರತಕ್ಕ ಜನರೆಲ್ಲರೂ ಹೊಟ್ಟೆಪಾಡಿಗಾಗಿ, ಕೂಲಿಗೋಸ್ಕರ, ಆಂಧ್ರ ರಾಜ್ಯಕ್ಕೆ ಹೋಗುತ್ತಾರೆ. ಅವರು ಇಲ್ಲದ ಸಮಯವನ್ನು ನೋಡಿಕೊಂಡು ಏಕಾಏಕಿ ತಮ್ಮೆಲ್ಲ ಬಲವನ್ನು ಸೇರಿಸಿ ಸ್ಥಳಕ್ಕೆ ನುಗ್ಗಿ ಅಲ್ಲಿ ಇಬ್ಬರನ್ನು ಜ್ಞಾನ ತಪ್ಪುವವರೆಗೆ ಹೊಡೆದಿದ್ದಾರೆ ಅಷ್ಟು ಮಾಡಿದ್ದು ಸಾಕಾಗಲಿಲ್ಲವೆಂದು ಹಗ್ಗದಿಂದ ಬಂಧಿಸಿ ಮೂತ್ರಪಾನ ಮಾಡಿಸಿದ್ದಾರೆ. ಪರಿಶಿಷ್ಟ ಜನಾಂಗ ನಮ್ಮದೇ ಆಸ್ತಿಯೆಂದು ಮಾತನಾಡುತ್ತಾರೆ. ಚುನಾವಣೆ ಮುಗಿದು ಎರಡು ದಿವಸ ಕೂಡ ಆಗಿಲ್ಲ. ಹೆಣ್ಣುಮಕ್ಕಳನ್ನು ಅವರ ಕೈಕಾಲುಗಳನ್ನು ಹಿಡಿದುಕೊಂಡು ಹಿಂಸಿಸಿದ್ದಾರೆ. ಎಷ್ಟೇ ಅಂಗಲಾಚಿ ದೈನ್ಯತೆಯಿಂದ ಬೇಡಿದರೂ ಅದಕ್ಕೆ ಬೆಲೆಯಿಲ್ಲ. ಅದಕ್ಕೆ ಕಾರಣ ವೇನು ? ಅವರು ಜನತಾದಳ ಪಕ್ಷಕ್ಕೆ ಬೆಂಬಲ ಕೊಟ್ಟರು ಎಂದು. ರಾತ್ರಿ ಒಂದು ಗಂಟೆ ಸಮಯದಲ್ಲಿ ಯಾರೋ ರಾಯಲವಾಡ ಪೋಲೀಸ್‌ಸ್ಟೇಶನ್‌ಗೆ ವಿಷಯ ತಿಳಿಸುತ್ತಾರೆ ರಾತ್ರಿ ಮುಗ್ಧರಾದ ಆ ಜನರನ್ನು ಬಿಡಿಸಿಕೊಂಡು ಬರುತ್ತಾರೆ. ಇದು ಸಾಲದು ಎನ್ನುವ ಹಾಗೆ ಕಾಲೋನಿಗೆ ಸೇರಿದ ೩೦ ಜನರನ್ನು ಸೇರಿಸಿ ಒಂದು ಸುಳ್ಳು ಪಿರ್ಯಾದಿಯನ್ನು ತಯಾರು ಮಾಡಿ ಕೊಟ್ಟಿದ್ದಾರೆ. ಇಂದಿಗೂ ಕೃಷ್ಣಪ್ಪ ಮತ್ತು ಮುನಿಯಪ್ಪ ಎಂಬುವರು ಶ್ರೀನಿವಾಸಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದಯಮಾಡಿ ಸರ್ಕಾರ ಇಂತಹ ವಿಷಯಗಳಲ್ಲಿ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಪರಿಸ್ಥಿತಿ ಕೈಮೀರಿ ಹೋಗಬಹುದು. ಇದು ಒಂದಲ್ಲ. ಇನ್ನೊಂದು ಇಂತಹದ್ದೆ ಉದಾಹರಣೆಯನ್ನು ಕೊಡುತ್ತೇನೆ. ಇದು ಸೊರಬ ತಾಲ್ಲೂಕಿನಲ್ಲಿ ನಡೆದಂತಹ ಘಟನೆ. ಚುನಾವಣೆಯ ನಂತರ ವಿಶೇಷವಾಗಿ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಬಂಗಾರಪ್ಪನವರ ಗುಂಪು ಬರೀ ರಾಜಕೀಯ ಗೂಂಡಾಗಿರಿಯನ್ನು ನಡೆಸುತ್ತಿದೆ. ಪೋಲೀಸರಿಗೆ ಈ ಗೂಂಡಾಗಿರಿಯ ಬಗ್ಗೆ ದೂರು ಕೊಟ್ಟರೆ ಸ್ಥಳೀಯ ಪೋಲೀಸರು they are not even prepared to take the complaint. ಇದನ್ನೆಲ್ಲಾ ನೋಡಿದಾಗ ತಾವು ಯಾವ ರೀತಿಯ ಸರ್ಕಾರ ಮಾಡಬೇಕೆಂದು ಇದ್ದೀರಿ ಎಂದು ನಾನು ತಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ. ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಿದ್ದೇನೆ ಅದನ್ನು ಅವರಿಗೆ ಕಳುಹಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಇಂತಹ ಪ್ರಕರಣಗಳು ಮಂಡ್ಯ ಜಿಲ್ಲೆಯಲ್ಲಿ ನಡೆದಿವೆ. ಹಾಸನ ಜಿಲ್ಲೆಯಲ್ಲಿ ನಡೆದಿದೆ.

ಶ್ರೀ ಎ. ಎಂ. ಹಿಂಡಸಗೇರಿ.—ಬೆಂಡಗೇರಿ ಎಲೆಕ್ಷನ್ ಬಗ್ಗೆ ಸಿ.ಓ.ಡಿ ತನಿಖೆ ಮಾಡುವುದಾಗಿ, ಹೇಳಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮಗೆ ಅನುಕೂಲವಾಗಿ ವರದಿ ಬರುತ್ತದೆ ಎನ್ನುವುದಾದರೆ ಸಿ.ಓ.ಡಿ. ತನಿಖೆಗೆ ಆಜ್ಞೆ ಮಾಡುತ್ತೀರಿ. ಅನಾನುಕೂಲವಾಗಿ ಬಂದರೆ ಸಿ.ಓ.ಡಿ. ತನಿಖೆ ಬೇಡವೆಂದು ಹೇಳುತ್ತೀರಿ. ಡಿಸ್ಟ್ರಿಕ್ಟ್ ರಿಟರ್ನಿಂಗ್ ಆಫೀಸರ್ ಜವಾಬ್ದಾರಿ ಮನುಷ್ಯ, It is a part of the Constitution. You are only an implementing authority in the state. The District Returning Officer is the Deputy Commissioner. ನನ್ನ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈಗಾಗಲೇ ಫಾರೆಸ್ಟ್ ಡಿಸೀಸ್ ಅಂದರೆ, ಮಂಗನ ಕಾಯಿಲೆ ಬಂದು ಎರಡು ಸಾವಾಗಿದೆ. ಮೂರನೆಯ ಸಾವು ಸಿದ್ಧವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಮೊನ್ನೆ ಈ ವಿಚಾರವನ್ನು ತಂದಿದ್ದೇನೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮಂಗನ ಕಾಯಿಲೆ ತುತ್ತಾಗಿರುವವರ ಸಂಖ್ಯೆ ಇವತ್ತಿನವರೆಗೆ ಅಂದರೆ ೧೧-೧೨ರವರೆಗೆ ೨೮೦ ಜನಕ್ಕೆ ತಗುಲಿದೆ, ಅದರಲ್ಲಿ ೨೧ ಜನ ಆಸ್ಪತ್ರೆಯಲ್ಲಿದ್ದಾರೆ. ಈ ಒಂದು ಪಿಡುಗು ಸಾಂಕ್ರಾಮಿಕ ಅಲ್ಲ. ಕಾಡಿಗೆ ಬಡವರು ಸೌದೆ ತರಲು ಹೋಗುತ್ತಾರೆ. ಅಲ್ಲಿ ಅವರಿಗೆ ಒಂದು ಉಣ್ಣೆ ಕಚ್ಚುತ್ತದೆ. ಅದು ಕಚ್ಚಿದ ತಕ್ಷಣ ೨-೩ ದಿವಸದಲ್ಲಿ ಜ್ವರ ಬರುತ್ತೆ, ಇದು ಪ್ರಾರಂಭವಾಗುತ್ತದೆ. ಜ್ವರ ವಿಪರೀತಕ್ಕೆ ಹೋಗುತ್ತದೆ, ಅಂದರೆ ೧೦೩-೧೦೪

ಡಿಗ್ರಿವರೆಗೆ ಹೋಗುತ್ತದೆ. ಆಗ ಅವನನ್ನು ಉಳಿಸುವುದು ಕಷ್ಟ. ಏನಾದರೂ ಪ್ರಿವೆಂಟೀವ್ ಮೆತೆಡ್ಸ್ ಇದೆಯೋ ಏನೋ ಎಂಬುದರ ಬಗ್ಗೆ ಪ್ರಯತ್ನ ಮಾಡಿದರೂ ಅದು ಏನೂ ಆಗಲಿಲ್ಲ. ಇದಕ್ಕೆ ವ್ಯಾಕ್ಸಿನ್ ತಯಾರು ಮಾಡಬೇಕೆಂದು ಪ್ರಯತ್ನ ನಡೆದಿದೆ. ಇದು ಸಾಮಾನ್ಯವಾಗಿ ಬೇಸಿಗೆಯಲ್ಲಿ ಬರುವ ಖಾಯಿಲೆ ಆದರೆ ಈಗ ಚಳಿಗಾಲದಲ್ಲಿ ಬಂದಿದೆ. ಇಲ್ಲಿ ಮಾನ್ಯ ಆರೋಗ್ಯ ಮಂತ್ರಿಯವರು ಇದ್ದಾರೆ. ಅವರು ಮಲೆನಾಡಿಗೆ ಸೇರಿದವರು. ಇದನ್ನು ಅವರು ಅರ್ಥ ಮಾಡಿಕೊಳ್ಳಬಲ್ಲರು. ಕೂಡಲೇ ಆರೋಗ್ಯ ಮಂತ್ರಿಗಳು ಅಲ್ಲಿಗೆ ಭೇಟಿ ಕೊಡಬೇಕು. ಆಗ ಅವರಿಗೆ ಸ್ವಲ್ಪ ಮಟ್ಟಿನ ಪರಿಸ್ಥಿತಿ ಅರಿವಾಗುತ್ತದೆ. ವ್ಯಾಕ್ಸಿನ್ ತಯಾರಾಗದಿದ್ದರೆ ಹಾಗೂ ಇದರ ಪ್ರಿವೆನ್‌ಷನ್ ಸಾಧ್ಯ ಇಲ್ಲದಿದ್ದರೆ ಕ್ಯೂರ್ ಮಾಡಲು ಸಾಧ್ಯ ಇದೆ. ಆ ಆಸ್ಪತ್ರೆಯಲ್ಲಿ ಡಾಕ್ಟರುಗಳು ಇಲ್ಲ. ತಾವು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುತ್ತೀರೆಂದು ನಂಬಿರುತ್ತೇನೆ. ಜನರು ನಿಮಗೆ ಮ್ಯಾಸೀವ್ ಮ್ಯಾಂಡೇಟ್ ಕೊಟ್ಟರು. ಈ ಮ್ಯಾಸಿವ್ ಮ್ಯಾಂಡೇಟ್ ಇಂದ ಹೊರಬರುವ ಸುಭದ್ರ ಸರ್ಕಾರ ಇನ್ನೂ ಹೊರಬಂದಿಲ್ಲ.

೩–೦೦ ಪಿ. ಎಂ.

ಅಭದ್ರತೆ ಎದ್ದು ಕಾಣುತ್ತಿದೆ. ಈ ಮಿನಿಸ್ಟ್ರಿ ಸ್ಟೇಬಲ್, ಅಥವಾ ಅನ್‌ಸ್ಟೇಬಲ್ ಎನ್ನುವುದು ನನಗೆ ಸಂಬಂಧಪಟ್ಟಿದ್ದು ಅಲ್ಲ. ಆದರೆ ಸರ್ಕಾರ ಸುಭದ್ರ ಆಗಿಲ್ಲ, ಮಂತ್ರಿಮಂಡಲ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ. ಆ ಕಾರಣದಿಂದ ಈ ರಾಜ್ಯಪಾಲರ ಭಾಷಣ ನೀರಸವಾಗಿದೆ. ಇಷ್ಟೊಂದು ಸಂಖ್ಯೆಯಲ್ಲಿ ಸದಸ್ಯರನ್ನು ಇಟ್ಟುಕೊಂಡು ಸುಭದ್ರವಾದ ಮಂತ್ರಿ ಮಂಡಲ ಮಾಡದೇ ಇರುವುದು ರಾಜ್ಯದ ಆಡಳಿತದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಈ ಶಂಕೆಯ ನಿವಾರಣೆಗಾಗಿ ನಾನು ಹೇಳುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಅನುಭವಿಗಳು ಅಷ್ಟೇ ಅಲ್ಲ. ಅವರು ಹೆಸರಿಗೆ ತಕ್ಕಹಾಗೆ ನಡೆದುಕೊಳ್ಳಬೇಕು. ವೀರ ಮತ್ತು ವೀರರಲ್ಲಿ ಇಂದ್ರ. ಯಾವುದೇ ಮುಲಾಜಿಗ ಸಿಗದೆ ವಿರೇಂದ್ರರಾಗಿ ನಡೆದುಕೊಳ್ಳಬೇಕು. ನನಗೆ ಅವರನ್ನು ನೋಡಿದರೆ ಅವರು ಯಾವುದೋ ಸಂಕೋಲೆಯೊಳಗೆ ಸಿಕ್ಕಿದ್ದಾರೆ, ಈ ಸಂಕೋಲೆಯೊಳಗಿಂದ ಬಿಡಿಸಿಕೊಳ್ಳುವುದಕ್ಕೆ ಬಹಳ ಕಷ್ಟಪಡುತ್ತಿದ್ದಾರೆ ಎಂದು ನನಗನ್ನಿಸುತ್ತದೆ.

ಒಬ್ಬರು ಮಾನ್ಯ ಸದಸ್ಯರು.—ಇದು ನಿಮ್ಮ ಕಲ್ಪನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನನ್ನ ಕಲ್ಪನೆಯಿಂದಲೇ ನಾನು ಹೇಳುತ್ತಿರುವುದು. ಅದು ಅಲ್ಲವೆಂದು ಅವರು ಹೇಳಲಿ. ಕರ್ನಾಟಕ ರಾಜ್ಯ ಸರ್ಕಾರದ ಮಂತ್ರಿಮಂಡಲ ಬೆಂಗಳೂರಿನಲ್ಲಿ ತೀರ್ಮಾನ ಆಗಿದ್ದು ಅಲ್ಲ. ಬೇರೆ ಎಲ್ಲಿಯೋ ತೀರ್ಮಾನ ಆಗುತ್ತದೆ. ಡೆಲ್ಲಿಯಲ್ಲಿ ಆಗುತ್ತದೆಯೋ ಗೊತ್ತಿಲ್ಲ.

ಶ್ರೀ ಎಂ. ಮಹಾದೇವ್.—ನಿಮ್ಮ ಕಾಲದಲ್ಲಿ ಏನು ಆಗಿತ್ತು? ಇಲ್ಲದ ಕಲ್ಪನೆ ಮಾಡಿ ಅವಾಂತರ ಮಾಡುತ್ತಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಅದಕ್ಕಾಗಿ ಸಾಧ್ಯವಾದಷ್ಟು ಬೇಗ ಪೂರ್ಣ ಪ್ರಮಾಣದಲ್ಲಿ ಮಂತ್ರಿಮಂಡಲ ಕೊಟ್ಟು ಇದು ವೀರೇಂದ್ರಪಾಟೀಲರ ಮಂತ್ರಿಮಂಡಲ ಅನ್ನಿಸಿಕೊಳ್ಳಲಿ, ರಾಜ್ಯದ ಇನ್ನೊಂದು ಹೊಸದಾಗಿ ಬಂದಿರತಕ್ಕ ಮಂತ್ರಿಮಂಡಲ ಎಲ್ಲಾ ಟೀಕೆಗಳಿಂದ ವಿಮುಕ್ತವಾಗಿ ಒಂದು ಒಳ್ಳೆಯ ಸರ್ಕಾರ ಕೊಡುವುದಕ್ಕೆ ಸಾಧ್ಯವಾಗುವುದಾದರೆ, ಆ ಸಂತೋಷಪಡುವುದರಲ್ಲಿ ನಾನು ಪಾಲುದಾರನಾಗುತ್ತೇನೆ ಎನ್ನುವಂಥ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).— ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಮಂಡಲದಲ್ಲಿ ಮಾಡಿದ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಒಂದೆರಡು ನನ್ನ ಅನಿಸಿಕೆಗಳನ್ನು ಹೇಳಬೇಕೆಂದು ನಾನು ಇಚ್ಛಿಸಿದ್ದೇನೆ. ನಾನು ಇದನ್ನು ಓದಿ ತಿಳಿದುಕೊಂಡಹಾಗೆ ಈ ವಂದನಾ ನಿರ್ಣಯದಲ್ಲಿ ನನಗೆ ಹೊಸದೇನೂ ಕಂಡುಬಂದಿಲ್ಲ. ಮಾಮೂಲು ಭಾಷಣದ ರೀತಿಯಲ್ಲಿದೆ. ರಾಜ್ಯದ ಪ್ರಗತಿಯ ದೃಷ್ಟಿಯಿಂದ ತಾತ್ಕಾಲಿಕವಾದ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಯೇ ಹೊರತು ಶಾಶ್ವತವಾದ ನಮ್ಮ ರಾಜ್ಯದ ಜನತೆಯಲ್ಲಿ ವಿಶ್ವಾಸ ಹುಟ್ಟಿಸತಕ್ಕ ಯಾವುದೇ ಕಾರ್ಯಕ್ರಮ ಇದರಲ್ಲಿ ನನಗೆ ಕಂಡುಬರುತ್ತಿಲ್ಲ, ಹಿಂದಿನ ಸರ್ಕಾರ ಸರಿಯಾಗಿ ಆಡಳಿತ ಮಾಡಿಲ್ಲವೆಂದು ನಿಮಗೆ ಜನತೆ ಅಧಿಕಾರವನ್ನು ಕೊಟ್ಟಿದ್ದಾರೆ, ಆದರೆ ನನಗೆ ಜನರ ನಿರೀಕ್ಷೆ ಇದರಿಂದ ಹುಸಿಯಾದಂತೆ ನಿಸಿದೆ. ಇವತ್ತು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ "ನನ್ನ ಸರ್ಕಾರವು ವಿಶ್ವಾಸಾರ್ಹವಾದ, ಜನತೆಯ ಭಾವನೆಗಳಿಗೆ ಸ್ಪಂದಿಸುವ ಮತ್ತು ದಕ್ಷ ಆಡಳಿತವನ್ನು ನೀಡುವುದಾಗಿ ಕರ್ನಾಟಕ ಜನತೆಗೆ ನಮ್ರ

ಹಾಗೂ ಪ್ರಾಮಾಣಿಕ ವಚನ ನೀಡುತ್ತದೆ'' ಎಂದು ಹೇಳಿದ್ದಾರೆ. ಆದರೆ ದಕ್ಷ ಆಡಳಿತವನ್ನು ಹೇಗೆ ನೀಡುತ್ತೇವೆ ಎಂಬುದರ ಬಗ್ಗೆ ಉಲ್ಲೇಖ ಇಲ್ಲ. ನಮ್ಮ ರಾಜ್ಯದಲ್ಲಿರತಕ್ಕಂಥ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ ಯಾವ ರೀತಿಯಲ್ಲಿ ದಕ್ಷ ಆಡಳಿತವನ್ನು ಕೊಡುತ್ತಾರೆ ಎಂದು ನನಗೆ ಹೇಳುವುದಕ್ಕೆ ಆಗುವುದಿಲ್ಲ. ಖಾಲಿ ಹುದ್ದೆಗಳನ್ನು ಭರ್ತಿಮಾಡುವ ಮೂಲಕ ನಮ್ಮ ರಾಜ್ಯದಲ್ಲಿ ಇರತಕ್ಕ ಲಕ್ಷಾವಧಿ ನಿರುದ್ಯೋಗಿಯುವಕರಿಗೆ ಉದ್ಯೋಗ ಸಿಗುವ ಹಾಗೆ ಆಗುತ್ತದೆ. ಇದರಿಂದ ಜನತೆ ದಕ್ಷ ಆಡಳಿತವನ್ನು ಕೂಡ ಕೊಟ್ಟ ಹಾಗೆ ಆಗುತ್ತದೆ. ಮಾತ್ರವಲ್ಲದೆ ಯುವಕರು ಸ್ವಾಭಿಮಾನದಿಂದ ಬದುಕಲು ದಾರಿ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದರೆ ಈ ಮಂದನು ನಿರ್ಣಯದಲ್ಲಿ ಇಂತಹ ಯಾವುದೇ ಕಾರ್ಯಕ್ರಮ ಹಾಕಿಕೊಂಡಿದು ಇಲ್ಲ. ಇನ್ನು ಈ ರೈತರ ಬಗ್ಗೆ ಏನೂ ಇಲ್ಲ. ಎಲ್ಲಾ ಸರ್ಕಾರಗಳು ಎಲ್ಲಾ ರಾಜಕೀಯ ಪಕ್ಷಗಳು ರೈತರನ್ನು ನಮ್ಮ ದೇಶದ ಬೆನ್ನೆಲುಬು ಎಂದು ಹೇಳುತ್ತಾರೆ. ಆದರೆ ರೈತರ ಸಮಸ್ಯೆಗಳ ಬಗ್ಗೆ ಯಾವುದೇ ಶಾಶ್ವತ ಪರಿಹಾರ ಕೊಡತಕ್ಕಂಥ ಕಾರ್ಯಕ್ರಮವನ್ನು ಇದರಲ್ಲಿ ತೆಗೆದು ಕೊಂಡ ಹಾಗೆ ಕಾಣುತ್ತಿಲ್ಲ.

ಇದರಲ್ಲಿ ತೋರಿಸಿದಹಾಗೆ ಕಾಣುತ್ತಾ ಇಲ್ಲ. ನಾನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಿದ್ದು, ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿರತಕ್ಕ ಸಮಸ್ಯೆಯ ಬಗ್ಗೆ ಹೇಳುತ್ತೇನೆ. ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಸರ್ಕಾರ ಕೋಟಿಗಟ್ಟಲೆ ಖರ್ಚು ಮಾಡಿ, ಈ ಕಾರ್ಖಾನೆಯನ್ನು ನಿರ್ಮಾಣ ಮಾಡಿತು. ಇವತ್ತು ಈ ಸಕ್ಕರೆ ಕಾರ್ಖಾನೆಗೆ ರೈತರು ಕೊಟ್ಟಂಥ ಕಬ್ಬಿನ ಬೆಲೆ ಇವತ್ತಿನವರೆಗೂ ಪಾವತಿಯಾಗಿಲ್ಲ. ನಾವು ರೈತರ ಬಗ್ಗೆ ದೊಡ್ಡ ದೊಡ್ಡ ಮಾತನಾಡುತ್ತೇವೆ. ಈ ರೈತರಿಗೆ ಸಿಗತಕ್ಕ ಹಣ ಕೂಡಲೇ ಸಿಗತಕ್ಕ ವ್ಯವಸ್ಥೆಯನ್ನು ಮಾಡಿರುವುದರಲ್ಲಿ ಸರ್ಕಾರದ ಪ್ರಾಮಾಣಿಕತನ ಕಾಣುತ್ತಾ ಇಲ್ಲ. ಮತ್ತು ರೈತರಿಗೆ ಕಬ್ಬಿಗೆ ಕೊಡತಕ್ಕ ಹಣ ಏನಿದೆ ಅದನ್ನು ಕೂಡಲೇ ಕೊಡತಕ್ಕ ವ್ಯವಸ್ಥೆ ಆಗಬೇಕು. ಜೊತೆಗೆ ಈಗಾಗಲೇ ಕಬ್ಬಿಗೆ ನಿಗದಿ ಮಾಡಿರತಕ್ಕ ಹಣ ತುಂಬಾ ಕಡಿಮೆ ಇದೆ, ಇದನ್ನು ಟನ್ನಿಗೆ ೪೦೦ ರೂಪಾಯಿ ಗಳನ್ನು ಕೊಡುವಂಥ ವ್ಯವಸ್ಥೆ ಆದರೆ, ರೈತರು ವಿಶ್ವಾಸದಿಂದ ಕಬ್ಬು ಬೆಳೆಯುವುದಕ್ಕೆ ಸಾಧ್ಯವಾಗು ತ್ತದೆ. ಮತ್ತು ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಒಳ್ಳೆಯ ರೀತಿಯಿಂದ ನಡೆಯುವುದಕ್ಕೆ ಸಾಧ್ಯ ವಾಗುತ್ತದೆ. ಇವತ್ತು ರೈತರ ಸಾಲ ಮನ್ನಾ ಮಾಡತಕ್ಕ ವಿಚಾರ ಪ್ರಸ್ತಾಪವಾಗುತ್ತಿದೆ. ಇದರಿಂದ ಮಾತ್ರ ರೈತರ ಪ್ರಗತಿಯಾಗುತ್ತದೆ ಎಂದು ಹೇಳದೇ ಹೋದರೂ, ಸ್ವಲ್ಪಮಟ್ಟಿಗೆ ರೈತರಿಗೆ ಅನುಕೂಲ ವಾಗುತ್ತದೆ. ಇವತ್ತು ರೈತರ ಪ್ರಗತಿಯ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ಹಾಕಿದ್ದಾರೆ. ಗೊಬ್ಬರ, ಬೀಜ, ಕ್ರಿಮಿನಾಶಕ ಔಷಧಿಗಳನ್ನು ಯಾವುದೋ ಸಮಯದಲ್ಲಿ ಕೊಟ್ಟರೆ ಪ್ರಯೋಜನ ವಾಗುವುದಿಲ್ಲ. ಸರಿಯಾದ ಸಮಯದಲ್ಲಿ ಇವುಗಳನ್ನು ಕೊಟ್ಟರೆ ರೈತರಿಗೆ ಪ್ರಯೋಜನವಾಗುತ್ತದೆ. ಇವತ್ತು ರೈತರಿಗೆ ಕೊಡತಕ್ಕ ಚಿಮಣಿ ಎಣ್ಣೆ ದರ ಒಂದು ರೀತಿ ಇದೆಯೆಂದರೆ ಸಾಮಾನ್ಯ ಜನರಿಗೆ ಕೊಡತಕ್ಕ ಚಿಮಣಿ ಎಣ್ಣೆ ದರವೇ ಬೇರೆ. ಇವತ್ತು ವಿದ್ಯುತ್ತಿನ ಬಗ್ಗೆ ಹೇಳುವುದಿದ್ದರೆ ಕೂಡ, ರೈತ ಕೃಷಿಗೆ ನೀರು ಒದಗಿಸುವ ದೃಷ್ಟಿಯಿಂದ ಪಂಪ್‌ಸೆಟ್ಟಿಗೆ ಅರ್ಜಿ ಹಾಕಿ, ಸೊಸೈಟಿ ಮೂಲಕ ಸಾಲ ತಂದು ಒಂದು ವರ್ಷವಾದರೂ ಕೂಡ ಸರ್ಕಾರ ಈ ಪಂಪ್‌ಸೆಟ್‌ಗಳಿಗೆ ಕನೆಕ್ಷನ್ ಕೊಡುವ ಪರಿಸ್ಥಿತಿ ಇಲ್ಲ. ಈ ಬಗ್ಗೆ ವಿಚಾರಿಸಿದಾಗ, ಕೆಲವು ಮೆಟೀರಿಯಲ್ಸ್ ಸಲಕರಣೆಗಳ ಕೊರತೆ ಕಂಡುಬಂದಿದೆ. ಈ ಕೊರತೆ ಯನ್ನು ಸರಿಪಡಿಸದೇ ಹೋದರೆ ರೈತರಿಗೆ ತೊಂದರೆಯಾಗುತ್ತದೆ. ಇದನ್ನು ಆದಷ್ಟು ಜಾಗ್ರುತೆ ಸರ್ಕಾರ ಗಮನಿಸಿದರೆ ರೈತರಿಗೆ ಸ್ವಲ್ಪಮಟ್ಟಿನ ಪ್ರಯೋಜನವಾಗುತ್ತದೆ.

ಇನ್ನು ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ಮೀನುಗಾರರ ಸಮಸ್ಯೆ ಹಾಗೂ ಕೃಷಿ ಕಾರ್ಮಿಕರು, ಬೀಡಿ ಕಟ್ಟುವವರು ಮತ್ತು ಮೂರ್ತೆದಾರರ ಸಮಸ್ಯೆ ಬೇಕಾದಷ್ಟಿದೆ. ಸಾಮಾನ್ಯ ಜನ ಈ ಉದ್ಯೋಗ ಗಳಲ್ಲಿ ಭಾಗಿಯಾಗಿರುತ್ತಾರೆ. ನಾನು ಕರಾವಳಿ ಪ್ರದೇಶದಿಂದ ಬಂದಿರುವುದರಿಂದ, ಈ ಮೀನುಗಾರರ ಸಮಸ್ಯೆ ಬಗ್ಗೆ ಹೇಳಬೇಕಾಗಿದೆ. ಆದರೆ, ಈ ವಿಚಾರಗಳು ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿಲ್ಲ, ಜನತಾದಳದ ಅಧಿಕಾರದ ಅವಧಿಯಲ್ಲಿ ಕೂಡ ಇವರಿಗೆ ಯಾವುದೇ ರೀತಿಯ ಸಹಾಯ ಸಿಕ್ಕಿರುವುದಿಲ್ಲ. ಧನಸಹಾಯ, ಸಬ್ಸಿಡಿ, ಮೀನು ಉದ್ದಿಮೆಗಳಲ್ಲಿ ನಿರತರಾಗಿರುವ ಮೀನುಗಾರರ ಮಕ್ಕಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದರ ಬಗ್ಗೆ ಸರ್ಕಾರದ ನಿಲುವು ಏನೂ ಪ್ರಸ್ತಾಪವಾಗಿಲ್ಲ. ಕರಾವಳಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ವಾಸಮಾಡತಕ್ಕಂಥ ಬೀಡಿ ಕಾರ್ಮಿಕರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರು ಕುಟುಂಬಗಳು, ಲಕ್ಷಾಂತರ ಕುಟುಂಬಗಳು ಬೀಡಿ ಕಟ್ಟಿ ಜೀವನ ಸಾಗಿಸುವುದನ್ನು ನಾವು ನೋಡುತ್ತಿದ್ದೇವೆ. ಅಲ್ಲಿ ಅವರಿಗೆ ಬೀಡಿ ಕಟ್ಟುವುದಕ್ಕೆ ಬೇಕಾದಂಥ ಕಚ್ಚಾ ಮಾಲು ಏನಿದೆ ಅದು ಕೂಡ ಸಿಕ್ಕುತ್ತಾ ಇಲ್ಲ. ಅದರ ಕಡೆ ಸರ್ಕಾರ ಗಮನ ಹರಿಸಿಲ್ಲ. ಇವರಿಗೆ ಈ ಕಚ್ಚಾಮಾಲು ಸಿಗತಕ್ಕ ವ್ಯವಸ್ಥೆ ಆಗಬೇಕಾಗಿದೆ. ಮತ್ತೆ ನಮ್ಮ ಜಿಲ್ಲೆಯಲ್ಲಿ ಕಡಲ ಕೊರತೆಯನ್ನು ತಡೆಗಟ್ಟುವ ಸಲುವಾಗಿ, ಹಲವಾರು ಕಡೆಗಳಲ್ಲಿ ತಡೆಗೋಡೆಗಳನ್ನು ನಿರ್ಮಾಣ ಮಾಡಬೇಕಾಗಿದೆ.

ಹಲವಾರು ಕಡೆಗಳಲ್ಲಿ ಬರತಕ್ಕ ನೀರು ಸಮುದ್ರಕ್ಕೆ ಸೇರತಕ್ಕ ಜಾಗಗಳಲ್ಲಿ ತಡೆಗೋಡೆ ನಿರ್ಮಾಣ ಮಾಡಬೇಕಾಗಿದೆ. ಈ ತಡೆಗೋಡೆಗಳ ಬಗ್ಗೆಯೂ ಕೂಡ ಈ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿರುವುದು ಕಾಣುತ್ತಿಲ್ಲ. ಇದೇ ರೀತಿಯಲ್ಲಿ ಇವತ್ತು ನಾವುಗಳು ಗ್ರಾಮಾಂತರ ಪ್ರದೇಶದಿಂದ ಬಂದಂಥವರು. ಎಷ್ಟೋ ಗ್ರಾಮಗಳಲ್ಲಿ ಸ್ವಾತಂತ್ರ್ಯ ಸಿಕ್ಕಿ ೪೩ ವರ್ಷವಾದರೂ ಕೂಡಾ ಸಂಪರ್ಕ ವ್ಯವಸ್ಥೆ ಸರಿಯಾಗಿ ಇಲ್ಲ, ಮಾರ್ಗಗಳ ವ್ಯವಸ್ಥೆ ಇಲ್ಲ. ಮಾರ್ಗಗಳು ಇದ್ದಲ್ಲಿ ಕೂಡಾ ಶಾಲಾ ಮಕ್ಕಳಿಗೆ ಹೋಗುವುದಕ್ಕೆ ಬಸ್ಸಿನ ಸೌಕರ್ಯ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಮೂಲಭೂತವಾಗಿರತಕ್ಕಂಥ ಈ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಗ್ರಾಮಾಂತರ ಪ್ರದೇಶಗಳ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ ಇದರ ಕಡೆಗೆ ಕೂಡಾ ಸರಕಾರದವರು ಗಮನಹರಿಸುವುದು ಬಹಳ ಅವಶ್ಯಕ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇಷ್ಟು ಹೇಳಿ ನಾನು ರಾಜ್ಯಪಾಲರ ಭಾಷಣದ ಮೇಲಿನ ನನ್ನ ಅನಿಸಿಕೆಗಳನ್ನು ಹೇಳಿ ಮುಗಿಸುತ್ತೇನೆ.

† ಶ್ರೀ ಬಾಬಾಗೌಡ ರುದ್ರಗೌಡ ಪಟೀಲ್ (ಕಿತ್ತೂರ್).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ. ವಿಧಾನಮಂಡಲದಲ್ಲಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ವಂದನೆಯನ್ನರ್ಪಿಸುತ್ತಾ ನಾನು ಎರಡು ಮಾತುಗಳನ್ನು ಮಾತನಾಡುವುದಕ್ಕೆ ಬಯಸುತ್ತೇನೆ. ನನ್ನ ಮಾತಿಗೆ ಮೊದಲು ಅತ್ಯಂತ ಗಂಭೀರವಾದ ಚರ್ಚೆ ಮಾಡಬೇಕಾದಂಥ ಒಂದು ವಿಷಯ ಇತ್ತು. ಶ್ರೀಮಾನ್ ಕೌಜಲಗಿಯವರು ಆ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪ ಮಾಡಿದರು. ಅದು ಹತ್ತಿಯ ಮಾರಾಟದ ವಿಚಾರ. ಈಗ ಸದನ ನಡೆಯುವ ವೇಳೆಯಲ್ಲಿ ನನಗೆ ಒಂದು ಸುದ್ದಿ ಬಂತು. ಅದೇನೆಂದರೆ ಬೈಲಹೊಂಗಲ ಮಾರುಕಟ್ಟೆಯಲ್ಲಿ ನೂರಾರು ಬೇಲ್ ಹತ್ತಿ ಭಸ್ಮವಾಗಿ ಎರಡು ಲಕ್ಷರೂಪಾಯಿಗಳ ನಷ್ಟವಾಗಿದೆ. ನಾಳೆ ಟೆಂಡರ್ ಇದೆ, ಬಹುತೇಕ ರೈತರು ದೊಡ್ಡ ಪ್ರಮಾಣದಲ್ಲಿ ಗೊಂದಲ ಹಾಕಬಹುದೆಂದು ನನಗೆ ತಿಳಿದು ಬಂದಿತು. ಮಾನ್ಯಮುಖ್ಯಮಂತ್ರಿಗಳು ಇತ್ತ ಗಮನ ಕೊಡಬೇಕು. ನಾಳೆ ಬೈಲಹೊಂಗಲ ಪೇಟೆಯಲ್ಲಿ ಹತ್ತಿ ವ್ಯಾಪಾರದಲ್ಲ ಅತೀ ದೊಡ್ಡ ಗೊಂದಲ ಆಗಬಹುದೆಂಬ ಸುದ್ದಿ ನನಗೆ ಬಂದಿದೆ. ಒಂದು ನೂರು ಬೇಲ್ ಹತ್ತಿ ಸುಟ್ಟಿದೆ, ಲಕ್ಷಾಂತರ ರೂಪಾಯಿಗಳ ಹತ್ತಿ ಅಂಗಡಿಗೆ ಮಾರಾಟವಾಗದೆ ಉಳಿದಿದೆ. ಕಾರಣ ಆ ಗೊಂದಲವನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ಈ ಸಭೆಗೆ ತಿಳಿಸುತ್ತೇನೆ. ಆಮೇಲೆ ನಿನ್ನೆಯಿಂದ ನಡೆದಂಥ ಒಂದು ವಿಚಾರ ಎಂದರೆ ರೈತರ ಸಾಲದ ವಿಚಾರ. ಬಹುತೇಕ ಎಲ್ಲಾ ಸರಕಾರಗಳೂ ಇಲ್ಲಿಯವರೆಗೆ ರೈತನಿಗೆ ಏತಕ್ಕೆ ಸಾಲವಾಯಿತು ಎಂಬುದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಹೋಗಲಿಲ್ಲ. ರೈತರ ಸಾಲ ಬಗೆಹರಿಸುವಂತಹದು ದೊಡ್ಡ ಪ್ರಶ್ನೆ ಅಲ್ಲ. ದುಡಿಯುವಂತಹ ಜನ, ದೇಶಕ್ಕೆ ಅನ್ನ ಕೊಡುವಂತಹ ಜನ, ಅವರು. ಈ ದೇಶದ ಯಂತ್ರದ ಗಾಲಿಗಳು ತಿರುಗಿದರೂ ಅದು ರೈತನ ಉತ್ಪಾದನೆಯನ್ನು ಮಾಡಲಾರವು. ರೈತನ ಉತ್ಪಾದನೆಯನ್ನು ಊಟ ಮಾಡಿ ಎಲ್ಲರೂ ಬದುಕಬೇಕು. ರೈತನ ಅನ್ನ ಮುಖ್ಯ. ಇಷ್ಟು ದೊಡ್ಡದು ರೈತನ ಉತ್ಪಾದನೆ. ರೈತನಿಗೆ ಏತಕ್ಕೆ ಸಾಲವಾಯಿಂತು ಎಂಬುದರ ಬಗ್ಗೆ ದಲೀಪ್ ಎಸ್. ಸ್ವಾಮಿ ಮತ್ತು ಅಶೋಕ್ ಗುಲಾಟಿ ಎಂಬುವವರು ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ ಫ್ರಮ್ ಪ್ರಾಸ್ಪೆರಿಟಿಟು ರೆಟ್ರಾಗ್ರೆಷನ್ ಎಂದು ಒಂದು ರೀಸರ್ಚ್ ರಿಪೋರ್ಟ್ ಕೊಟ್ಟಿದ್ದಾರೆ, ೧೯೮೦ ರಿಂದ ೮೮ರ ವರೆಗೆ ಭಾರತದ ರೈತರು ೪೫ ಸಾವಿರ ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸಿ ಈ ದೇಶವನ್ನು ಬದುಕಿಸಿದ್ದಾರೆ ಎಂಬ ಸತ್ಯಸಂಗತಿಯನ್ನು ಅವರು ರೀಪೋರ್ಟ್ ಮಾಡಿರುತ್ತಾರೆ. ಅದು ಸಾಮಾನ್ಯ ರಿಪೋರ್ಟ್ ಅಲ್ಲ. ವೈಜ್ಞಾನಿಕವಾಗಿ ಅಂಕಿಸಂಖ್ಯೆಗಳನ್ನು ಕೊಟ್ಟಿರತಕ್ಕಂಥ ರಿಪೋರ್ಟ್ ಆಗಿದೆ. ಈ ಎಂಟು ವರ್ಷಗಳ ಅವಧಿಯಲ್ಲಿ ರೈತರು ೪೫ ಸಾವಿರ ಕೋಟಿ ನಷ್ಟ ಮಾಡಿಕೊಂಡು ದೇಶವನ್ನು ಬದುಕಿಸಿದ್ದಾರೆ. ಬೇಕಾದರೆ ಇದನ್ನು ಕನ್ನಡದಲ್ಲಿ ಭಾಷಾಂತರ ಮಾಡಿ ಸಭೆಗೆ ಕೊಡುತ್ತೇನೆ. ನೂರಕ್ಕೆ ತೊಂಭತ್ತೈದರಷ್ಟು ಜನ ರೈತರ ಮಕ್ಕಳೇ ಎಂದು ಇರತಕ್ಕಂಥ ನಾವೆಲ್ಲರೂ ಈ ಸಂಗತಿಯನ್ನು ಅರ್ಥ ಮಾಡಿಕೊಳ್ಳಬೇಕು. ಇದರಲ್ಲಿ ರಾಜಕೀಯ ಬೇಡ. ಏತಕ್ಕೆ ಈ ಪರಿಸ್ಥಿತಿ ರೈತರಿಗೆ ಬಂತು, ಇದಕ್ಕೆ ಪರಿಹಾರ ಮಾರ್ಗಗಳು ಏನು ಎಂದು ಕಂಡುಕೊಳ್ಳುವುದಕ್ಕೆ ನಾವೆಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಒಳ್ಳೆಯದು. ಈ ಸತ್ಯಸಂಗತಿಯನ್ನು ಅರಿತುಕೊಳ್ಳುವುದು ಬಹಳ ಮುಖ್ಯ ಎಂದು ನಾನು ಹೇಳುತ್ತೇನೆ. ಈ ವೈಜ್ಞಾನಿಕ ವಿಶ್ಲೇಷಣೆ ಏನಿದೆ ಇದನ್ನು ಮುಖ್ಯ ಆಧಾರವಾಗಿ ಇಟ್ಟುಕೊಂಡು ಈ ಸದನದ ಅಧಿಕಾರ ವ್ಯಾಪ್ತಿಯಲ್ಲಿ ನಾವು ಏನಾದರೂ ಮಾಡಿ ಈ ಸಮಸ್ಯೆಗೆ ಪರಿಹಾರ ದೊರಕಿಸಿಕೊಡಬೇಕೆಂಬ ಪ್ರಾಮಾಣಿಕ ಪ್ರಯತ್ನವನ್ನು ನಾವೆಲ್ಲರೂ ಕೂಡಾ ಮಾಡಬೇಕು. ಎಲೆಕ್ಷನ್ ಮುಕ್ತಾಯವಾದ ನಂತರ ನಾವೆಲ್ಲರೂ ಜನರ ಜೀವಂತ ಸಮಸ್ಯೆಗಳನ್ನು ತಲೆಯಲ್ಲಿಟ್ಟುಕೊಂಡು ಬಂದಿದ್ದೇವೆ. ಈ ಸಮಸ್ಯೆಗಳನ್ನು ಇಲ್ಲಿಯ ವಿಧಿ ವಿಧಾನಗಳ ಚೌಕಟ್ಟಿನೊಳಗೆ ಚರ್ಚಿಸಿ ಈ ಸಮಸ್ಯೆಗಳಿಗೆ ಪ್ರಾಮಾಣಿಕ ಪರಿಹಾರ ಕಂಡುಹಿಡಿಯುವ

ಪ್ರಯತ್ನ ಇಲ್ಲಿ ನಡೆಯುತ್ತಿಲ್ಲ, ಸಾಂಪ್ರದಾಯಿಕ ರಾಜಕಾರಣ ವ್ಯವಸ್ಥೆಯ ಒಳಗೆ ಈ ಸಭೆಗಳನ್ನು ಮಾಡುತ್ತಿದ್ದೇವೆ ಎಂಬ ಭಾವನೆ ನನ್ನದು. ಏತಕ್ಕೆಂದರೆ ಜನರ ಬದುಕು, ಕೇವಲ ರೈತರದ್ದೇ ಅಲ್ಲ, ಕೂಲಿಗಾರರದು, ರೈತರಲ್ಲದಿರುವವರದ್ದು, ಇವರ ಬದುಕಿನ ಬಗ್ಗೆ ನಾವು ವಿಚಾರ ಮಾಡಿದಾಗ ಅನೇಕ ಸಮಸ್ಯೆಗಳು ನಮ್ಮ ತಲೆಯಲ್ಲಿ ಇವೆ. ಈ ಸದನದ ಎಲ್ಲಾ

ನಮ್ಮ ಮಾನ್ಯ ಸದಸ್ಯರ ತಲೆಯಲ್ಲಿ ಎಷ್ಟೋ ವಿಚಾರಗಳು ಇದ್ದರೂ ಸಹ ಸರಿಯಾದ ರೀತಿಯಲ್ಲಿ ಪರಿಹಾರ ಕಂಡುಕೊಳ್ಳತಕ್ಕಂಥ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೃಷಿಗೆ ಸಂಬಂಧಪಟ್ಟಂತೆ ಮಾತನಾಡುವುದಾದರೆ ಚುನಾವಣೆ ಸಂದರ್ಭದಲ್ಲಿ ಆಶ್ವಾಸನೆ ಕೊಟ್ಟಂಥಾದ್ದು ಏನೆಂದರೆ ರೈತರ ಸಾಲ ಮನ್ನಾ ಮಾಡುವ ಬಗ್ಗೆ. ಆ ಬಗ್ಗೆ ಬಹುತೇಕವಾಗಿ ನಾಳೆ ಚರ್ಚೆ ನಡೆಯುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸಪರೇಟ್ ಆಗಿ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಅದರ ಜೊತೆಗೆ ಬೀಜ ಗೊಬ್ಬರ ಇತ್ಯಾದಿಗಳನ್ನು ಸರ್ಕಾರದವರು ಸಕಾಲದಲ್ಲಿ ಒದಗಿಸತಕ್ಕಂಥ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇನ್ನು ಬೆಲೆಯಲ್ಲಿ ಮೋಸ ಬಹಳ ನಡೆಯುತ್ತದೆ. ಮೋಸ ಆಗಬಾರದು. ಇದಕ್ಕೆ ಸಾಮಾನ್ಯವಾಗಿ ಕಾನೂನನ್ನು ತಿದ್ದುಪಡಿ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡುವಂಥಾದ್ದು ಇದೆ. ಇದಕ್ಕೆ ಕೋಟ್ಯಾಂತರ ರೂಪಾಯಿಗಳ ಹಣ ಏನೂ ಖರ್ಚಾಗುವುದಿಲ್ಲ. ಅದು ಸಾಗಾಣಿಕೆ ಆಗಿರಬಹುದು, ಅಥವಾ ಬೇರೆ ಯಾವುದೇ ಆಗಿರಬಹುದು. ಈಗ ನಿಯಮ ೩೦/ರ ಪ್ರಕಾರ ರಾಜ್ಯಾಂಗದಲ್ಲಿ ವಾಣಿಜ್ಯ ಸಾಗಾಣಿಕೆಗೆ ಅವಕಾಶ ಇದೆ. ಅದೇ ಅವಕಾಶ ಎಲ್ಲರಿಗೂ ಇರಬೇಕು. ರೈತರಿಗೆ ಮಾತ್ರ ಆ ಸ್ವಾತಂತ್ರ್ಯ ಇಲ್ಲ. ಆ ಸ್ವಾತಂತ್ರ್ಯವನ್ನು ಕೊಟ್ಟರೆ ಬಹುತೇಕವಾಗಿ ರೈತರಿಗೆ ನಷ್ಟ ಆಗುವುದಿಲ್ಲವೆಂದು ನಾನು ಆಸೆ ಮಾಡುತ್ತೇನೆ. ಆಗ ರೈತರು ಬೆಳೆದ ಕಬ್ಬು ಇತ್ಯಾದಿ ಸರಕುಗಳನ್ನು ಸಾಗಾಣಿಕೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ರೈತರಿಗೆ ಆಗ ಯಾರೂ ಮೋಸ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ಕಾನೂನಿನ ಸಡಿಲಿಕೆ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ. ರೈತರು ಬೆಳೆದಂತಹ ಕಬ್ಬನ್ನು ಬೆಳಗಾಂ ಅಥವಾ ಮಂಡ್ಯ ಇಂತಹ ಕಡೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ಕಾನೂನಿನ ತೊಂದರೆ ಇದೆ. ಒಂದು ವೇಳೆ ತೆಗೆದುಕೊಂಡು ಹೋದರೆ ಒಂದು ಟನ್‌ಗೆ ಇಷ್ಟು ಟ್ಯಾಕ್ಸ್ ಕೊಡಬೇಕೆಂದು ಇರುತ್ತದೆ. ಅದು ಆಗಲೇ ಬಾರದು. ಇದನ್ನು ಸಡಿಲ ಮಾಡದಿದ್ದರೆ ರೈತರಿಗೆ ಒಂದು ಟನ್ ಕಬ್ಬಿಗೆ ೨೦೦ ರೂಪಾಯಿ ಸಹ ಸಿಗುವುದಿಲ್ಲ. ಇದನ್ನು ಒಂದು ವೈಜ್ಞಾನಿಕ ದೃಷ್ಟಿಯಿಂದ ನೋಡಿ ಸಡಿಲ ಮಾಡಿ ಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ. ಅಲ್ಲದೇ ಬೇರೆ ಬೇರೆ ವರ್ಗದವರಿಗೂ ಅನುಕೂಲವಾಗುತ್ತದೆ ಈ ಬಗ್ಗೆ ಸಾಕಷ್ಟು ಚಳುವಳಿಗಳು ನಡೆದರೂ ಸರ್ಕಾರ ಚಳುವಳಿಗಾರರನ್ನು ಕರೆದು ಮುಕ್ತ ಮನಸ್ಸಿನಿಂದ ಅವರಿಗೆ ಕಾನೂನಿನ ಸಡಿಲ ಮಾಡಿ ಅನುಕೂಲ ಮಾಡಿ ಕೊಟ್ಟಿಲ್ಲ. ಈಗ ಬಹುಮತ ಪಡೆದಂತಹ ಕಾಂಗ್ರೆಸ್ ಪಕ್ಷದ ಸರ್ಕಾರ ಎಲ್ಲಾ ಚಳುವಳಿಗಾರರನ್ನು ಕರೆದು, ಅಂದರೆ ರೈತ ಚಳುವಳಿಗಾರರ ಅಥವಾ ಬೇರೆ ಬೇರೆ ಚಳುವಳಿಗಾರರನ್ನು ಕರೆದು ಮುಕ್ತ ಮನಸ್ಸಿನಿಂದ ಅವರ ಸಮಸ್ಯೆಗಳನ್ನು ಪರಿಹಾರ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಇನ್ನು ಕೂಲಿಕಾರರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಪ್ರಯತ್ನ ಮಾಡುತ್ತೇನೆ. ಅತಿಕ್ರಮಣ ಮಾಡಿದಂತಹ ಜಮೀನುಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಪ್ರಸ್ತಾಪ ಮಾಡಿಲ್ಲ. ಅತಿಕ್ರಮಣ ಮಾಡಿದಂತಹವರಿಗೆ ಪುಕ್ಕಟೆ ಪಟ್ಟಾ ಕೊಡುತ್ತೇವೆಂದು ಹೇಳಿದ್ದರು...

ಶ್ರೀ ಬಿ. ಬಸವಲಿಂಗಪ್ಪ.—ಕೂಲಿ ಕಾರ್ಮಿಕರೋ ಅಥವಾ ರೈತರೋ ಹಿಂದುಳಿದ ವರ್ಗದವರೋ ಮುಂದುವರೆದವರೋ ಯಾರು ಎನ್ನುವುದನ್ನು ಹೇಳಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಸಾವಿರಾರು ವರ್ಷಗಳಿಂದ ಯಾರು ಕೂಲಿಕಾರ್ಮಿಕರು ಎರಡು ಮೂರು ಎಕರೆ ಜಮೀನನ್ನು ಅತಿಕ್ರಮಣ ಮಾಡಿಕೊಂಡಿರುತ್ತಾರೋ ಅವರನ್ನು ಮತ್ತು ಸಣ್ಣ ರೈತರನ್ನು ಗುಳೆ ಎಬ್ಬಿಸತಕ್ಕಂಥಾದ್ದು ಅಥವಾ ಆ ಜಾಗದಲ್ಲಿ ನೀಲಿಗಿರಿ ಮರ ಹಚ್ಚತಕ್ಕಂಥಾದ್ದು ನಡೆಯಬಾರದು. ರಾಜ್ಯಾಂಗದ ಪ್ರಕಾರ ಎಲ್ಲರೂ ಬದುಕುವುದಕ್ಕೆ ಹಕ್ಕು ಇದೆ. ಅದನ್ನು ನಾನು ನೆನಪು ಮಾಡಿ ಎಲ್ಲರೂ ತಮ್ಮ ಬದುಕನ್ನು ಕಂಡುಕೊಳ್ಳುವುದಕ್ಕೆ ಅನುಕೂಲ ಮಾಡಿ, ಕೊಡಿ ತಾವು ಏನಾದರೂ ಒಂದು ಸೀಲಿಂಗ್ ಬೇಕಾದರೆ ಹಾಕಬಹುದು. ಅದರ ಬದಲು ಆ ಜಮೀನನ್ನು ಸರ್ಕಾರವೇ ತೆಗೆದುಕೊಳ್ಳುತ್ತದೆ ಎನ್ನುವುದು ಆಗಬಾರದು. ರೈತರನ್ನು ಕೂಲಿಕಾರ್ಮಿಕರನ್ನು ಗುಳೆ ಎಬ್ಬಿಸತಕ್ಕಂಥಾದ್ದು ಸರ್ಕಾರದ ನೀತಿ ಆಗಬಾರದು. ಕಡು ಬಡವರ ಬಗ್ಗೆ ಕೂಲಿ ಕಾರ್ಮಿಕರ ಬಗ್ಗೆ ಲಕ್ಷ್ಯ ಕೊಟ್ಟು ಕೆಲಸ ಮಾಡಬೇಕೆಂದು ನನ್ನ ಅಪೇಕ್ಷೆ. ಇನ್ನು ಒಣ ಭೂಮಿ ಅಭಿವೃದ್ಧಿ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಬಹುಶಃ ವೈಜ್ಞಾನಿಕವಾದ ಶಾಶ್ವತವಾದ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು.

ಇದೊಂದು ವೈಜ್ಞಾನಿಕ ರೂಪದಲ್ಲಿರಬೇಕು. ಅವು ರೋಡಿಗೆ ಮಣ್ಣು ಹಾಕುವಂತಹ ಕೆಲಸಗಳು ಹೂಳು ತೆಗೆಯುವಂತಹ ಕೆಲಸಗಳು ಈ ಕಾರ್ಯಕ್ರಮದ ಅಡಿಯಲ್ಲಿ ನಡೆಸಿದರು ನಮ್ಮಲ್ಲಿ ಮಳೆ ಬರುವುದಿಲ್ಲ ಹೂಳು ತೆಗೆಯುವ ಕಾರ್ಯಕ್ರಮ ಹಾಕಿಕೊಂಡು ಕೋಟ್ಯಂತರ ರೂಪಾಯಿಗಳ ಹಣ ಖರ್ಚು ಮಾಡುತ್ತಿದ್ದಾರೆಂದು ನೋಡಿ ರಾಮದುರ್ಗ ಮತ್ತು ಅಥಣಿ ತಾಲ್ಲೂಕಿನ ಜನ ನಗೌಡಿದರು ಮಳೆ ಬರದ ಕಡೆ ಈ ಕೆಲಸಕಾರ್ಯಗಳನ್ನು ಮಾಡಿ ಯಾರೋ ಲಾಭ ಮಾಡಿಕೊಂಡರು. ಇದಕ್ಕೆ ನಾನು ಹೇಳಿದ್ದು ಒಂದು ವೈಜ್ಞಾನಿಕವಾದ ಕಾರ್ಯಕ್ರಮ ಇರಬೇಕೆಂದು. ಇನ್ನು ತೆರಿಗೆಗಳ ಬಗ್ಗೆ ಮಾತನಾಡುತ್ತಾ ನೀರಾವರಿ ತೆರಿಗೆ ಬಗ್ಗೆ ಹೇಳುವುದಾದರೆ ಇದರಿಂದ ಅಭಿವೃದ್ಧಿ ಕೆಲಸಕಾರ್ಯಗಳು ನಡೆಯಬಹುದು. ಒಂದು ಎಕರೆ ಕಬ್ಬು ಬೆಳೆ ಬೆಳೆಯುವ ಜಮೀನಿಗೆ ನಾಲ್ಕು ಸಾವಿರ ರೂಪಾಯಿ ಟ್ಯಾಕ್ಸ್ ಬರುತ್ತದೆ.

ಕೇಂದ್ರ ಸರ್ಕಾರಕ್ಕೆ ೧೭೦೦ರೂ. ಟ್ಯಾಕ್ಸ್ ಕೊಟ್ಟು ರೈತನಿಗೆ ಉಳಿಯುವುದು ಕೇವಲ ೧೮೦೦ ರೂ. ಮಾತ್ರ. ಆ ಮೇಲೆ ಒಂದು ಎಕರೆ ಕಬ್ಬು ಬೆಳೆದರೆ ೧೫೦೦ ರೂ. ದಂಡ ಕೊಡಬೇಕೆನ್ನುವ ಒಂದು ತಪ್ಪು ನೀತಿಯನ್ನು ಮಾಡಲಾಗಿದೆ. ಯಾವುದೇ ಪಕ್ಷ ಇರಲಿ. ಒಂದು ಎಕರೆ ಕಬ್ಬು ಬೆಳೆದ ತಪ್ಪಿಗೆ ೧೫೦೦ ರೂ. ದಂಡ ಕೊಡಬೇಕು ಎನ್ನುವ ನೀತಿಯನ್ನು ಸರ್ಕಾರ ಕೈಬಿಡಬೇಕು. ನೀರಾವರಿ ದಂಡ ಹಾಕುವುದನ್ನು ಕೈಬಿಟ್ಟು ಹೆಚ್ಚು ನೀರಿನ ಬಳಕೆ ಮಾಡಿದರೆ ಹೆಚ್ಚು ತೆರಿಗೆಯನ್ನು ಕೊಡಬೇಕೆನ್ನುವ ನೀತಿಯನ್ನು ಮಾಡಿದರೆ ನಾವು ಒಪ್ಪುತ್ತೇವೆ. ಆದರೆ, ಒಂದು ಎಕರೆ ಕಬ್ಬು ಬೆಳೆದರೆ ೧೫೦೦ರೂ. ದಂಡ ಹಾಕುತ್ತೇವೆ ಎನ್ನುವ ನೀತಿಯನ್ನು ಕೈ ಬಿಡಬೇಕು. ಈ ರೀತಿ ಮಾಡಿದರೆ ಬಹು ಸಂಖ್ಯಾತರು ಕಬ್ಬು ಬೆಳೆಯುವುದೇ ಇಲ್ಲ. ಇದರಿಂದ ಈಗಿರುವ ಸಕ್ಕರೆ ಕೊರತೆ ಇನ್ನೂ ಹೆಚ್ಚಾಗಬಹುದು. ಇದರ ಬಗ್ಗೆ ಒಂದು ನೀತಿಯನ್ನು ತಾವು ರೂಪಿಸಿಕೊಳ್ಳಬೇಕು.

ಇನ್ನು ವಿದ್ಯುಚ್ಛಕ್ತಿ ಕರದ ಬಗ್ಗೆ ಹೇಳುವುದಾದರೆ, ಏನೋ ಸ್ವಲ್ಪ ರೈತರು ವಿದ್ಯುಚ್ಛಕ್ತಿ ಬಾಕಿಯನ್ನು ಉಳಿಸಿಕೊಂಡಿರಬಹುದು ೨೦೦ ರೂ. ೩೦೦ ರೂ. ಬಾಕಿ ಇರಬಹುದು. ರೈತರ ವಿದ್ಯುಚ್ಛಕ್ತಿ ಬಾಕಿಗೆ ಡಿಸ್‌ಕನಕ್ಷನ್ ಮಾಡಬಾರದು. ಬೆಳಗಾಂ ಅಲ್ಯುಮಿನಿಯಂ ಫ್ಯಾಕ್ಟರಿಯವರು ವಿದ್ಯುಚ್ಛಕ್ತಿ ೧೦ ಕೋಟಿ ರೂಪಾಯಿಗಳ ಬಾಕಿ ಇಟ್ಟುಕೊಂಡಿದ್ದಾರೆ. ಇಲ್ಲೇ ಸನ್ಮಾನ್ಯ ಶ್ರೀ ಎಂ. ವೈ. ಘೋರ್ಪಡೆಯವರು ೬ ಕೋಟಿ ರೂಪಾಯಿ ಬಾಕಿ ಇಟ್ಟುಕೊಂಡಿದ್ದಾರೆ. ಬಡ ರೈತರು ಕೇವಲ ೩೦ ರೂಪಾಯಿ ೧೦೦ ರೂಪಾಯಿ ೩೦೦ ರೂಪಾಯಿ ಬಾಕಿ ಇಟ್ಟುಕೊಂಡಿದ್ದರೆ ಅವರುಗಳ ವಿದ್ಯುಚ್ಛಕ್ತಿಯನ್ನು ಡಿಸ್‌ಕನಕ್ಷನ್ ಮಾಡುತ್ತೀರಿ. ನಮ್ಮ ಸರ್ಕಾರದವರು ಇತ್ತ ಕಡೆ ಗಮನ ಹರಿಸಿ ಚಿಲ್ಲರೆ, ಪುಟ್ಟ ರೈತರ ಬಾಕಿಗೆ ಫ್ಯೂಸ್ ಕೀಳುವ ಕೆಲಸ ನಡೆಸಬಾರದು. ರೈತರುಗಳು ಬಾಕಿಯನ್ನು ಕೊಡುತ್ತಾರೆ. ಬರಗಾಲ ಬಂದಿರುವುದರಿಂದ ಹಣವನ್ನು ಕಟ್ಟುವುದಕ್ಕಾಗಿಲ್ಲ. ವಿದ್ಯುಚ್ಛಕ್ತಿ ಬಾಕಿ ಗೋಸ್ಕರ ಫ್ಯೂಸ್ ಕೀಳುವ ಕೆಲಸ ನಡೆಯ ಬಾರದು. ಆ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಆಗಿಲ್ಲ. ಅದರ ಜೊತೆಗೆ ಕೈಗಾರಿಕಾ ನೀತಿಯ ಬಗ್ಗೆ ಹೇಳುತ್ತಾ ಬೃಹತ್ ಶಕ್ತಿ ಉತ್ಪನ್ನಗಳ ಬಗ್ಗೆ ಮಾತನಾಡಿದ್ದಾರೆ. ಈ ದೇಶದೊಳಗೆ ಬಹಳ ಜನ ನಿರುದ್ಯೋಗಿಗಳು ಬದುಕಿದ್ದಾರೆ. ನಾವು ರೈತರ ಮಕ್ಕಳು ಆಗಿದ್ದೇವೆಂದು ಒಕ್ಕಲುತನ ಮಾಡಿಕೊಂಡು ಬದುಕಲು ಸಾಧ್ಯವಿಲ್ಲ. ಒಂದು ಗುಂಟೆ ಎರಡು ಗುಂಟೆ ಜಮೀನು ಇಟ್ಟುಕೊಂಡು ವ್ಯವಸಾಯ ಮಾಡುವುದಕ್ಕಾಗುವುದಿಲ್ಲ, ಬೇರೆ ಬೇರೆ ದೇಶಗಳಲ್ಲಿ ನೂರಕ್ಕೆ ೮೦ರಷ್ಟು ಜನರು ಸಣ್ಣ ಸಣ್ಣ ದಂದೆ ಮತ್ತು ವ್ಯಾಪಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೀವನ ಮಾಡುತ್ತಿದ್ದಾರೆ. ಟೆಕ್ನಾಲಜಿ ಡೀಸೆಂಟ್ರಲೈಸೇಷನ್ ಮಾಡುವ ಮೂಲಕ ವಿಕೇಂದ್ರಿಕರಣ ಮಾಡಿ ಎಲ್ಲಾ ಜನರುಗಳಿಗೆ ಉದ್ಯೋಗಗಳನ್ನು ಕೊಟ್ಟಿದ್ದಾರೆ. ಕೋರಿಯಾ ದೇಶದಲ್ಲಿ ಇದೇ ರೀತಿ ಮಾಡಿದ್ದಾರೆ. ಈ ರೀತಿ ಟೆಕ್ನಾಲಜಿ ಡೀಸೆಂಟ್ರಲೈಸೇಷನ್ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು, ಅದು ಬಿಟ್ಟು ಎಲೆಕ್ಟ್ರಾನಿಕ್, ಪೆಟ್ರೋ ಕೆಮಿಕಲ್ಸ್ ಮುಂತಾದ ಬೃಹತ್ ಶಕ್ತಿ ಉತ್ಪಾದನೆ ಮಾಡುತ್ತೇವೆಂದು ಪ್ರಸ್ತಾಪಿಸಿರುವುದು ಇದು ಜನಪರ ಕಾರ್ಯಕ್ರಮವಾಗಲಿಕ್ಕಿಲ್ಲ ವೆಂದು ಹೇಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ರೈತರುಗಳ ಪ್ರತಿನಿಧಿಯಾಗಿದ್ದಾರೆ. ಇವರು ಎರಡು ಕ್ಷೇತ್ರಗಳಿಂದ ಆಯ್ಕೆಯಾಗಿ ಬಂದಿರುವುದರಿಂದ ಇವರು ವಿಚಾರವಂತರೇ ಆಗಿರುತ್ತಾರೆ. ಇವರು ಸಣ್ಣ ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳಿದ್ದಾರೆ, ಹಾಗೂ ಹೆಚ್ಚುವರಿ ಆದಾಯವನ್ನು ರೈತರುಗಳಿಗೆ ದೊರಕಿಸಿಕೊಡುವ ಬಗ್ಗೆ ಹೇಳಿದ್ದಾರೆ. ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ಯಾವ ಯಾವ ಕೆಲಸಗಳು ಆಗಬೇಕೆಂದು ಸಲಹೆ ಮಾಡುತ್ತಾರೋ ಮಾಡಲಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಕೋರಿಯಾ ದೇಶದೊಳಗೆ ಯಾವ ರೀತಿ ಉತ್ಪನ್ನ ವಿಕೇಂದ್ರಿಕರಣ ಮಾಡಿದ್ದಾರೆ ಎನ್ನುವುದನ್ನು ಅಂಕಿ ಸಂಖ್ಯೆಗಳ ಆಧಾರದ ಮೇಲೆ ತಾವು ಅಧ್ಯಯನ

ಮಾಡಿ, ಈ ದೇಶದಲ್ಲೂ ಅದೇ ರೀತಿ ಮಾಡಬೇಕೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಸಿಕ್ಕುವ ಸಂಪನ್ಮೂಲಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಮಾಡಬೇಕು. ದುಡ್ಡು ಇದ್ದರೆ ಆಗುವುದಿಲ್ಲ. ಸಂಪನ್ಮೂಲಗಳ ಕ್ರೋಢೀಕರಣವಾಗಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ತಾಲ್ಲೂಕಿನಲ್ಲಿ ಏನೇನು ಕೆಲಗಳು ಆಗಬೇಕು ?

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್.—ನಮ್ಮ ತಾಲ್ಲೂಕಿನಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಆಗಬೇಕು. ಯಾವ ಕೈಗಾರಿಕೆಗಳು ಅಂದರೆ, ನಮ್ಮ ತಾಲ್ಲೂಕಿನಲ್ಲಿ ಹತ್ತಿ ಬೆಳೆಯುತ್ತೇವೆ. ಅದಕ್ಕೆ ಸಂಬಂಧ ಪಟ್ಟಂತೆ ನೂಲು ಸುತ್ತುವುದುಬಣ್ಣ ಹಾಕುವುದು ಮುಂತಾದ ಕೈಗಾರಿಕೆಗಳನ್ನು ಪ್ರಾರಂಭಿಸಬೇಕು. ತಮಿಳುನಾಡಿನಲ್ಲಿ ಹ್ಯಾಂಡ್‌ಲೂಮ್ಸ್ ಕೆಲಸಗಳಿಗೆ ಬಹಳ ಮಹತ್ವ ಕೊಟ್ಟಿದ್ದಾರೆ. ಅದರಂತೆ ನಮ್ಮ ರಾಜ್ಯದಲ್ಲೂ ಪ್ರೋತ್ಸಾಹ ಕೊಡಬೇಕು. ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವಂಥ ಸಂದರ್ಭದಲ್ಲಿ ಚಳುವಳಿ ಮಾಡುವಂಥ ರೈತರುಗಳನ್ನು ಕರೆದುಕೊಂಡು ಚರ್ಚಿಸಿ, ಅವರ ಸಮಸ್ಯೆಗಳನ್ನು ಬಗೆಹರಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮೂಲಕ ಸರಕಾರದವರನ್ನು ಕೇಳಿಕೊಂಡು, ಈ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುವ ನಿರ್ಣಯಕ್ಕೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ನನ್ನ ಅನಿಸಿಕೆಗಳನ್ನು ಈ ಸದನದ ಮುಂದಿಡಲು ಬಯಸುತ್ತೇನೆ. ಕಳೆದ ಎರಡು ದಿನಗಳಿಂದ ಈ ಸದನದಲ್ಲಿ ನಡೆದಂಥ ಕಾರ್ಯಕಲಾಪಗಳನ್ನು ನೋಡಿದಾಗ ಹಿಂದೆ ೩ ವರ್ಷಗಳ ಕಾಲದಿಂದ ಏನು ಸರ್ಕಾರವನ್ನು ನಡೆಸಿದರು ಆ ಆಡಳಿತದ ಪರಿಣಾಮವಾಗಿ ಏನು ಆಗುಹೋಗುಗಳು ನಡೆದವು ಎಂಬುದನ್ನು ಈಗಿನ ಸರ್ಕಾರದವರು ಗಮನಿಸದಿದ್ದರೆ ಹಿಂದಿನ ಸರ್ಕಾರದವರು ತುಳಿದ ಹಾದಿಯನ್ನು ಈ ಸರ್ಕಾರವು ಕೂಡ ತುಳಿಯುತ್ತಿದೆ ಎಂದು ಭಾವಿಸಬೇಕಾಗುತ್ತದೆ. ಆ ವಿಚಾರದಲ್ಲಿ ನಾನು ಕೆಲವು ವಿಚಾರಗಳನ್ನು ಸದನದ ಮುಂದಿಡ ಬಯಸುತ್ತೇನೆ,

ಕಳೆದ ಮೂರು ನಾಲ್ಕು ವರ್ಷಗಳಿಂದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳನ್ನು ಮಾಡಬೇಕು, ಜನಗಳ ಕೈಗೆ ಅಧಿಕಾರವನ್ನು ಕೊಡಬೇಕು, ಅಧಿಕಾರ ವಿಕೇಂದ್ರಿಕರಣ ಮಾಡಬೇಕೆಂದು ಹೇಳಿಕೊಂಡು ಆ ಒಂದು ವ್ಯವಸ್ಥೆಯನ್ನು ತಂದರು. ಅದರ ಹಿಂದೆ ಯಾವ ರಾಜಕೀಯ ದುರುದ್ದೇಶ ಇತ್ತು ಎಂದು ನನಗೆ ಹಳ್ಳಿಗಳ ಜನರಿಗೆ ತಿಳಿದಿಲ್ಲ, ಆದರೆ ನಾವುಗಳು ಹಳ್ಳಿಗಳ ಜನರು ಈ ಒಂದು ವ್ಯವಸ್ಥೆಯ ಬಗ್ಗೆ ಏನು ಯೋಚನೆ ಮಾಡಿದ್ದೇವೆ ಅಂದರೆ, ನಮಗೆ ಜಿಲ್ಲಾಪರಿಷತ್ತು ಬಂತು, ಮಂಡಲ ಪಂಚಾಯತ್ ಬಂತು, ನಮಗೆ ಬೇಕಾದ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳಬಹುದು ಎಂದು. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ವ್ಯವಸ್ಥೆಯೇನೋ ಬಂತು, ಅದರ ಅನುಭವವೂ ನಮಗೆ ಆಯಿತು. ನಾನು ಕೂಡ ಜಿಲ್ಲಾಪರಿಷತ್ ಸದಸ್ಯನಾಗಿ ಕೆಲಸ ಮಾಡಿ ಅದರ ಅನುಭವವನ್ನು ಪಡೆದುಕೊಳ್ಳುವಂತಾಯಿತು. ಹಿಂದೆ ನಮ್ಮ ದೇಶದಲ್ಲಿದ್ದಂಥ ಗ್ರಾಮಪಂಚಾಯತ್‌ಗಳ ಕಾರ್ಯವೈಖರಿಯನ್ನು ನೋಡಿದಾಗ ಈಗಿನ ಪಂಚಾಯತ್ ವ್ಯವಸ್ಥೆಯ ಹಿಂದಿರುವ ರಾಜಕೀಯ ದುರುದ್ದೇಶದ ಅರ್ಥವಾಗುತ್ತದೆ. ಹಿಂದಿನ ಗ್ರಾಮ ಪಂಚಾಯತ್ ವ್ಯವಸ್ಥೆಯು ಬಹಳಷ್ಟು ಒಳ್ಳೆಯ ರೀತಿಯಲ್ಲಿತ್ತು. ಆದರೆ ಇವೊತ್ತು ನಾವು ತಂದಂಥ ವ್ಯವಸ್ಥೆಯು ಅಸಮರ್ಪಕವಾಗಿದೆ ಎಂದು ನನಗನ್ನಿಸುತ್ತದೆ. ಏಕೆಂದರೆ, ಇವೊತ್ತು ನಾವು ಯಾವ ಹಳ್ಳಿಗಳಿಗೆ ಹೋದರೂ ಸಹ ಒಂದೂ ಹಳ್ಳಿಯಲ್ಲಿಯೂ ಸಹ ಸಮರ್ಪಕವಾದ ಬೀದಿ ದೀಪಗಳ ವ್ಯವಸ್ಥೆ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆಯು ಇಲ್ಲ. ಹಿಂದಿನ ಸರಕಾರದವರು ಒಂದೊಂದು ತಾಲ್ಲೂಕಿನಲ್ಲಿ ೧೦೦ಕ್ಕೂ ಹೆಚ್ಚು ಕಡಿಮೆ ಬೋರ್‌ವೆಲ್‌ಗಳನ್ನು ಹಾಕಿದ್ದರೂ ಸಹ ಅಲ್ಲಿ ಕುಡಿಯುವ ನೀರು ದೊರಕದೇ ಜನರು ಕಂಗಾಲಾಗಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಬಹುಶಃ ನಾವು ಪ್ರಮುಖವಾಗಿ ಆದ್ಯತೆಯನ್ನು ಕೊಡತಕ್ಕಂಥಾದ್ದು ಶಿಕ್ಷಣಕ್ಕೆ ಆದರೆ ಇವೊತ್ತಿನ ದಿವಸ ನಡೆದ ವಿದ್ಯಾಮಾನಗಳನ್ನು ನೋಡಿದರೆ ಈ ಸರಕಾರದವರು, ಜಿಲ್ಲಾಪರಿಷತ್‌ನವರು ನೇಮಕ ಮಾಡಿದಂಥ ಸುಮಾರು ೩ ಸಾವಿರ ಜನ ಶಿಕ್ಷಕರನ್ನು ತೆಗೆದುಹಾಕುವ ವಿಚಾರವನ್ನು ಮಾಡುತ್ತಿದ್ದಾರೆ. ಆ ವಿಚಾರದಲ್ಲಿ ಈಗಾಗಲೇ ಈ ಸದನದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಆ ಶಿಕ್ಷಕರನ್ನು ಸೇವೆಯಿಂದ ತೆಗೆಯಬಾರದು ಎಂದು ಆಗ್ರಹಪಡಿಸಿದರು. ಈ ವಿಚಾರದಲ್ಲಿ ಸರಕಾರ ನಡೆಸತಕ್ಕಂಥವರಿಗೆ ನಾನು ಹೇಳ ಬಯಸುವುದೇನೆಂದರೆ, ಆ ಮೂರು ಸಾವಿರ ಶಿಕ್ಷಕರನ್ನು ತೆಗೆಯತಕ್ಕಂಥ ವಿಚಾರ ಏನಿದೆ ಅದು ಕಾನೂನಿನ ಚೌಕಟ್ಟಿನಲ್ಲಿ ಸರಕಾರದವರಿಗೆ ಒಳಪಟ್ಟಿರತಕ್ಕಂಥ ವಿಚಾರ ಆದರೂ ಕೂಡ ಈ ಸಮಯದಲ್ಲಿ ಕ್ಷಿಪ್ರವಾಗಿ ಮುಂದೆ ಪರೀಕ್ಷೆಗಳು ಬರುವುದರಿಂದ ಅದರಿಂದ ಬರುವ ಸಮಸ್ಯೆಗಳನ್ನು, ಸಾಧಕಬಾಧಕಗಳನ್ನು ನೋಡಿಕೊಂಡು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯಾವುದೇ ಹಳ್ಳಿಗಳಿಗೂ ಸಮರ್ಪಕವಾದ ರಸ್ತೆಗಳು ಇಲ್ಲ, ಬಸ್ ಸೌಲಭ್ಯಗಳು ಇಲ್ಲ. ಇತರ ಅವಶ್ಯಕ ಸೌಲಭ್ಯಸವಲತ್ತುಗಳು ಇಲ್ಲ. ಇಂಥ ಒಂದು ವ್ಯವಸ್ಥೆಯಲ್ಲಿ ಜಿಲ್ಲಾಪರಿಷತ್ತು ಮಂಡಳ ಪಂಚಾಯಿತಿಗಳು ಹೇಗೆ ಕೆಲಸ ಮಾಡಲು ಸಾಧ್ಯ ಮತ್ತು ಏನು ಕೆಲಸ ಮಾಡಿವೆ ಎಂದು ನನಗೆ ಮೂರು ವರ್ಷಗಳ ಅನುಭವದಿಂದ ಊಹಿಸಿಕೊಳ್ಳಬಹುದಾಗಿದೆ. ಈ ಜಿಲ್ಲಾಪರಿಷತ್ತು ಮತ್ತು ಮಂಡಳ ಪಂಚಾಯತ್ ವ್ಯವಸ್ಥೆಗೆ ಕೇಂದ್ರ ಸರಕಾರದವರ ಹಣ ಬರತಕ್ಕಂಥಾದ್ದರ ಜೊತೆಗೆ ರಾಜ್ಯ ಸರಕಾರದವರೂ ಕೂಡ ತಮ್ಮ ಪಾಲನ್ನು ಕೊಟ್ಟಿದ್ದರೆ ಸ್ವಲ್ಪ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತಾ ಇತ್ತು. ಆರು ವರ್ಷಗಳಿಂದ ಕೊಡತಕ್ಕಂಥ ಮ್ಯಾಚಿಂಗ್ ಗ್ರ್ಯಾಂಟ್ ಕೂಡ ಕೊಡದೆ ಎಲ್ಲಾ ಕೆಲಸಗಳು ಸ್ಥಗಿತವಾಗುವ ಹಾಗೆ ಆಗಿದೆ. ಮಂಡ್ಯ ಜಿಲ್ಲಾ ಪರಿಷತ್ ಸಂಬಂಧಪಟ್ಟ ಹಾಗೆ ಸುಮಾರು ೬೭೧ ಚೆಕ್ ಗಳು ಹಣ ಪಾವತಿಯಾಗದೆ ಉಳಿದುಕೊಂಡಿವೆ. ಹೀಗಾಗಿ ಕೆಲಸ ಕಾರ್ಯಗಳನು ಕೈಗೊಳ್ಳುವುದಕ್ಕೆ ಪರಿಷತ್‌ಗಳಿಗೆ ಕಷ್ಟವಾಗುತ್ತಿದ್ದುದನ್ನು ನೋಡಿದ್ದೇವೆ. ಹೇಮಾವತಿ ನಾಲೆಯ ಕೆಲಸವೂ ಕೂಡ ಅರ್ಧಕ್ಕೆ ನಿಂತು ಹೋಯಿತು.

೩–೩೦ ಪಿ. ಎಂ.

೪೫,೦೦೦ ಹೆಕ್ಟೇರ್ ಭೂಮಿಗೆ ಹೇಮಾವತಿ ನಾಲೆಯಿಂದ ನೀರು ಸರಬರಾಜು ಮಾಡುತ್ತೇವೆಂದು ಹೇಳಿದ ಇವರು ೧೦,೦೦೦ ಹೆಕ್ಟೇರ್ ಭೂಮಿಗೆ ನೀರು ಕೊಟ್ಟರು, ನಾಲೆ ಕೆಲಸಗಳು ಅರ್ಧಕ್ಕೆ ನಿಂತಿವೆ ಇದನ್ನು ಮಾಡಿದರೆ ನಮಗೆ ಹೆಸರು ಬರುತ್ತದೆ ಇಲ್ಲವೇ ಮತ್ತೊಬ್ಬರಿಗೆ ಹೆಸರು ಬರುತ್ತದೆಂದು ಹೇಳುವುದು ಬೇಡ. ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ರೀತಿಯಾಗುವುದು ಬೇಡ, ಕೆಲಸವನ್ನು ಪೂರ್ತಿಗೊಳಿಸಿ. ಆರು ವರ್ಷದಿಂದ ಆಳಿದಂತಹ ಪ್ರಮುಖರ ಜಗಳದಿಂದಾಗಿ ಜನರಿಗೆ ಅನ್ಯಾಯವಾಗಿ ತೊಂದರೆಗೆ ಈಡಾಗತಕ್ಕಂತಹ ಪರಿಸ್ಥಿತಿಯುಂಟಾಗಿದೆ. ರೈತ ಕಾರ್ಮಿಕರು ಜನಸಾಮಾನ್ಯರು ಇದರಿಂದ ತೊಂದರೆಗೊಳಗಾಗಿದ್ದಾರೆ. ರೈತರ ಸಮಸ್ಯೆ ಬಗ್ಗೆ ಮಾನ್ಯ ಯಡಿಯೂರಪ್ಪನವರು ಬಹಳ ಚೆನ್ನಾಗಿ ಮಾತನಾಡಿದರು ಅದು ಬಹಳ ಗಂಭೀರವಾದಂತಹ ವಿಚಾರ. ಹತ್ತು ಸಾವಿರ ರೂಪಾಯಿಗೆ ಒಳಪಟ್ಟು ಇರತಕ್ಕಂತಹ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳುತ್ತಿರುವವರ ಕೂಗಿಗೆ ನಮ್ಮ ಕೂಗನ್ನು ಸೇರಿಸುತ್ತೇವೆ. ಕಳೆದ ಸರಕಾರದಂತೆ ಬರೀ ಭರವಸೆಗಳನ್ನು ಕೊಟ್ಟಂತೆ ವೀರೇಂದ್ರಪಾಟೀಲ್‌ರವರ ಸರಕಾರ ಕೊಡುವುದು ಬೇಡ, ಸಾಧಕ ಬಾಧಕಗಳನ್ನು ವಿಚಾರ ಮಾಡಿ ಕೆಲಸ ಮಾಡಬೇಕು ಎಂದು ನಾನು ಪ್ರಾರ್ಥಿಸುತ್ತೇನೆ. ರೈತರಿಗೆ ಸಹಾಯ ಆಗಬೇಕೆಂದು ಇಲ್ಲಿ ಕಂಳಿತುಕೊಂಡು ಹೇಳುತ್ತಾರೆ ಆದರೆ ಇವರದ್ದೇ ಆದ ಪಕ್ಷ ಅಧಿಕಾರಕ್ಕೆ ಬಂದಾಗ ಅದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಅಕ್ಕಿ, ಸಕ್ಕರೆ. ಗೋಧಿ ಬೆಲೆ ಜಾಸ್ತಿ ಮಾಡಿದಾಗ ಏಕೆ ಜಾಸ್ತಿ ಮಾಡಿದಿರಿ ಎಂದು ವಿರೋಧಪಕ್ಷದವರು ಸರಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ ಅವರೇ ಅಧಿಕಾರಕ್ಕೆ ಬಂದಾಗ ಜಾಸ್ತಿ ಮಾಡುತ್ತಾರೆ ಈ ರೀತಿಯ ಒಂದು ಧ್ವಂದ್ವ ನೀತಿಯನ್ನು ಅನುಸರಿಸಿ ಮೊಸಳೆ ಕಣ್ಣೀರು ಸುರಿಸಿದ ಹಾಗೆಸುರಿಸುತ್ತಾರೆ.ಅದನ್ನುಬಿಟ್ಟು ಜನ ಹಿತದ ಬಗ್ಗೆ ಯೋಚನೆ ಮಾಡಬೇಕು. ಮಧ್ಯಪ್ರದೇಶದಲ್ಲಿಶುಕ್ಲ ಅವರ ಸರಕಾರ ಹತ್ತು ಸಾವಿರ ರೂಪಾಯಿ ರೈತರ ಸಾಲವನ್ನು ವಜಾ ಮಾಡಿರತಕ್ಕಂಥಾದ್ದನ್ನುನೋಡಿದ್ದೇವೆ ಅದೇ ರೀತಿ ನಮ್ಮ ಮುಖ್ಯ ಮಂತ್ರಿಗಳು ಸಹ ಹತ್ತು ಸಾವಿರಕ್ಕಿಂತ ಕೆಳಗೆ ಇರತಕ್ಕಂತಹಸಾಲವನ್ನು ವಜಾ ಮಾಡಿ ಜನರಿಗೆ ಅನುಕೂಲವನ್ನು ಮಾಡಿಕೊಡಬೇಕು. ನನಗೆ ತಿಳಿದ ಮಟ್ಟಿಗೆ ರಾಜ್ಯದ ಎಲ್ಲಾ ಟ್ರೆಜರಿಗಳಿಗೂ ಯಾವುದೇ ಬಿಲ್ ಅನ್ನು ಪಾಸ್ ಮಾಡಬೇಡಿ ಎಂಬ ಆದೇಶ ಈಗಾಗಲೇ ಸರಕಾರದಿಂದ ಹೋಗಿದೆ. ಆ ವಿಚಾರ ನನಗೆ ಗೊತ್ತಾಗಿದೆ. ಕೆಲಸ ಮಾಡಿದಂತಹ ಅಧಿಕಾರಿಗಳಿಗೆ ಸಂಬಳ ಕೊಡಲಿಕ್ಕೆ ಸರಕಾರದಲ್ಲಿ ಹಣವಿಲ್ಲವೆಂದು ಎಲ್ಲರಿಗೂ ಗೊತ್ತಿದೆ ಆದರೆ ಏತಕ್ಕೆ ಹೀಗಾಯಿತು ಎಂಬುದನ್ನು ಯೋಚನೆ ಮಾಡಬೇಕು. ೬–೭ ವರ್ಷಗಳಿಂದ ಅಧಿಕಾರ ಮಾಡಿದಂತಹವರು ಹಣದ ಲೂಟಿ ಮಾಡಿ ಈ ರಾಜ್ಯದ ಬೊಕ್ಕಸವನ್ನು ಬರಿದು ಮಾಡಿ ಗುಡಿಸಿ ಗುಂಡಾಂತರ ಮಾಡಿ ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಹೋಗಿರುವಂಥಾದ್ದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. ಸರಕಾರಕ್ಕೆ ಯಾವ ಮೂಲದಿಂದ ಹಣ ಬರುತ್ತಿತ್ತು ಆ ಮೂಲದಿಂದ ನಿಮ್ಮ ಸರಕಾರಕ್ಕೂ ಕೂಡ ಬರುತ್ತದೆ. ಆದರೆ ಕಾರ್ಖಾನೆಗಳಲ್ಲಿನ ಮುಖ್ಯಸ್ಥರು ಅಧ್ಯಕ್ಷರುಗಳೆಲ್ಲಾ ಆ ಹಣವನ್ನು ತಿಂದು ಅದನ್ನು ಮುಳುಗಿಸಿ ಬಿಟ್ಟಿದ್ದಾರೆ. ಸರಕಾರದ ಸೋಪ್ ಫ್ಯಾಕ್ಟರಿ ಸರಕಾರದ ಹಿಡಿತದಲ್ಲಿ ಇದೆ ಅದು ೪೮ ಕೋಟಿ ರೂಪಾಯಿಗಳ ನಷ್ಟದಲ್ಲಿದೆ ಎನ್.ಜಿ.ಇ.ಎಫ್.ನ ಎಂದು ಎಲೆಕ್ಟ್ರಿಕಲ್ ಕಂಪನಿ ಏನು ಇದೆ ಅದು ಸುಪ್ರಸಿದ್ಧವಾದಂತಹ ಎಲೆಕ್ಟ್ರಿಕಲ್ ಮೋಟರ್ ಅನ್ನು ತಯಾರು ಮಾಡುತ್ತದೆ. ಅದು ಒಂದೂವರೆ ವರ್ಷದಿಂದ ೨೨ ಕೋಟಿ ರೂಪಾಯಿಗಳ ನಷ್ಟದಿಂದ ನರಳತಕ್ಕಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಸರಕಾರದ ವ್ಯಾಪ್ತಿಗೆ ಬರತಕ್ಕಂತಹ ವಿಕ್ರಾಂತ್ ಟೈರ್ಸ್ ಕಂಪನಿಯಲ್ಲಿ ೬೦ ಕೋಟಿ ರೂಪಾಯಿಗಳಷ್ಟು ಟೈರ್ಸ್‌ಗಳು ವ್ಯಾಪಾರವಾಗದೇ ಗೋಡೌನ್ಸ್‌ನಲ್ಲಿ ಇವೆ. ಟೈರ್ಸ್‌ಗಳಿಗೆ ಇವತ್ತು ಬೇಕಾದಷ್ಟು ಬೇಡಿಕೆ ಇದೆ ಆದರೂ ಈ ರೀತಿ ಸ್ಟಾಕ್ ಇದೆ ಎಂದು ಹೇಳುವುದಾದರೆ ಹೇಗೆ ?

ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ ಎಲ್ಲಾ ಸಕ್ಕರೆ ಕಂಪನಿಗಳು ಸುಮಾರು ೮೦ ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದೆ. ಸಿಲ್ಕ್ ಫ್ಯಾಕ್ಟರಿಗಳು, ನಮ್ಮ ರಾಜ್ಯ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವಂತವುಗಳು ಇವೊತ್ತಿನ ದಿವಸ ೧೭ ಕೋಟಿ ರೂಪಾಯಿಗಳ ನಷ್ಟದಲ್ಲಿವೆ. ಕೆ.ಇ.ಬಿ. ಬಗ್ಗೆ ಹೇಳುವುದಾದರೆ ಯಾವುದೇ ಹಳ್ಳಿಗೆ ಹೋದರೂ ಸಣ್ಣ ಕೈಗಾರಿಕೆಗಳೂ ಸೇರಿಕೊಂಡಂತೆ ಸುಮಾರು ೪೪ ಸಾವಿರ ಕೈಗಾರಿಕೆಗಳು ಕೆ.ಇ.ಬಿ. ಇಂದಾಗಿ ನಷ್ಟ ಅನುಭವಿಸುತ್ತಿವೆ ಬೆಂಗಳೂರಿನಲ್ಲಿ ಎಷ್ಟು ಕಾರ್ಖಾನೆಗಳು ನಷ್ಟದಲ್ಲಿವೆ ಗೊತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಗಳನ್ನು ನಡೆಸುತ್ತಿರುವವರು ಎಲ್ಲಾ ತರಹ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಬಡ ರೈತರು ವರ್ಷಕ್ಕೊಮ್ಮೆ ತನ್ನ ಮೋಟಾರನ್ನು ಸುಟ್ಟುಕೊಳ್ಳುತ್ತಾನೆ. ಇಂತಹ ಪರಿಸ್ಥಿತಿ ಇರುವಾಗ ಹೊರ ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವಂತಹ ಅಗತ್ಯ ಇರಲಿಲ್ಲ. ಇಂದು ಹೆಚ್ಚು ವಿದ್ಯುಚ್ಛಕ್ತಿಯನ್ನು ತಯಾರು ಮಾಡತಕ್ಕ ತೀವ್ರ ಅವಶ್ಯಕತೆ ಇದೆ. ವಿದ್ಯುಚ್ಛಕ್ತಿಗೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕು. ಇವೊತ್ತು ವಿದ್ಯುಚ್ಛಕ್ತಿಗೆ ಮಂಡಲಿಯು ೩೦೦ ಕೋಟಿ ರೂಪಾಯಿಗಳ ನಷ್ಟ ಅನುಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಯಾವುದೇ ಕೈಗಾರಿಕೆ ಮುಂದೆ ಬರಬೇಕಾದರೆ, ಕೈಗಾರಿಕೆಗಳ ಉತ್ಪಾದನೆ ಜಾಸ್ತಿ ಆಗಬೇಕಾದರೆ ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್ ಸ್ಪಾರ್ಶ ಸಬೇಕಾಗುತ್ತದೆ ಮುಂದೆ ಬರತಕ್ಕ ಸರ್ಕಾರಗಳು ವಿದ್ಯುತ್ ಅನ್ನು ಹೆಚ್ಚು ಉತ್ಪಾದಿಸುವತ್ತ ಆದ್ಯತೆ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇವೊತ್ತು ಯಾವ ಯಾವ ಮೂಲಗಳಿಂದ ಸರ್ಕಾರಕ್ಕೆ ಹಣ ಬರುತ್ತಿದೆ ? ಮಧ್ಯದಿಂದ ಬರತಕ್ಕ ಆದಾಯದಲ್ಲಿ ಸುಮಾರು ಒಂದು ಕೋಟಿಯಷ್ಟು ಸೋರಿ ಹೋಗುತ್ತಿದೆ ಎಂದು ಕೆಲವು ಜನತಾ ಸರ್ಕಾರದ ಶಾಸಕರು ಹೇಳಿದ್ದರು. ಅಬ್ಕಾರಿಯಿಂದ ಬರತಕ್ಕ ಆದಾಯವನ್ನು ಸರಿಯಾಗಿ ವಸೂಲು ಮಾಡಿ ರೈತರ ಲಾಭಕ್ಕೋಸ್ಕರ ಅದನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎಲ್ಲಾ ಮೂಲಗಳಿಂದ ಬರತಕ್ಕ ಆದಾಯವನ್ನು ಸರಿಯಾಗಿ ವಸೂಲು ಮಾಡಬೇಕು.

ಲೋಕಾಯುಕ್ತದ ಬಗ್ಗೆ ಹೇಳುವುದಾದರೆ ಮೂರು ವರ್ಷಗಳ ಹಿಂದೆ ಲೋಕಾಯುಕ್ತವನ್ನು ಪ್ರಾರಂಭ ಮಾಡಿದರು. ಎಷ್ಟು ಜನ ಅಧಿಕಾರಿಗಳನ್ನು ಲೋಕಾಯುಕ್ತದವರು ಮನೆಗೆ ಕಳಿಸಿದ್ದಾರೆ. ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ, ಅಥವಾ ಒಬ್ಬ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ ಲೋಕಾಯುಕ್ತದವರು ಹಿಡಿದು ಅವರು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಯೇ ? ಆದ್ದರಿಂದ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವೊತ್ತು ಒಂಭತ್ತನೆ ಶಾಸನ ಸಭೆ ಬಂದಿದೆ...

ಶ್ರೀ ಮಲ್ಲನಗೌಡ ಎಸ್. ಪಾಟೀಲ್.—ಯಾರ ಸರ್ಕಾರದ ಬಗ್ಗೆ ಹೇಳುತ್ತಿದ್ದೀರಿ.

ಶ್ರೀ ಪಿ. ಸಿ, ಸಿದ್ಧನಗೌಡರ —ನಡೆದಿರುವ ಕೃತ್ಯಗಳ ಬಗ್ಗೆ ಹೇಳುತ್ತಿದ್ದಾರೆ...

ಶ್ರೀ ಎಲ್. ಆರ್. ಶಿವರಾಮಗೌಡ.—ಇದುವರೆಗೆ ಹಿಂದಿನ ಸರ್ಕಾರದ ಬಗ್ಗೆ ಹೇಳುತ್ತಿದೆ. ಇನ್ನು ಮುಂದೆ ಹೊಸ ಸರ್ಕಾರದ ಬಗ್ಗೆ ಹೇಳಬೇಕಾಗಿದೆ. ಕೇಂದ್ರದಲ್ಲಿ ಕಳೆದ ಲೋಕಸಭೆಯಲ್ಲಿ ೪೦೦ ಹೆಚ್ಚು ಸೀಟುಗಳನ್ನು ಗಳಿಸಿ ಅಧಿಕಾರಕ್ಕೆ ಬಂದು ನಡೆಸಿರತಕ್ಕ ಸಂದರ್ಭದಲ್ಲಿ ಏನೇನು ಕೆಲಸ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದೀರಿ. ಈಗ ಕೇಂದ್ರದಲ್ಲಿ ೧೯೦ ಸೀಟುಗಳನ್ನು ನಿಮ್ಮ ಸರ್ಕಾರ ಪಡೆದುಕೊಂಡಿದೆ. ಎದುರುಗಡೆ ಪಕ್ಷದ ಸದಸ್ಯರು ಈಗ ನಮ್ಮ ರಾಜ್ಯದಲ್ಲಿ ೧೭೮ ಸೀಟುಗಳು ಬಂದಿದೆ ಎಂದು ಬೀಗುವುದರ ಬದಲು ಇವೊತ್ತು ಮಂತ್ರಿಮಂಡಲವನ್ನು ನೋಡಿದರೆ ಬಹಳ ನೋವು ಆಗುತ್ತದೆ. ಹದಿನೆಂಟು ವರ್ಷಕ್ಕೆ ಓಟು ನೀಡಬಹುದೆಂದು ಮಾಡಿದ ನೀವು ಮಂತ್ರಿಮಂಡಲದಲ್ಲಿ ಒಬ್ಬ ಯುವಕರನ್ನು ಬಿಟ್ಟರೆ ಬೇರೆ ಯಾರೂ ಯುವಕರಿಗೆ ಅಧಿಕಾರವನ್ನೇ ನೀಡಿಲ್ಲ. ಉಳಿದವರು ಎಲ್ಲಾ ಹಿರಿಯರು ಅವರುಗಳು ಚೆನ್ನಾಗಿ ಕೆಲಸ ಮಾಡುತ್ತಾರೆ, ಆದರೂ ಯುವಕರಿಗೆ ಸ್ವಲ್ಪ ಪ್ರಾತಿನಿಧ್ಯ ಕೊಡಬೇಕಾಗಿತ್ತು

ಈ ನಿಟ್ಟಿನಲ್ಲಿ ಸರ್ಕಾರದ ಸಭಾನಾಯಕರು ಯೋಚನೆ ಮಾಡಬೇಕು. ಮುಂದೆ ಬರುವಂಥ ಸಂದರ್ಭದಲ್ಲಿ ನಾವು ಸಹಿತ ಪಕ್ಷೇತರ ಸದಸ್ಯರುಗಳಾಗಿ ಜನಹಿತ ಕಾರ್ಯಕ್ರಮ ಮಾಡತಕ್ಕಂಥ ಸಂದರ್ಭದಲ್ಲಿ ಜನೋಪಯೋಗಿ ಕಾರ್ಯಕ್ರಮವನ್ನು ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಬೆಂಬಲ ಸಹಿತ ಹೊಸ ಸರ್ಕಾರಕ್ಕೆ ಇದೆ ಎಂದು ಅರ್ಥ ಮಾಡಿಕೊಂಡು ಜನಹಿತ ಕಾರ್ಯಕ್ರಮದ ಬಗ್ಗೆ ಈ ಹಿಂದೆ ನಡೆದಂಥ ಲೋಪದೋಷಗಳನ್ನು ತಿದ್ದಿಕೊಂಡು ಹೊಸ ಸರ್ಕಾರ ನಡೆಯಬೇಕು ಎಂದು ಆಶಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಜಿ.ಎಸ್. ಆಚಾರ್ (ಬೈಂದೂರು).— ಮಾನ್ಯ ಸಭಾಧ್ಯಕ್ಷಿಣಿಯವರೇ ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಂಡಿಸಿದ ವಂದನಾ ನಿರ್ಣಯವನ್ನು ಸಮರ್ಥಿಸಿ ಕೆಲವು ಮಾತನ್ನು ಆಡಲಿಕ್ಕೆ ಅಪೇಕ್ಷೆ ಪಡುತ್ತೇನೆ. ಎರಡು ದಿವಸದಿಂದ ನಮ್ಮ ಸರ್ಕಾರವನ್ನು ಕುರಿತು ಸರ್ಕಾರಕ್ಕೆ ಬಂದ ಪ್ರಚಂಡ ಬಹುಮತವನ್ನು ಕುರಿತು ಬಹಳಷ್ಟು ವ್ಯಾಖ್ಯಾನಗಳು ಬರುತ್ತಿವೆ. ಏತಕ್ಕೆ ಈ ಸರ್ಕಾರ ಬಂತು ಎನ್ನುವುದನ್ನು ಮೂಲಭೂತವಾಗಿ ಚಿಂತನೆಯನ್ನು ಮಾಡಬೇಕಾಗಿದೆ ಎಂದು ನನಗನ್ನಿಸುತ್ತದೆ. ಕಳೆದ ಆರು ವರ್ಷಗಳಲ್ಲಿ ಜನಸಾಮಾನ್ಯರಿಗೆ ಬೇಕಾದಂಥ ಅನೇಕ ಸವಲತ್ತುಗಳು ಇರಲಿಲ್ಲ. ಆಸ್ಪತ್ರೆಗಳಲ್ಲಿ ವೈದ್ಯರುಗಳೇ ಇರಲಿಲ್ಲ, ಶಾಲೆಗಳಲ್ಲಿ ಉಪಾಧ್ಯಾಯರುಗಳೇ ಇರಲಿಲ್ಲ. ಘೋಷಿತ ಬಡ್ಡಿ ರಿಯಾಯಿತಿ ಸಹಕಾರಿ ಸಂಘಗಳಿಗೆ ನೀಡಲಿಲ್ಲ, ಬೋರ್‌ವೆಲ್‌ಗಳು ರಚನೆ ಆದವು. ಅನೇಕ ಬೋರ್‌ವೆಲ್‌ಗಳಲ್ಲಿ ನೀರೇ ಇರಲಿಲ್ಲ. ಜಿಲ್ಲಾ ಪರಿಷತ್ತುಗಳು ರಚನೆಯಾದವು. ಅದಕ್ಕೆ ಬೇಕಾದಂಥ ಹಣವನ್ನು ನೀಡಲಿಲ್ಲ. ಅಧಿಕಾರವನ್ನು ಸಹ ಸಾಕಷ್ಟು ಕೊಡಲಿಲ್ಲ. ಹುಡ್ಕೋ ಮನೆ ಕೇಂದ್ರ ಸರ್ಕಾರದಿಂದ ಪ್ರಾರಂಭವಾಗಿ ಇಂದಿರಾಗಾಂಧಿಯವರ ಕಾಲದಲ್ಲಿಯೇ ಉನ್ನತ ಮಟ್ಟದ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಡವರಿಗೆ ಬೇಕಾದಂಥ ಮನೆಯನ್ನು ರೂಪಿಸುವ ಕಾರ್ಯಕ್ರಮ ಇದು ಕೂಡಾ ಆಗಲಿಲ್ಲ. ಸಿಬ್ಬಂದಿಗೆ ಸಂಬಳವನ್ನು ಸಹಾ ಕೊಟ್ಟಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಟು ರುಪಾಯಿ ಚೆಕ್ ಕೂಡಾ ಬೌನ್ಸ್ ಆಗಿರುವಂಥ ಸಂದರ್ಭ ಇತ್ತು. ಮಹಿಳೆಯರ ಮೇಲೆ ದೌರ್ಜನ್ಯ ಅಲ್ಪಸಂಖ್ಯಾತರಿಗೆ ರಕ್ಷಣೆ ಇಲ್ಲದ ಪರಿಸ್ಥಿತಿ, ದಲಿತರ ಮೇಲೆ ಹಲ್ಲೆ. ಅಧಿಕಾರದಲ್ಲಿ ಹಸ್ತಕ್ಷೇಪ ಬರೀ ವರ್ಗಾವಣೆ ರಾಜಕೀಯ ರಾಜಕೀಯದ ಒಳಜಗಳ. ಇದರ ಪರಿಣಾಮ ಈ ರೀತಿ ಆಯಿತು. ಹಳ್ಳಿಯಲ್ಲಿ ಹೆದ್ದಾರಿ ಕೂಡಾ ಬಂತು, ಇನ್ನು ಕೆಲಸವಾಗಿಲ್ಲ. ಸೇತು ಬಂಧನ ಎಂದು ಹಾಕಿದರು. ಸೇತುವೆ ರಚನೆಯಾಗಿಲ್ಲ. ಹಳ್ಳಕ್ಕೆ ಬಿದ್ದರು. ಇದಕ್ಕೆ ಯಾರು ಏನು ಹೇಳಿದರೂ ಏನು ಪ್ರಯೋಜನ? ಆತ್ಮ ಪರಿಶೀಲನೆ ಮಾಡಿ ನೋಡಬೇಕಾದಂಥ ಪರಿಸ್ಥಿತಿ ಅವರಿಗೆ ಬಂದಿದೆ. ನಮಗೆ ಇಷ್ಟು ಬಹುಮತ ಏತಕ್ಕೆ ಬಂತು ಎಂದು ಹೇಳಿದರೆ ವಿರೋಧ ಪಕ್ಷದಲ್ಲಿದ್ದಾಗ ಸಾಕಷ್ಟು ದಿಟ್ಟ ನಿಲುಮೆಯಿಂದ ಹೋರಾಡಿದ್ದೇವೆ, ಎಚ್ಚರಿಕೆಯಿಂದ ಕೆಲಸವನ್ನು ಮಾಡಿದ್ದೇವೆ. ಹೋರಾಟವನ್ನು ನಡೆಸಿದ್ದೇವೆ ಆ ನಿಲುಮೆಗಾಗಿ ಜನ ಬದಲಾವಣೆಯನ್ನು ಕೊಟ್ಟಿದ್ದಾರೆ. ಆರ್ಥಿಕವಾಗಿ ಸಾಕಷ್ಟು ಕೆಲಸ ಮಾಡಬೇಕಾದಂಥ ಪರಿಸ್ಥಿತಿ ನಮಗಿದ್ದಾಗಿದೆ. ನಮ್ಮ ಸರ್ಕಾರ ಜನತೆಯ ಬವಣೆಗಳಿಗೆ ಸ್ಪಂದಿಸುವ ಕೆಲಸವನ್ನು ಮಾಡಬೇಕು. ಇದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದರ ಅಗತ್ಯವೂ ಕೂಡಾ ಇದೆ. ಇದು ಮೂಲಭೂತವಾದ ಅಗತ್ಯದ ಕೆಲಸ ಕೂಡಾ ಹೌದು ಪ್ರಧಾನಮಂತ್ರಿಯವರು ಇಪ್ಪತ್ತು ಅಂಶಗಳ ಕಾರ್ಯಕ್ರಮ ಒಂದು ಕಾಲದಲ್ಲಿ ಸ್ಥಗಿತವಾಗಿತ್ತು. ಈ ಕಾರ್ಯಕ್ರಮ ಆಗಲೇಬೇಕಾಗಿದೆ. ಇದು ಬಡವರಿಗೆ ಆಗಬೇಕಾಗಿರತಕ್ಕಂಥ ಕಾರ್ಯಕ್ರಮವಾಗಿದೆ. ಬಡವರ ಹೆಸರಿನಲ್ಲಿ ಶ್ರೀಮಂತರ ಮಕ್ಕಳಿಗೆ ಪುಕ್ಕಟೆಯಾಗಿ ಪುಸ್ತಕ ಬಟ್ಟೆ ಬರೆ ಸಿಗುವಂಥ ಕಾರ್ಯಕ್ರಮವಾಗಬಾರದು. ಇದರ ಕುರಿತು ಒಂದು ಹೊಸ ಚಿಂತನೆಯನ್ನು ಮಾಡಬೇಕಾದಂಥ ಅಗತ್ಯ ಇದೆ. ಹಾಗೆಯೇ ಕೆಲವೊಂದು ವಿಚಾರಗಳನ್ನು ಹೇಳುವಾಗ ಹಣಕಾಸಿನ ಪರಿಸ್ಥಿತಿ ಕಷ್ಟದ ಅರಿವು ಇದೆ. ಹಾಗೆಯೇ ಬಾಕಿ ವಸೂಲಿಗಾಗಿ ಕಾರ್ಯಕ್ರಮ ಆಗಬೇಕು. ಎಕ್ಸೈಜ್‌ನಲ್ಲಿ ಬರಬೇಕಾದಂಥ ಬಾಕಿ ವಿದ್ಯುತ್ ಬಾಕಿ, ಮೋಟಾರ್ ವಾಹನದ ತೆರಿಗೆಯ ಬಾಕಿ, ಇದರಲ್ಲಿಯೇ ಬೇಕಾದಷ್ಟು ರಾಜ್ಯದ ಸಂಪನ್ಮೂಲಗಳನ್ನು ವೃದ್ಧಿಸಿಕೊಳ್ಳಬೇಕಾಗಿದೆ. ನಿರ್ದಾಕ್ಷಿಣ್ಯವಾಗಿ ಈ ಬಾಕಿ ವಸೂಲಿಯನ್ನು ಮಾಡಬೇಕಾದಂಥ ಅಗತ್ಯ ಇದೆ. ವ್ಯಾಪಕ ವರ್ಗಾವಣೆಯಿಂದ ಅನೇಕ ಕಡೆಗಳಲ್ಲಿ ಭ್ರಷ್ಟಾಚಾರದ ಪ್ರಕರಣಗಳು ನಡೆದಿರುವುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ಮೂಲಕ ಎಲ್ಲಾ ಮಂತ್ರಿವರ್ಗ್ಯರಿಗೂ ನನ್ನ ಅರಿಕೆ ಏನೆಂದರೆ ಈಗ ಹೊಸ ಚೈತನ್ಯವನ್ನು ತುಂಬುವಂಥ ಸರ್ಕಾರ ಬಂದಿದೆ ಎಂದು ನಾವು ಕಾಣಿಸಿಕೊಳ್ಳಬೇಕು. ಅದಕ್ಕಾಗಿ ಆಸ್ಪತ್ರೆಯಲ್ಲಿ ವೈದ್ಯರುಗಳನ್ನು ಕೆಲಮಟ್ಟಿಗಾದರು ನೇಮಕ ಮಾಡಬೇಕು, ಶಾಲಾ ಅಧ್ಯಾಪಕರನ್ನು ನೇಮಕ ಮಾಡಬೇಕು, ಜಿಲ್ಲಾ ಪರಿಷತ್ತಿನಲ್ಲಿ ನೇಮಕ ಆಗಬೇಕು. ಇದಕ್ಕೆ ಯಾವುದೇ ತಾಂತ್ರಿಕ ತೊಂದರೆಗಳಿದ್ದರೂ ಅದನ್ನು ನಿವಾರಣೆ ಮಾಡಿ ಮಾಡಬೇಕು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನಲ್ಲಿ ಖಾಲಿ ಹುದ್ದೆಗಳಿವೆ. ಕಾನೂನು ಬದ್ಧವಾಗಿ ನೇಮಕ ಮಾಡುವಂಥ ಕೆಲಸ ಆಗಬೇಕು. ಈಗ ಅನೇಕ ಕಡೆಗಳಲ್ಲಿ ಬೋರ್‌ವೆಲ್‌ಗಳು ವಿಫಲವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಂಥ ಪ್ರದೇಶಗಳಲ್ಲಿ ಬರಿ ಬೋರ್‌ವೆಲ್‌ಗಳನ್ನು ಮಾಡಲಿಕ್ಕೆ ಆಗುವುದಿಲ್ಲ. ಅಲ್ಲಿ ಓಪನ್ ವೆಲ್ ಮಾಡಬೇಕಾದ್ದು ಅಗತ್ಯವಿದೆ. ಅದನ್ನು ಮಾಡಬೇಕು ಎಂದು ಕಳೆದ ವರ್ಷ ನಾನು ಅರಿಕೆ ಮಾಡಿಕೊಂಡಾಗ ಆಗಿನ ಸರ್ಕಾರ ಒಪ್ಪಲಿಲ್ಲ. ಇದರ ಕುರಿತು ಮರುಚಿಂತನೆ ಆಗಬೇಕಾದ್ದು ಅಗತ್ಯವಿದೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮೊದಲನೆಯದಾಗಿ ನಾನು ಸರ್ಕಾರದ ಹತ್ತಿರ ಮನವಿಮಾಡಿಕೊಳ್ಳುತ್ತಾ ಇದ್ದೇನೆ. ಕೆಲವೊಂದು ಕಛೇರಿಗಳಲ್ಲಿ ಆತ್ಮವಿಮರ್ಶೆ ಮಾಡಿಕೊಂಡು ಹೊಸ ಕೆಲಸ ಮಾಡುವಂಥ ಸರ್ಕಾರ ಬಂದಿದೆ ಎನ್ನುವಂಥ ಭಾವನೆ ಮಾಡಿಸಲಿಕ್ಕೆ ಕಂದಾಯ ಇಲಾಖೆ, ಆರೋಗ್ಯ ಇಲಾಖೆ, ರಸ್ತೆ ಸಾರಿಗೆ ಅಂತಹ ಕಡೆಗಳಲ್ಲಿ ತಕ್ಷಣ ತನಿಖೆ ನಡೆಸಿ ಆಶಾದಾಯಕವಾದ ವಾತಾವರಣ ನಿರ್ಮಿಸುವಂಥ ಕೆಲಸ ಆಗಬೇಕು. ಇವತ್ತಿನ ದಿವಸ ಅನೇಕ ಕಡೆಗಳಲ್ಲಿ ಕೆಲಸ ಸ್ಥಗಿತವಾಗಿದೆ. ಉದಾಹರಣೆಗೆ ಶಿರೂರು ಮತ್ತು ಪಡುವರಿ ಈ ಎರಡು ಗ್ರಾಮಗಳಲ್ಲಿ ೬ ವರ್ಷಗಳ ಹಿಂದೆ ಪ್ರಾರಂಭವಾದ ಕುಡಿಯುವ ನೀರಿನ ಕಾಮಗಾರಿ ಇಲ್ಲಿಯವರೆಗೆ ಪೂರ್ತಿ ಆಗಿಲ್ಲ, ಅದಕ್ಕೆ ಬೇಕಾದ ಪೈಪುಗಳನ್ನು ಹಾಕಿಲ್ಲ, ನೀರಿನ ಸೋರ್ಸನ್ನು ನಿಶ್ಚಯ ಮಾಡಲಿಲ್ಲ. ಈ ಬಗ್ಗೆ ಅನೇಕ ಬಾರಿ ಕೇಳಿ ಕೊಂಡರೂ ಮಾನ್ಯ ಸಚಿವರು ಆಶ್ವಾಸನೆಗಳ ಮೇಲೆ ಆಶ್ವಾಸನೆಗಳನ್ನು ಕೊಟ್ಟರೂ ಕೂಡ ಒಂದು ಇಂಚೂ ಕೆಲಸ ಮುಂದುವರಿಯಲಿಲ್ಲ. ಇನ್ನು ಮುಂದೆ ಇಂತಹ ಕೆಲಸ ನಡೆಯಬಾರದು ಎಂದು ನನ್ನ ಜ್ಞಾಪನೆ. ಅದೇ ರೀತಿ ಸಹಕಾರ ಸಂಘಗಳಿಗೆ ಹಿಂದಿನ ಸರ್ಕಾರ ಪೂರ್ತಿ ಬಡ್ಡಿ ರಿಯಾಯಿತಿ ಹಾಗೂ ಆಮೇಲೆ ೭ ಪರ್ಸೆಂಟ್ ಬಡ್ಡಿ ರಿಯಾಯಿತಿ ಮಾಡಿತು. ಆದರೆ ನಮ್ಮ ಸಹಕಾರ ಸಂಘಗಳಿಗೆ ಡಿಸಿಸಿ ಬ್ಯಾಂಕುಗಳಿಗೆ ಕೊಡಬೇಕಾದ ರಿಯಾಯಿತಿ ಹಣ ಕೋಟ್ಯಾಂತರ ರೂಪಾಯಿಗಳನ್ನು ಇನ್ನೂ ಕೊಟ್ಟಿಲ್ಲ. ಪರಿಣಾಮವಾಗಿ ಇವತ್ತಿನ ದಿವಸ ಆ ಸಂಸ್ಥೆಗಳು ಸ್ಥಗಿತವಾಗತಕ್ಕ ಪರಿಸ್ಥಿತಿ ಬಂದಿದೆ. ಇದರ ಕುರಿತು ಚಿಂತನೆ ಮಾಡಬೇಕು. ಸಹಕಾರ ಸಂಘಗಳಿಗೆ ರಿಕವರಿ ಆಗಬೇಕು. ಪ್ರತಿ ವರ್ಷ ರಿಕವರಿ ಆಗದೇ ಹೋದರೆ ಸಹಕಾರಿ ಸಂಘಗಳು ಸಾಲವನ್ನು ಪುನಃ ಕೊಡಲಿಕ್ಕೆ ಆಗುವುದಿಲ್ಲ. ಆಮೇಲೆ ಸಹಕಾರ ಸಂಸ್ಥೆಗಳಿಗೆ ಚುನಾವಣೆಗಳು ಬರುತ್ತಾ ಇದೆ. ಸಹಕಾರ ಸಂಘಗಳ ಸಿಬ್ಬಂದಿ ಅನೇಕ ತಿಂಗಳಿಂದ ಮುಷ್ಕರ ಹೂಡಿದ್ದಾರೆ. ಇದರ ಕುರಿತು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಿ ಮುಷ್ಕರವನ್ನು ಆದಷ್ಟು ಬೇಗ ಮುಗಿಸುವಂಥ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕು, ಸಂಧಾನ ನಡೆಸಬೇಕು ಎಂದು ನನ್ನ ವಿಜ್ಞಾಪನೆ. ಪಂಚಾಯಿತಿಗಳಿಗೆ ಸಂಬಂಧಪಟ್ಟ ನೌಕರರಿಗೆ ಯಾವ ಸೌಲಭ್ಯವಿಲ್ಲದೇ ಇರುವ ಬಗ್ಗೆ ಅವರ ಸಮಸ್ಯೆ ನೆನಗುದಿಗೆ ಬಿದ್ದಿದೆ. ಇದರ ಕುರಿತು ಚಿಂತನೆ ಮಾಡಬೇಕು.

ಪುರಸಭೆಗಳಿಗೆ ಚುನಾವಣೆ ನಡೆಸುತ್ತೇವೆ ಎಂದು ಹೇಳಿರುವುದು ಸಂತೋಷದಾಯಕವಾದ ವಿಚಾರ ಪುರಸಭೆಗಳಿಗೆ ಚುನಾವಣೆ ನಡೆಸುವಾಗ ನನ್ನ ಒಂದು ಅರಿಕೆ ಇದೆ. ಹಿಂದಿನ ಸರ್ಕಾರ ಮಂಡಲ ಪಂಚಾಯಿತಿ ಕಾನೂನು ಪ್ರಕಾರ ಹನ್ನೆರಡೂವರೆ ಸಾವಿರ ಜನಸಂಖ್ಯೆ ಇದ್ದಲ್ಲಿ ಒಂದು ಮಂಡಲ ಪಂಚಾಯಿತಿಯನ್ನು ರಚಿಸುತ್ತಾ ಇದ್ದರು. ೧-೨-೩-೪-೫ ಗ್ರಾಮಗಳನ್ನು ಸೇರಿಸಿ ಮಾಡುತ್ತಾ ಇದ್ದರು. ಆದರೆ ಪುರಸಭೆಯನ್ನು ಮಂಡಲ ಪಂಚಾಯಿತಿಯಾಗಿ ಪರಿವರ್ತಿಸುವಾಗ ೧೦ ಸಾವಿರ ಜನಸಂಖ್ಯೆ ಎಂದು ನಿರ್ಬಂಧ ಹಾಕಿದರು. ಸರ್ಕಾರದ ಒಂದೇ ವಿಚಾರದಲ್ಲಿ ಎರಡು ವಿಧವಾದ ನೀತಿ. ಇದು ಸಮಂಜಸವಲ್ಲ ಎಂದು ಕಳೆದ ಬಾರಿ ಹೇಳಿದರೂ ಕೂಡ ಹಾಗೆಯೇ ಇದೆ. ಉದಾಹರಣೆಗೆ ಬೈಂದೂರು-ಸಾಲಿಗ್ರಾಮದ ಪುರಸಭೆಗಳಿವೆ. ಅದು ಗುಡ್ಡಗಾಡು ಪ್ರದೇಶ. ಹಳ್ಳಿಯ ಬಡ ಜನರು ಇರುವಂಥ ಪ್ರದೇಶ. ಹರಿಜನ ಗಿರಿಜನರು ಹೆಚ್ಚಿನ ಸಂಖ್ಯೆಯಲ್ಲಿ ಇರುವಂಥ ಪ್ರದೇಶ. ಅಂಥಾದ್ದರಲ್ಲಿ ಅದು ಪುರಸಭೆಯಾಗಿ ಅನ್ಯಾಯವಾಗಿದೆ. ೧೯೮೧ರ ಸೆನ್ಸಸ್ ಪ್ರಕಾರ ಹತ್ತು ಸಾವಿರಕ್ಕಿಂತ ೨೦೦-೩೦೦ ಜನಸಂಖ್ಯೆ ಜಾಸ್ತಿಯಿದೆ ಎಂದು ಇನ್ನೂ ಪುರಸಭೆಯಾಗಿ ಇಟ್ಟಿರುವುದು ಸರಿಯಲ್ಲ. ಆದ್ದರಿಂದ ಮುಂದೆ ಚುನಾವಣೆ ಮಾಡುವ ಮೊದಲೇ ಸರ್ಕಾರ ಚಿಂತನೆ ಮಾಡಿ ಅದನ್ನು ಮಂಡಲ ಪಂಚಾಯಿತಿಯಾಗಿ ಪರಿವರ್ತಿಸಿ ಚುನಾವಣೆಗಳನ್ನು ನಡೆಸಬೇಕು ಎಂದು ಹೇಳುತ್ತೇನೆ, ನಂತರ ಕೃಷಿ ಉತ್ಪಾದನಾ ಮಾರುಕಟ್ಟೆ ಸಮಿತಿಗಳಿಗೆ ಮಾಡಬೇಕಾದ ಚುನಾವಣೆಯೂ ಮುಂದೆ ಹೋಗಿದೆ. ಅದರ ಚುನಾವಣೆಯನ್ನೂ ಮಾಡಬೇಕು.

ಅದೇ ರೀತಿ ಸಹಕಾರ ಸಂಘಗಳಿಗೆ ಚುನಾವಣೆ ಮಾಡುವಾಗ, ಸಾಲ ವಸೂಲಾತಿಯ ಕಾಲವನ್ನು ಬಿಟ್ಟು ಚುನಾವಣೆ ಮಾಡಬೇಕೆಂದು ಹೇಳುತ್ತೇನೆ.

ಭೂಸುಧಾರಣೆ ಕಾನೂನು ಕರ್ನಾಟಕ ರಾಜ್ಯದಲ್ಲಿ ಬಂದಂತಹ ಒಂದು ಕ್ರಾಂತಿಕಾರವಾದ ಕಾನೂನು. ಅನೇಕ ವರ್ಷಗಳಿಂದ ರೈತ ಯಾವ ದಾಖಲೆಯೂ ಇಲ್ಲದೆ ಇದ್ದರೂ ಭೂಮಿಯ ಹಕ್ಕು ಪಡೆಯುವಂತಹ ಒಂದು ಮಹತ್ತರ ಬದಲಾವಣೆ ಇದರಿಂದ ಆಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ರೈತರಿಗೆ ಈ ಕಾನೂನಿನಿಂದ ಅನುಕೂಲವಾಗಿದೆ. ಭೂಮಿಯ ದಣಿಗಳು ಯಾವುದೇ ರೀತಿಯಿಂದಲೂ ಭೂಮಿಯನ್ನು ಕಸಿದುಕೊಳ್ಳುವುದಕ್ಕೆ ಅವಕಾಶವಾಗದೆ, ಭೂಮಿಯ ಹಕ್ಕು ರೈತರಿಗೆ ಸಿಕ್ಕಿದೆ. ಆದರೆ ಅಪೀಲು ಪ್ರಾಧಿಕಾರವನ್ನು ರಚಿಸಲಾಯಿತು, ಹೈಕೋರ್ಟಿಗೆ ಹೋಗತಕ್ಕ ಕೇಸುಗಳನ್ನು ತಪ್ಪಿಸುವ ದೃಷ್ಟಿಯಿಂದ ಅಪೀಲು ಪ್ರಾಧಿಕಾರವನ್ನು ಮಾಡಲಾಯಿತು, ಹಿಂದಿನ ಸರ್ಕಾರದ ಜನತಾ ಪಕ್ಷದ ಅನೇಕ ಮಿತ್ರರು ಕೂಡ ಇದನ್ನು ವಿರೋಧಿಸಿದ್ದರು. ಶ್ರೀ ರಮೇಶ್‌ಕುಮಾರ್‌ರವರು ಇಂಥ ಕಾನೂನನ್ನು ತರಬಾರದೆಂದು ಹೇಳಿದರು. ಇವತ್ತು ಏನಾಗಿದೆ ಅಂದರೆ ಅಪೀಲು ಪ್ರಾಧಿಕಾರದ

ಪರಿಣಾಮವಾಗಿ ಯಾರಿಗೆ ಆರ್.ಟಿ.ಸಿ. ದಾಖಲೆ ಸಿಗುತ್ತಿಲ್ಲ. ಗೇಣಿ ರಶೀದಿ ಇಲ್ಲ. ಅಂಥವರಿಗೆ ಭೂಮಿಯ ಹಕ್ಕು ಸಿಗುತ್ತಿಲ್ಲ. ಇದರಿಂದ ಸಹಸ್ರಾರು ಜನ ನಿರ್ಗತಿಕರಾಗುತ್ತಿದ್ದಾರೆ. ಮೊದಲು ಅಪೀಲು ಪ್ರಾಧಿಕಾರವನ್ನು ವಜಾ ಮಾಡಬೇಕು ನನ್ನ ಮನವಿ ಕಾನೂನು ತೊಡಕು ಇದ್ದರೆ ಅಮೆಂಡ್‌ಮೆಂಟ್ ಮಾಡಿ. ಈಗಂತೂ ಇದರ ಕೆಲಸವನ್ನು ಸ್ಥಗಿತಗೊಳಿಸಬೇಕು. ಅಲ್ಲಿರತಕ್ಕ ಸ್ಪೆಷಲ್ ಡಿ.ಸಿ.ಯವರನ್ನು ವರ್ಗಾವಣೆ ಮಾಡಿ. ಇಲ್ಲದೇ ಹೋದರೆ, ಸಹಸ್ರಾರು ರೈತರು ಬೀದಿ ಪಾಲಾಗುವಂತ ಪರಿಸ್ಥಿತಿ ಬರುತ್ತದೆ. ೧೦–೧೫ ವರ್ಷಗಳ ಹಿಂದೆ ಗೇಣಿದಾರರಿಗೆ ಹಕ್ಕು ಸಿಗುವಂಥ ಒಂದು ಕ್ರಾಂತಿಕಾರವಾದ ಕಾನೂನು ನಿರ್ಮಾಣವಾದದು ಉಳಿಯಬೇಕಾಗಿದೆ.

ನಮ್ಮ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭವಾಯಿತು. ಬೇಕಾದಷ್ಟು ಕಬ್ಬು ಬೆಳೆಯುವಂಥ ರೈತರು ಇದ್ದರು. ಕಬ್ಬನ್ನು ಕೂಡ ಬೆಳೆದರು. ಎರಡು ವರ್ಷಗಳ ಹಿಂದೆ ಸಾಕಷ್ಟು ಪ್ರಮಾಣದಲ್ಲಿ ಕಬ್ಬನ್ನು ಒದಗಿಸಿ ಆಶಾದಾಯಕ ಪರಿಸ್ಥಿತಿ ಕೂಡ ಬಂತು. ಕಳೆದ ವರ್ಷದಿಂದ ನಾಮಕರಣ ಮಾಡಿರುವ ಆಡಳಿತ ಮಂಡಲಿಯವರ ನಿಷ್ಕ್ರಿಯತೆಯಿಂದ ಕಬ್ಬು ಕೊಟ್ಟ ರೈತರಿಗೆ ಹಣ ಕೊಟ್ಟಿಲ್ಲ. ಇದರಿಂದ ರೈತ ವರ್ಗದಲ್ಲಿ ಒಂದು ರೀತಿಯ ನಿರಾಶಾಭಾವನೆ ಬೆಳೆದಿದೆ. ಇತ್ತೀಚೆಗೆ ಸರ್ಕಾರದವರು ೫೫ ಲಕ್ಷ ರೂಪಾಯಿ ರಿಲೀಸ್ ಮಾಡಿದ್ದಾರೆಂದು ಕೇಳಿದ್ದೇನೆ. ಅವರಿಗೆ ಒಂದು ಕೋಟಿ ಕೊಡಬೇಕಾಗುತ್ತದೆ. ಬರೀ ರಿಪೇರಿಗಾಗಿ ೫೦ ಲಕ್ಷ ಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚಿಗೆ ಮಾತ್ರ ಹಣ ಕೊಡಿ ಎಂದು ಹೇಳುವುದಿಲ್ಲ. ಹಿಂದೆ ಬೇರೆ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ನೆರವು ನೀಡಿದಂತೆ ಇದಕ್ಕೂ ನೀಡಬೇಕು. ಸ್ಥಾಪನೆ ಮಾಡಿದಂತೆ ಸಕ್ಕರೆ ಕಾರ್ಖಾನೆಗಳು ಮುಳುಗುವಂತ ಪರಿಸ್ಥಿತಿಗೆ ಬರಬಾರದು. ಸರ್ಕಾರ ಕೂಡಲೇ ಈ ವಿಚಾರದಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ವರಾಹಿ ಯೋಜನೆ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಹಿಂದಿನ ಸರ್ಕಾರದವರು ಕೇಂದ್ರಕ್ಕೆ ಮನವಿ ಸಲ್ಲಿಸುತ್ತೇವೆಂದು ಹೇಳಿದರೂ ಮನವಿ ಸಲ್ಲಿಸಲಿಲ್ಲ. ಅರಣ್ಯ ತೆಗೆಯಲಿಕ್ಕಾಗಿ ಪರ್ಮಿಷನ್ ಕೂಡ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಆ ಯೋಜನೆಯನ್ನು ಕುರಿತು ಚಿಂತನೆ ಮಾಡಬೇಕಾಗಿದೆ. ಎರಡು ತಾಲ್ಲೂಕುಗಳ ಸುಮಾರು ೩೦,೦೦೦ ಎಕರೆಗಳಿಗೆ ನೀರು ಸಿಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಉದ್ದಕ್ಕೂ ಸಮುದ್ರದ ಕೊರೆತ ಇದೆ. ಕೇರಳದಲ್ಲಿ ಈ ಬಗ್ಗೆ ಒಳ್ಳೆಯ ಕಾರ್ಯಕ್ರಮಗಳು ನಡೆದಿವೆ. ಚಿಕ್ಕ ಚಿಕ್ಕ ಬಂದರುಗಳ ಅಭಿವೃದ್ಧಿಗೆ ಸಾಕಷ್ಟು ಅವಕಾಶ ಇದೆ. ಮಲ್ಪೆ ಬಂದರಿನಲ್ಲಿ ಸಾಕಷ್ಟು ಒತ್ತಡ ಇದೆ. ಈ ಬಗ್ಗೆ ಸರ್ಕಾರದವರು ಚಿಂತನೆ ಮಾಡಿಲ್ಲ. ಕುಂದಾಪುರ್, ಶಿರೂರು, ಮೂಲ್ಕಿ, ಹಂಗಾರ್‌ಕಟ್ಟೆ ಇತ್ಯಾದಿ ಬಂದರುಗಳು. ಇವುಗಳ ಅಭಿವೃದ್ಧಿಗೂ ಸಹ ಎಂಟನೇ ಯೋಜನೆಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳುವ ಕೆಲಸ ಆಗಬೇಕು. ಇನ್ನು ಬೈಂದೂರ್‌ನಲ್ಲಿ ಸಬ್‌ಸ್ಟೇಷನ್ ಬೇಕೆಂದು ಬಹಳ ವರ್ಷಗಳಿಂದ ಬೇಡಿಕೆ ಇದೆ. ಕಳೆದ ವರ್ಷ ಮಂಜೂರು ಆದರೂ ಸಹ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಮಂಜೂರಾದ ಕೆಲಸ ಪ್ರಾರಂಭವಾಗಲಿಕ್ಕೆ ಎಷ್ಟು ವಿಳಂಬ ನಡೆಯುತ್ತಿದೆ ಎನ್ನುವುದು ಜನತೆಗೆ ಗೊತ್ತಾಯಿತು. ಜನರು ರೊಚ್ಚಿಗೆದ್ದರು ಪರಿಣಾಮ ಎಲ್ಲರಿಗೂ ಗೊತ್ತಿದೆ ಇದನ್ನು ನಾನು ಮತ್ತೆ ಹೇಳುತ್ತಿದ್ದೇನೆ. ತಾಲ್ಲೂಕು ಮತ್ತು ಜಿಲ್ಲೆಗಳ ಪುನರ್‌ರಚನೆಗಾಗಿ ಎರಡೆರಡು ಆಯೋಗಗಳಾಗಿ ರಿಪೋರ್ಟ್‌ಗಳು ಬಂದವು. ಜನರು ಏನು ನಿರೀಕ್ಷೆ ಮಾಡಿದ್ದರೋ ಅದು ಆಗಲಿಲ್ಲ. ಬರೀ ರಿಪೋರ್ಟ್ ಆದರೆ ಏನು ಆಗುತ್ತದೆ, ಕೆಲಸಗಳು ಆಗ ವಂಥಾದ್ದು ಆಗಬೇಕು. ಅದಕ್ಕಾಗಿ ಹೊಸ ಆಶೋತ್ತರಗಳಿಗೆ ಒಂದು ಹುರುಪಿನಿಂದ ಸ್ಪಂದಿಸುವಂಥ ಹೊಸ ಸರ್ಕಾರ ಬೇಕೆಂದು ಜನರು ನಿರೀಕ್ಷೆ ಮಾಡಿ ಹೊಸ ಸರ್ಕಾರವನ್ನು ತಂದರು. ಕವಿ ಗೋಪಾಲಕೃಷ್ಣ ಅಡಿಗ ಅವರು ಕಟ್ಟುವೆವು ನಾವು ಹೊಸ ನಾಡೊಂದನ್ನ ರಸದ ಬೀಡೊಂದನ್ನು ಎಂದು ಹೇಳಿರುವ ಹಾಗೆ ನಾವು ಹೊಸ ನಾಡನ್ನು ಕಟ್ಟಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸದಸ್ಯರಿಂದ ಪ್ರಮಾಣ ವಚನ

ಅಧ್ಯಕ್ಷರು.— ಈಗ ಕೆ. ಪ್ರತಾಪಚಂದ್ರಶೆಟ್ಟಿಯವರು ಪ್ರಮಾಣ ವಚನವನ್ನು ಸ್ವೀಕರಿಸುವುದು.

(ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿಯವರು ಪ್ರಮಾಣ ವಚನವನ್ನು ಸ್ವೀಕರಿಸಿದರು)